ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 27 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 71 | ಪುಟಗಳು: 12 + IV

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಜು.16ಕ್ಕೆ, ಸಮಾಜಮುಖಿ ಕಾರ್ಯಗಳೊಂದಿಗೆ ವಿಜಯ್ ಹುಟ್ಟುಹಬ್ಬ ಆಚರಣೆ: ಶಾಸಕ ಜಿ.ಟಿ.ದೇವೇಗೌಡ



ಸುದ್ದಿಗೋಷ್ಠಿಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು.

ಕೆಆರ್.ನಗರ, ಜೂ.26– ಮುಡಾ ಮಾಜಿ ಅಧ್ಯಕ್ಷರು ಆದ ಉಪ್ಪಾರ ಸಮಾಜದ ಮುಖಂಡ ಹೆಚ್.ಎನ್.ವಿಜಯ್ ಅವರ 50ನೇ ಹುಟ್ಟುಹಬ್ಬವನ್ನು ಜು.16ರಂದು ಅರ್ಥಪೂರ್ಣವಾಗಿ ಆಚರಿಸಲು ಅಭಿಮಾನಿಗಳು ತೀರ್ಮಾನಿಸಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ತಾಲೂಕಿನ ಹರದನಹಳ್ಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2 ದಶಕಗಳಿಂದ ಸಮಾಜಮುಖಿ ಕೆಲಸ ಮಾಡಿಕೊಂಡು ಬರುತ್ತಿರುವ ನಮ್ಮೆಲ್ಲರ ನೆಚ್ಚಿನ ನಾಯಕ ಹೆಚ್.ಎನ್.ವಿಜಯ್ ಅವರು ಜಾತ್ಯಾತೀತ ಮತ್ತು ಪಕ್ಷಾತೀತಾ ರಾಜಕಾರಣ ಮಾಡಿಕೊಂಡು ಬರುತ್ತಿದ್ದಾರೆ ಎಂದರು. ಹಲವು ರಾಜಕೀಯ ನಾಯಕರು ಮತ್ತು ಹಣವುಳ್ಳವರು ತಮ್ಮ ಜನ್ಮ ದಿನಾಚರಣೆಯನ್ನು ಆಡಂಬರದಿಂದ ಮಾಡಿಕೊಳ್ಳುತ್ತಾರೆ. ಆದರೆ ಹೆಚ್.ಎನ್.ವಿಜಯ್ ತಮ್ಮ ಜನ್ಮ ದಿನವನ್ನು ಹಲವು ಸೇವಾ ಕಾರ್ಯಗಳ ಜೊತೆಗೆ ಸಮಾಜದಲ್ಲಿ ನೊಂದವರು ಮತ್ತು ಪ್ರತಿಭಾವಂತರನ್ನು ಪುರಸ್ಕರಿಸಿ ಗೌರವಿಸುವುದರ ಮೂಲಕ ಆಚರಿಸಿಕೊಳ್ಳುತ್ತಿರುವುದು ಪ್ರಶಂಸನೀಯ ಎಂದರು.

50 ವರ್ಷಗಳ ಸಾರ್ಥಕ ಜೀವನ ನಡೆಸಿರುವ ಹೆಚ್.ಎನ್.ವಿಜಯ್ ತಮ್ಮ ಜೀವನದುದ್ದಕ್ಕೂ ಸಮಾಜಮುಖಿ ಕಾರ್ಯಗಳ ಜೊತೆಗೆ ಸಾವಿರಾರು ಮಂದಿಗೆ ಉದ್ಯೋಗ ನೀಡುವ ಮೂಲಕ ಅವರ ಜೀವನಕ್ಕೆದಾರಿ ದೀಪವಾಗಿದ್ದಾರೆ ಎಂದು ಕೊಂಡಾಡಿದರು.

ಅವರ ಜನ್ಮ ದಿನದಂದು 51 ಸ್ವಾಮೀಜಿಗಳಿಗೆ ಭಗೀರಥ ಪೀಠದ ಪರಮೋಚ್ಚ ಗುರುಗಳಾದ ಪ್ರಸನ್ನಾನಂದಪುರಿ ಶ್ರೀಗಳ ಸಾನಿಧ್ಯದಲ್ಲಿ ಗೌರವ ಸಲ್ಲಿಸಲಿದ್ದು, ಇದರೊಂದಿಗೆ ಗರ್ಭಿಣಿಯರಿಗೆ ಬಾಗಿನ ನೀಡಲಾಗುತ್ತದೆ ಎಂದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಎಲ್ಲಾ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವುದರೊಂದಿಗೆ ಹಳೇ ಮೈಸೂರು ಪ್ರಾಂತ್ಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕರೆಸಿ ಅವರನ್ನು ಗೌರವಿಸುವ ಕೆಲಸ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಜನ್ಮ ದಿನಾಚರಣೆಯಲ್ಲಿ 20 ಸಾವಿರ ಮಂದಿಗೆ ಮಾಂಸಹಾರ ಮತ್ತು ಸಸ್ಯಹಾರ ಭೋಜನದ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕ್ರಮಕ್ಕೆ ಎಲ್ಲಾ ಸಮಾಜದ ಮುಖಂಡರು ಮತ್ತು ಸರ್ವ ಪಕ್ಷಗಳ ಮಾನ್ಯರು ಆಗಮಿಸಿ ಅವರನ್ನು ಆಶೀರ್ವಾದ ಮಾಡಬೇಕೆಂದು ಕೋರಿಕೊಂಡರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಮಾತನಾಡಿ, 50 ವಸಂತಗಳನ್ನು ಪೂರೈಸಿರುವ ನನ್ನ ಜನ್ಮ ದಿನಾಚರಣೆಯನ್ನು ಹುಟ್ಟೂರಿನ ಜನರು ಮತ್ತು ಅಭಿಮಾನಿಗಳು ಅರ್ಥಪೂರ್ಣವಾಗಿ ಆಚರಿಸುತ್ತಿದ್ದು, ಈ ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಮಠಾಧೀಶರು, ರಾಜಕಾರಣಿಗಳು ಹಾಗೂ ನನ್ನ ನಲ್ಮೆಯ ಒಡನಾಡಿಗಳು ಭಾಗವಹಿಸುತ್ತಿದ್ದು, ಪಕ್ಷಾತೀತವಾಗಿ ಆಗಮಿಸಿ ಆಶೀರ್ವದಿಸಬೇಕೆಂದು ಮನವಿ ಮಾಡಿಕೊಂಡರು.


ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮು, ಹರದನಹಳ್ಳಿ ಮಾಜಿ ಅಧ್ಯಕ್ಷರಾದ ದೀಪು, ಮಂಜುಳ, ಸದಸ್ಯರಾದ ಜಯರಾಮು, ಮುಖಂಡರಾದ ರಾಜೀವ್, ನಂದೀಶ್, ತಿಮ್ಮೇಗೌಡ, ಹೇಮಂತ್, ನಿಂಗಪ್ಪ, ದೇವೇಗೌಡ, ಕುಮಾರ್ ಮತ್ತಿತರರಿದ್ದರು.

ಜೆಡಿಎಸ್ ವರಿಷ್ಠರು ಸೂಚನೆ ನೀಡದ ಹಿನ್ನೆಲೆ

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಿಂದ ದೂರ ಉಳಿದಿದ್ದೇನೆ


ಕೆ.ಆರ್.ನಗರ, ಜೂ.26– ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನಡೆಸುವಂತೆ ಜೆಡಿಎಸ್ ವರಿಷ್ಠರು ಸೂಚನೆ ನೀಡದ ಹಿನ್ನೆಲೆಯಲ್ಲಿ ನಾನು ಚುನಾವಣಾ ಪ್ರಕ್ರಿಯೆಯಿಂದ ದೂರ ಉಳಿದಿದ್ದೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ ನೀಡಿದರು.

ಹರದನಹಳ್ಳಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರದಲ್ಲಿ ರಾಜಕೀಯ ಬೆರೆತರೆ ಆ ಕ್ಷೇತ್ರ ಸರ್ವನಾಶವಾಗುತ್ತದೆ. ಕಳೆದ 50 ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿರುವ ನನಗೆ ರಾಜಕೀಯ ಮಜಲು ಮತ್ತು ಸಹಕಾರದ ಬಗ್ಗೆ ತಿಳಿದಿದ್ದು, ನನಗೆ ಆ ಕ್ಷೇತ್ರ ಸಾಕಷ್ಟು ಪಾಠ ಕಲಿಸಿದೆ. ಕಳೆದ ಅವಧಿಯಲ್ಲಿ ಬ್ಯಾಂಕ್ ಅಧ್ಯಕ್ಷನಾಗಿದ್ದ ಜಿ.ಡಿ.ಹರೀಶ್‌ಗೌಡ ರೈತಪರ ಕೆಲಸ ಮಾಡಿ ನಾಡಿಗೆ ಮಾದರಿಯಾಗಿದ್ದಾನೆ ಎಂದು ಪ್ರಶಂಸೆ ವ್ಯಕ್ತಪಡಿಸಿದ ಅವರು ಮುಂದಿನ ಅವಧಿಗೆ ಆಯ್ಕೆಯಾಗುವವರು ರಾಜಕೀಯ ಮಾಡದೆ ಜನಸೇವೆ ಮಾಡಿ ಎಂದು ಸಲಹೆ ನೀಡಿದರು.










ಮೈಸೂರು ಮಿತ್ರ



ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಜೂನ್ 27 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 71 | ಪುಟಗಳು: 12+IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಸೆಪ್ಟೆಂಬರ್ ಕಳೀಲಿ...

• ರಾಜ್ಯ ರಾಜಕಾರಣದಲ್ಲಿ ಮಹತ್ತರ ಬದಲಾವಣೆ ಸುಳಿವು ನೀಡಿದ ಸಹಕಾರ ಸಚಿವ ಕೆ.ಎನ್.ರಾಜಣ್ಣ • ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಮೊದಲು ಮುಖ್ಯಮಂತ್ರಿ ಆದಾಗ ಒಂದೇ ಪವರ್ ಪಾಯಿಂಟ್ ಇತ್ತು; ಈಗ ಸಾಕಷ್ಟು ಶಕ್ತಿ ಕೇಂದ್ರಗಳಿವೆ

ಮೈಸೂರು, ಜೂ.26– ಸೆಪ್ಟೆಂಬರ್ ಕಳೀಲಿ... ರಾಜ್ಯ ರಾಜಕಾರಣದಲ್ಲಿ ಭಾರಿ ಬದಲಾವಣೆ ಆಗಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಚ್ಚರಿ ಭವಿಷ್ಯ ನುಡಿದಿದ್ದಾರೆ.



ಕೆ.ಎನ್. ರಾಜಣ್ಣ

ವಿಧಾನಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎನ್. ರಾಜಣ್ಣ ಅವರು, ಸೆಪ್ಟೆಂಬರ್ ನಂತರ ರಾಜ್ಯದಲ್ಲಿ ಹೊಸ ರಾಜಕೀಯ ಬೆಳವಣಿಗೆಗಳು ನಡೆಯಲಿವೆ. ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಸಾಕಷ್ಟು ಶಕ್ತಿ ಕೇಂದ್ರಗಳಿದ್ದು, ಈ ವರ್ಷದ ಕೊನೆಯಲ್ಲಿ ರಾಜ್ಯ ರಾಜಕೀಯದಲ್ಲಿ ಹೊಸ ಬೆಳವಣಿಗೆಗಳಾಗುತ್ತವೆ ಎಂದು



ಮುಖ್ಯಮಂತ್ರಿ ಸಿದ್ದರಾಮಯ್ಯ

> ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ನಡೆಯಬೇಕಿದ್ದ ಮೈಸೂರು ದಸರಾ ಉನ್ನತ ಮಟ್ಟದ ಸಭೆ ಸೇರಿದಂತೆ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳನ್ನು ರದ್ದು ಮಾಡಿ ತಮ್ಮ ಆಪ್ತ ಸಚಿವರು ಹಾಗೂ ಹಿರಿಯ ಶಾಸಕರೊಂದಿಗೆ ಗೌಪ್ಯ ಸಭೆ ನಡೆಸಿದರು.

ಹೇಳಿದ್ದಾರೆ. ರಾಜ್ಯದಲ್ಲಿ ಸಚಿವ ಸಂಪುಟ ಪುನರ್‌ರಚನೆ ಮತ್ತು ನಾಯಕತ್ವ ಬದಲಾವಣೆ ಆಗಲಿದೆ ಎಂಬ ಊಹಾಪೋಹಗಳ ನಡುವೆ ಕೆ.ಎನ್.ರಾಜಣ್ಣ ಅವರ ಈ ಹೇಳಿಕೆ ಹೆಚ್ಚು ಮಹತ್ವ ಪಡೆದುಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು 2013–18ರಲ್ಲಿ (ಮೊದಲ ಅವಧಿಯ ಮುಖ್ಯಮಂತ್ರಿ) ಇದ್ದಂತೆ ಈಗ ಇಲ್ಲ ಎಂಬ ಕೆಲವು ಶಾಸಕರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಅವರ ಮೇಲೆ ಒತ್ತಡವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ರಾಜಣ್ಣ, ಮೊದಲ ಅವಧಿ (2013–18) ಯಲ್ಲಿ ಕೇವಲ ಒಂದು ಶಕ್ತಿ ಕೇಂದ್ರವಿತ್ತು. ಆದರೆ ಈಗ ಒಂದು... ಎರಡು... ಮೂರು... ಎಷ್ಟು ಬೇಕೋ ಅಷ್ಟು ಶಕ್ತಿ ಕೇಂದ್ರಗಳಿವೆ ಎಂದು ತಿಳಿಸಿದರು. ಹಾಗಾಗಿ ಈಗ ಹಲವು ಅಧಿಕಾರ ಕೇಂದ್ರಗಳಿರುವಾಗ

■9ನೇ ಪುಟಕ್ಕೆ

ಬದಲಾವಣೆಯೇನೋ ಆಗಲಿದೆ: ಆದರೆ, ಭಾರಿ ಬದಲಾವಣೆ ಏನೂ ಅಲ್ಲ!!

ಬೆಂಗಳೂರು, ಜೂ.26– ಸಚಿವ ಕೆ.ಎನ್.ರಾಜಣ್ಣ ಸೆಪ್ಟೆಂಬರ್ ನಂತರ ರಾಜ್ಯದಲ್ಲಿ ಮಹತ್ತರ ರಾಜಕೀಯ ಬೆಳವಣಿಗೆ ಆಗಲಿದೆ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ ನೀಡಿ, ವರ್ಷಾಂತ್ಯಕ್ಕೆ ರಾಜ್ಯ ಕಾಂಗ್ರೆಸ್ ಆಡಳಿತದಲ್ಲಿ ಬದಲಾವಣೆಯೇನೋ ಆಗಲಿದೆ. ಆದರೆ ಸಿದ್ದರಾಮಯ್ಯ ನಾಯಕತ್ವಕ್ಕೆ ಯಾವುದೇ ಧಕ್ಕೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಜೊತೆ ನಾನೂ ದೆಹಲಿ ಪ್ರವಾಸದಲ್ಲಿದ್ದೆ. ಬಹಳಷ್ಟು ರಾಜಕೀಯ ವಿಷಯಗಳು ಆಂತರಿಕವಾಗಿ ಚರ್ಚೆಯಾಗಿವೆ. ಅವುಗಳನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಆದರೆ ವರ್ಷಾಂತ್ಯಕ್ಕೆ ಬದಲಾವಣೆಯೇನೋ ಆಗಲಿದೆ. ಹಾಗೆಂದು ಭಾರಿ ಬದಲಾವಣೆ ಏನೂ ಇರುವುದಿಲ್ಲ. ಸರ್ಕಾರದ ಮಟ್ಟದಲ್ಲಿ ಸಚಿವರ ಬದಲಾವಣೆ ಆಗಬಹುದು. ನಾಯಕತ್ವದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ ಎಂಬ ಸುಳಿವು ನೀಡಿದ್ದಾರೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಯಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಇನ್ನೂ ಯುದ್ಧ ಶುರುವಾಗಿಲ್ಲ. ಆರಂಭವಾದಾಗ ಶಸ್ತ್ರ ಹಿಡಿಯೋಣ ಎಂದು ಮಾರ್ಮಿಕವಾಗಿ ನುಡಿದರು. ರಾಜ್ಯ ಕಾಂಗ್ರೆಸ್ ನಾಯಕರ ಅರ್ಹತೆಯನ್ನು ವರಿಷ್ಠರು ತಿಳಿದಿದ್ದಾರೆ. ಮುಂದೆ ಅರ್ಹತೆಗೆ ತಕ್ಕಂತೆ ಅಧಿಕಾರ ಮತ್ತು ಹುದ್ದೆಗಳನ್ನು ನೀಡುತ್ತಾರೆ ಎಂದ ಜಾರಕಿಹೊಳಿ, ಬಿ.ಆರ್. ಪಾಟೀಲ್ ಎತ್ತಿರುವ ಭ್ರಷ್ಟಾಚಾರ ವಿಷಯ ವರಿಷ್ಠರ ಮಟ್ಟದಲ್ಲಿ ಚರ್ಚೆಯಾಗಿದೆ. ಅದರ ಬಗ್ಗೆ ಮುಖ್ಯಮಂತ್ರಿ ಪೂರ್ಣ ಮಾಹಿತಿಯನ್ನ ನಮ್ಮ ನಾಯಕರಿಗೆ ನೀಡಿದ್ದಾರೆ ಎಂದರು.



ಸತೀಶ್ ಜಾರಕಿಹೊಳಿ

ಮಲೆ ಮಹದೇಶ್ವರ ವನ್ಯಧಾಮದ ಐದು ಹುಲಿಗಳು ಧಾರುಣ ಸಾವು

500 ಮೀಟರ್ ವ್ಯಾಪ್ತಿಯಲ್ಲಿ ತಾಯಿ ಹುಲಿ, ನಾಲ್ಕು ಮರಿಗಳ ಕಳೇಬರ ಪತ್ತೆ

- ವಿಷ ಪ್ರಾಶನದ ಶಂಕೆ; ಸಮಗ್ರ ತನಿಖೆಗೆ ವನ್ಯಪ್ರೇಮಿಗಳ ಆಗ್ರಹ
- ಮೂರು ದಿನದಲ್ಲಿ ವರದಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ



ಹನೂರು, ಜೂ.26(ಎಂಟಿವೈ)– ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದ ಮೀಣ್ಯಂ ಅರಣ್ಯ ಪ್ರದೇಶದಲ್ಲಿ ಐದು ಹುಲಿಗಳು ಧಾರುಣ ರೀತಿ ಸಾವಿಗೀಡಾಗಿವೆ. ತಾಯಿ ಹುಲಿ, ನಾಲ್ಕು ಮರಿಗಳ ಕಳೇಬರ ಪತ್ತೆಯಾಗಿದೆ. ಕಿಡಿಗೇಡಿಗಳು ವಿಷ ಪ್ರಾಶನ ಮಾಡಿ ಹುಲಿಗಳನ್ನು ಕೊಂದಿರುವ ಬಲವಾದ ಶಂಕೆ ವ್ಯಕ್ತವಾಗಿದೆ.

ಗಾಜನೂರು ಗಸ್ತು ವಲಯದ ಮಹದೇಶ್ವರ ಬೈಲು ಎಂಬಲ್ಲಿ ಗುರುವಾರ ಬೆಳಗ್ಗೆ ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿಗೆ ಎರಡು ದಿನದ ಹಿಂದಷ್ಟೇ ಮೃತಪಟ್ಟಿರುವ ಹೆಣ್ಣು ಹುಲಿಯೊಂದರ ಕಳೇಬರ ಪತ್ತೆಯಾಗಿದೆ. ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು, ಸಿಬ್ಬಂದಿ ಸುತ್ತಮುತ್ತ ಸ್ಥಳ ಪರಿಶೀಲಿಸಿದಾಗ 500 ಮೀಟರ್ ಅಂತರದಲ್ಲಿ ಒಂದರಿಂದ ಒಂದೂವರೆ ವರ್ಷದ ಒಂದು ಗಂಡು ಹಾಗೂ ಮೂರು ಹೆಣ್ಣು ಹುಲಿ ಮರಿಗಳ ಕಳೇಬರಗಳು ಪತ್ತೆಯಾಗಿವೆ.

ಸ್ಥಳಕ್ಕೆ ಅಧಿಕಾರಿಗಳ ದೌಡು: 5 ಹುಲಿಗಳ ಸಾವಿನ ಪ್ರಕರಣ ದೇಶದ ಗಮನ ಸೆಳೆದಿದ್ದು, ಸ್ಥಳಕ್ಕೆ ಚಾಮರಾಜನಗರ ವೃತ್ತದ ಸಿಸಿಎಫ್ ಟಿ.ಹೀರಾಲಾಲ್, ಮಹದೇಶ್ವರ ವನ್ಯಧಾಮದ ಡಿಸಿಎಫ್ ವೈ.ಚಕ್ರಪಾಣಿ, ಹನೂರು ಉಪ ವಲಯದ ಎಸಿಎಫ್ ಗಜಾನನ ಹೆಗಡೆ, ಹೂಗ್ಯಂ ಆರ್‌ಎಫ್‌ಓ ಮಾದೇಶ್ ಇನ್ನಿತರರು ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ಗಾಯದ ಗುರುತಿಲ್ಲ: ಎಲ್ಲಾ ಐದು ಹುಲಿಗಳ ಮೈಮೇಲೆ ಯಾವುದೇ ಗಾಯದ ಗುರುತುಗಳಿಲ್ಲ. ಉಗುರು, ಹಲ್ಲುಗಳಿಗೂ ಹಾನಿಯಾಗಿಲ್ಲ. ಒಂದು ಅಥವಾ ಎರಡು ದಿನದ ಹಿಂದೆ ಇವುಗಳು ಸತ್ತಿವೆ. ದೇಹ ಕೊಳೆಯಲಾರಂಭಿಸಿದೆ. ಅಲ್ಲದೆ, ಕಳೇಬರಗಳ ಮೇಲೆ ನೊಣ ಹಾರಾಡುತ್ತಿದ್ದವು. ಹಾಗಾಗಿ ವಿಷ ಪ್ರಾಶನದ ಶಂಕೆ ದಟ್ಟವಾಗಿದೆ.

■9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನೊಂದ್ರೆ... ಎಲ್ಲಿದ್ದಿರಾ...? ಆಫೀಸ್‌ನಲ್ಲೇ ಇದ್ದೀರಾ...? ಗಾಬರಿಯಿಂದ ಕೇಳಿದಳು ಹೆಂಡತಿ

ಗಂಡ : ಹೌದು... ಆಫೀಸ್‌ನಲ್ಲೇ ಇದ್ದೀನಿ... ಏನಾಯ್ತು? ಕಳವಳದಿಂದಲೇ ಕೇಳ್ದ ಗಂಡ.

ಹೆಂಡತಿ : ಏನು ಆಗಿಲ್ಲಾ... ನಮ್ಮ ಮನೆ ಕೆಲಸದವಳು ಯಾರ್ ಜೊತೆಗೋ ಓಡಿ ಹೋದ್ಲಂತೆ... ಅವಳ ಗಂಡ ಬಂದು ಅಳ್ತಾ ಹೇಳ್ದ... ಅದಕ್ಕೆ ಫೋನ್ ಮಾಡ್ದೆ ಅಷ್ಟೇ!

ಮೈಸೂರು ಮಿತ್ರ

ಶುಕ್ರವಾರ, 27 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬೇಡ ಎಂದವರಿಗೆ ಬಲವಂತ ಮಾಡುವ ಬದಲು, ಬೇಕು ಎಂದವರಿಗೆ ಬೆಳಕಾಗು. – ಶ್ರೀ ಶಿವಕುಮಾರ ಸ್ವಾಮೀಜಿ

ವೇದ ಸುಳ್ಳಾದರೂ { ಕುಣಿಯಲು ಬಾರದವಳು
ಗಾದೆ ಸುಳ್ಳಾಗದು { ನೆಲ ಡೊಂಕೆಂದಳು

ನಿಮ್ಮ ಪತ್ರಗಳು

ಶೀಘ್ರ ಕಸ ವಿಲೇವಾರಿ ಮಾಡಿ



ಮಾನ್ಯರೆ,

ಮೈಸೂರಿನ ಶ್ರೀರಾಂಪುರ 2ನೇ ಹಂತದ ಸರ್ಕಲ್ ಬಳಿ ಆರಾಧನಾ ಕಾನ್ವೆಂಟ್, ನಿರ್ಮಲಾ ಶಾಲೆ ಮತ್ತು ಕಾಲೇಜು, ಕ್ರೈಸ್ಟ್ ಕಾಲೇಜುಗಳಿವೆ. ಆರಾಧನಾ ಕಾನ್ವೆಂಟ್ ಗೋಡೆಗೆ ಸೇರಿದಂತೆ ಕಸದ ರಾಶಿ ಬಿದ್ದು ಒಂದು ತಿಂಗಳಾದರೂ ಇದನ್ನು ತೆರವು ಮಾಡುವ ಕಾರ್ಯವಾಗಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿಲ್ಲ. ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ದುರ್ವಾಸನೆಯಿಂದ ಕೂಡಿರುವ ಈ ಕಸದ ರಾಶಿಯನ್ನು ಸಂಬಂಧಪಟ್ಟ ಅಧಿಕಾರಿಗಳು ವಿಲೇವಾರಿ ಮಾಡುವಂತೆ ಈ ಮೂಲಕ ಮನವಿ.

– ಜ್ಞಾನಪ್ರಕಾಶ್, ಶ್ರೀರಾಂಪುರ 2ನೇ ಹಂತ, ಮೈಸೂರು.

ಸಂಚಾರಿ ಗ್ರಂಥಾಲಯ ಹೆಚ್ಚಾಗಲಿ

ಮಾನ್ಯರೆ,

ಇದು ಮೊಬೈಲ್ ಯುಗವಾಗಿದೆ. ಎಲ್ಲರೂ ಪುಸ್ತಕದಿಂದ ದೂರವಾಗುತ್ತಿದ್ದಾರೆ. ಇದಕ್ಕೆ ಎಲ್ಲಾ ವಯೋಮಿತಿಯವರು ಬಲಿಯಾಗುತ್ತಿದ್ದಾರೆ. ಹೊಸದಾಗಿ ರಾಜ್ಯಾದ್ಯಂತ 242 ಗ್ರಂಥಾಲಯ ಸ್ಥಾಪನೆಗೆ ಸಿದ್ಧತೆ ಹಾಗೂ ಡಿಜಿಟಲ್ ಮೂಲಸೌಕರ್ಯ ಚಿಂತನೆಗೆ ಸ್ವಾಗತ. ಆದರೆ ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಲು ಪ್ರತಿಯೊಂದು ಶಾಲಾ–ಕಾಲೇಜು ಮುಂದೆ, ಬಸ್ ನಿಲ್ದಾಣ, ರೈಲ್ವೆ ಸ್ಟೇಷನ್ ಮುಂದೆ, ದೇವಸ್ಥಾನ ಹಾಗೂ ಸಂತೆಗಳ ಮುಂದೆ ಸಂಚಾರಿ ಗ್ರಂಥಾಲಯ ಚಾಲನೆಯಲ್ಲಿದ್ದರೆ ಒಳ್ಳೆಯದು. ವಾರಕ್ಕೆ ಮೂರು ದಿನ ಆದರೂ ಪ್ರತಿಯೊಂದು ಸಂಚಾರಿ ಗ್ರಂಥಾಲಯ ಚಾಲನೆಯಲ್ಲಿರಬೇಕು. ಇದರಿಂದ ಎಲ್ಲರಿಗೂ ಓದುವ ಹವ್ಯಾಸ ಬೆಳೆದು ಏಕಾಗ್ರತೆ ಮೂಡುತ್ತದೆ. ಈ ಗ್ರಂಥಾಲಯದಲ್ಲಿ ಮಕ್ಕಳಿಗೆ ಎಲ್ಲಾ ತರಹದ ಪುಸ್ತಕವಿರುವುದರಿಂದ ಜ್ಞಾನಾರ್ಜನೆ ಹೆಚ್ಚಾಗುತ್ತದೆ. ಅವರನ್ನು ಇತ್ತ ಆಕರ್ಷಿಸಿದರೆ ಮೊಬೈಲಿನಿಂದ ದೂರವಾಗುತ್ತಾರೆ. ಆದ್ದರಿಂದ ಸಂಚಾರಿ ಗ್ರಂಥಾಲಯಗಳು ಎಲ್ಲಾ ಏರಿಯಾದಲ್ಲಿ ಚಾಲನೆಯಲ್ಲಿದ್ದರೆ ಒಳ್ಳೆಯದು. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಒಳ್ಳೆಯ ಹವ್ಯಾಸ ಮೈಗೂಡುತ್ತದೆ. ಈ ರೀತಿ ಯೋಚನೆ ಮಾಡಿದರೆ ಒಳಿತಲ್ಲವೇ? ಮಕ್ಕಳಿಗೆ ಓದುವ ಹವ್ಯಾಸಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಮೊಬೈಲ್ ಬಳಕೆ ಮಿತಿ ದಾಟದಿರಲಿ

ಮಾನ್ಯರೆ,

ಮೊಬೈಲ್ ಗೀಳಿನಿಂದಾಗಿ ಅನೇಕ ವಿದ್ಯಾರ್ಥಿಗಳ ಭವಿಷ್ಯ ಮುಸುಕಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಮೊಬೈಲ್ ಎಂಬ ಮಾಯಾಜಾಲದಲ್ಲಿ ಹಿರಿಯರು, ಕಿರಿಯರು ಎಂಬ ವಯಸ್ಸಿನ ತಾರತಮ್ಯವಿಲ್ಲದೇ ಪ್ರತಿಯೊಬ್ಬರು ಸಿಲುಕಿದ್ದಾರೆ. ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಅನಿವಾರ್ಯ ಕೂಡ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಬಹುತೇಕ ಸೇವಾ ಸೌಲಭ್ಯಗಳನ್ನು ಪಡೆಯಲು ಮೊಬೈಲ್ ತೀರಾ ಅವಶ್ಯಕವಾಗಿದೆ. ಮೊಬೈಲ್ ಇಂದು ಪ್ರತಿಯೊಬ್ಬರ ಪಾಲಿಗೂ ಆತ್ಮೀಯ ಅಥವಾ ಅನಿವಾರ್ಯ ಬಂಧುವಾಗಿ ಪರಿಣಮಿಸಿದೆ. ಮೊಬೈಲ್ ಇಲ್ಲದ ಬದುಕನ್ನು ಊಹಿಸಿಕೊಳ್ಳುವುದೇ ಕಷ್ಟವಾಗಿದೆ. ಇವೆಲ್ಲಾ ಸರಿ, ಆದರೆ, ಈಗ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮೊಬೈಲ್‌ಗಳಿಗೆ ದಾಸರಾಗಿಬಿಟ್ಟಿದ್ದಾರೆ. ಅನೇಕ ವಿದ್ಯಾರ್ಥಿಗಳು ದಿನದ ಬಹುತೇಕ ವೇಳೆಯನ್ನು ಮೊಬೈಲ್ ಜೊತೆಯಲ್ಲೇ ಕಳೆಯುತ್ತಿರುವುದರಿಂದ ಶೈಕ್ಷಣಿಕವಾಗಿ ಹಿಂದುಳಿಯುತ್ತಿದ್ದಾರೆ. ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚಟುವಟಿಕೆಯಲ್ಲಿದ್ದಾರೆ. ವಾಟ್ಸಾಪ್, ಫೇಸ್‌ಬುಕ್, ಇನ್ಸ್ಟಾಗ್ರಾಮ್, ಟ್ವಿಟರ್ ಮುಂತಾದವುಗಳು ವಿದ್ಯಾರ್ಥಿಗಳ ನೆಚ್ಚಿನ ತಾಣವಾಗಿದೆ.

ಮೊಬೈಲ್‌ನಿಂದ ಹೊರಬರುವ ವಿಕಿರಣಗಳು ದೀರ್ಘ ಕಾಲದಲ್ಲಿ ದೃಷ್ಟಿ ಮತ್ತು ನರಗಳ ಸಮಸ್ಯೆಗಳನ್ನು ಹೊತ್ತು ತರಬಹುದು ಎಂಬುದನ್ನು ನರರೋಗಗಳ ತಜ್ಞರೇ ಹೇಳುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು, ಮೊಬೈಲ್ ಬಳಕೆಯಲ್ಲಿ ಒಂದು ಮಿತಿಯಲ್ಲಿದ್ದರೆ ಒಳ್ಳೆಯದು. ಅತಿಯಾದರೆ ಅಮೃತ ಕೂಡ ವಿಷವಾಗಿ ಪರಿಣಮಿಸಬಹುದು ಎಂಬುದನ್ನು ತಿಳಿದು ನಡೆದರೆ ಭವಿಷ್ಯ ಉಜ್ವಲವಾಗುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ತಿದ್ದುಪಡಿ ಹಾಗೂ ಸ್ಪಷ್ಟೀಕರಣ



'ಮೈಸೂರು ಮಿತ್ರ'ನ ಇಂದಿನ(ಜೂ.27) ಸಂಚಿಕೆಯೊಂದಿಗೆ ನೀಡಲಾಗಿರುವ ಹೆಚ್ಚುವರಿ ನಾಲ್ಕು ಪುಟಗಳ, ಎರಡನೇ ಪುಟದಲ್ಲಿ **'ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಚುನಾಯಿತರಾದ ಎಸ್‌ಬಿಎಂ ಮಂಜು ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಾಸನಕೊಪ್ಪಲು ರಾಜಣ್ಣ, ನಗರಪಾಲಿಕೆ ಮಾಜಿ ಸದಸ್ಯ ಎಲ್.ಬಿ.ಜಗದೀಶ್, ಅನುಜ್ ಆತ್ಮೀಯವಾಗಿ ಅಭಿನಂದಿಸಿದರು'** ಎಂದು ಚಿತ್ರಸಹಿತ ಪ್ರಕಟವಾಗಿದ್ದು, ಅದನ್ನು ಎಸ್‌ಬಿಎಂ ಮಂಜು ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಅಭಿನಂದಿಸಲಾಯಿತು ಎಂದು ಓದಿಕೊಳ್ಳುವುದು. **–ಸಂಪಾದಕ**

ನಾಡು ಕಟ್ಟಿದ ನಾಡಪ್ರಭು ಕೆಂಪೇಗೌಡ





ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಕರ್ನಾಟಕದ ಚರಿತ್ರೆಯಲ್ಲಿ ಯಲಹಂಕ ನಾಡಿನ ಇತಿಹಾಸ ಬಹಳ ಅದ್ಭುತವಾದದ್ದು, ಅಷ್ಟೇ ವೈಶಿಷ್ಟ್ಯಪೂರ್ಣವಾದುದು. ಸುವರ್ಣ ಪುಟಗಳಲ್ಲಿ ಬರೆದಿಡುವಷ್ಟು ವರ್ಣರಂಜಿತ ವೈಭವಪೂರ್ಣವಾದುದು. ನಾಡಲ್ಲಷ್ಟೇ ಅಲ್ಲದೆ ನಾಡಿನಿಂದಾಚೆಗೂ, ದೇಶದಿಂದಾಚೆಗೂ ಪ್ರಖ್ಯಾತವಾದದ್ದು, ಪ್ರಬಲವಾದದ್ದು. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯಲ್ಲಿ ಯಲಹಂಕ ನಾಡಿನ ಪ್ರಭುಗಳ ಪಾತ್ರ ಅತ್ಯಂತ ಮಹತ್ತರವಾದದ್ದು. ವಾಸ್ತವವಾಗಿ ಯಲಹಂಕ ಒಂದು ಸಾಮಾನ್ಯ ಸಾಮಂತರಾಜ್ಯ. ಆದರೆ ಇದು ಕನ್ನಡ ನಾಡಿಗೆ ನೀಡಿದ ಕೊಡುಗೆ ಅಸಾಮಾನ್ಯವಾದದ್ದು. ಯಾವ ಸಾಮ್ರಾಜ್ಯದ ಸಾಮ್ರಾಟರಿಗೂ ಕಮ್ಮಿಯಿಲ್ಲದ್ದು. ಇತಿಹಾಸಕಾರರ ಪ್ರಕಾರ ಯಲಹಂಕ ಪ್ರಭುಗಳು ಅರ್ಥಾತ್ ರಾಜರು ಹತ್ತು ಮಂದಿ. ಇವರಲ್ಲಿ ಪ್ರಥಮ ರಾಜನಾದ ದೇವರಸಗೌಡನೇ ನಾಡಪ್ರಭು ಕೆಂಪೇಗೌಡರ ವಂಶಸ್ಥರ ಮೂಲಪುರುಷ. ಈತ ಹೊಯ್ಸಳರ ಸಾಮಂತನಾಗಿ 'ಕುರುವಗೆರೆ' ಎಂಬ ಪ್ರದೇಶದಿಂದ ರಾಜ್ಯಾಡಳಿತ ಮಾಡುತ್ತಿದ್ದ. ಕ್ರಿ.ಶ.1200ರ ಶಾಸನವೊಂದು ಈತನ ಬಗ್ಗೆ ಮಾಹಿತಿ ತಿಳಿಸುತ್ತದೆ.

ಚಕ್ರವರ್ತಿಗಳ ಚಕ್ರವರ್ತಿಗಳೆಂದೇ ಗುರುತಿಸಿಕೊಂಡಿದ್ದ ಹೊಯ್ಸಳರ ಸಾಮಂತನಾಗಿದ್ದ ದೇವರಸಗೌಡ ನಂತರದ ದಿನಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ 'ಆವತಿ' ಎನ್ನುವ ಊರಿಗೆ ಬಂದು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಆವತಿ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ದೇವರಸಗೌಡ ಆವತಿಯನ್ನು ಕೇಂದ್ರಸ್ಥಾನ ಮಾಡಿಕೊಂಡು ಇಲ್ಲಿ ನೆಲೆನಿಂತ ಕಾರಣ ಈ ವಂಶಸ್ಥರನ್ನು 'ಆವತಿ ನಾಡಗೌಡ ಪ್ರಭುಗಳು' ಎಂದೂ ಕರೆಯಲಾಗಿದೆ. ಎರಡನೇ ರಾಜ ಜಯಗೌಡ, ಇವರು ದೇವರಸಗೌಡರ ಪುತ್ರ. ಇವನು ತನ್ನ ತಂದೆ ದೇವರಸಗೌಡರ ಹೆಸರಿನಲ್ಲಿ ನಿರ್ಮಿಸಿದ ಹಳ್ಳಿಯೇ 'ದೇವನಹಳ್ಳಿ'. ಈತ ಆವತಿಯಿಂದ ತನ್ನ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದರು.

ಇವರ ನಿಧನದ ನಂತರ ಒಂದನೇ ಭೈರೇಗೌಡ ಆಳ್ವಿಕೆಗೆ ಬಂದ. ಇವರು ಹೊಯ್ಸಳರೊಡನೆ ಒಳ್ಳೆಯ ಸಂಬಂಧ ಹೊಂದಿದ್ದ ಕಾರಣ ದೊಡ್ಡ ಬಳ್ಳಾಳನ ನೆನಪಿಗಾಗಿ ದೊಡ್ಡಬಳ್ಳಾಪುರ ಪಟ್ಟಣವನ್ನು ನಿರ್ಮಿಸಿದರು. ಹೊಯ್ಸಳರ ಪಟ್ಟದರಸಿ ಶಾಂತಲಾ ದೇವಿಯ ಪುತ್ರ ಚಿಕ್ಕಬಳ್ಳಾಳ. ಇವರ ಗೌರವಾರ್ಥ ಒಂದನೇ ಭೈರೇಗೌಡ ಚಿಕ್ಕಬಳ್ಳಾಪುರ ನಿರ್ಮಿಸಿದರು.

ಚಿಕ್ಕಬಳ್ಳಾಪುರದ ನಿರ್ಮಾತೃ ಎಂಬ ಕೀರ್ತಿಗೆ ಭಾಜನರಾಗಿದ್ದ ಒಂದನೇ ಭೈರೇಗೌಡರ ಕಾಲಾನಂತರ ಇಮ್ಮಡಿ ಭೈರೇಗೌಡ ಅಧಿಕಾರದ ಚುಕ್ಕಾಣಿ ಹಿಡಿದ. ಇವರನ್ನು ರಣಭೈರೇಗೌಡ ಎಂದೂ ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯ ಕಟ್ಟುವ ಕಾಲದಲ್ಲಿ ಅವರಿಗೆ ಸರ್ವರೀತಿಯಲ್ಲಿ ಸಹಕಾರ ನೀಡಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು. ಇಮ್ಮಡಿ ಭೈರೇಗೌಡರ ನಂತರ ಅವರ ಪುತ್ರ ನಂಜಪ್ಪಗೌಡರು ಪಟ್ಟಕ್ಕೆ ಬಂದರು. ನಂಜಪ್ಪಗೌಡರಿಗೆ ಬಹಳಕಾಲ ಮಕ್ಕಳಿರಲಿಲ್ಲ. ತಮ್ಮ ಕುಲದೇವತೆಯಾದ ಕುರುವಗೆರೆ ಕೆಂಪಮ್ಮನಿಗೆ ಹರಕೆ ಕಟ್ಟಿಕೊಂಡಿದ್ದರಿಂದ ದೇವಿಯ ಆಶೀರ್ವಾದದ ಫಲವಾಗಿ ಕೆಂಪನಂಜೇಗೌಡ ಜನಿಸಿದ. ಇವರೇ ನಾಡಪ್ರಭು ಕೆಂಪೇಗೌಡರ ತಂದೆ.

ಕೆಂಪನಂಜೇಗೌಡ ಮತ್ತು ಲಿಂಗಮಾಂಬೆ ದಂಪತಿಗೆ ನಾಲ್ಕು ಮಂದಿ ಗಂಡು ಮಕ್ಕಳು. ಅವರಲ್ಲಿ ಹಿರಿಮಗನೇ ನಾಡಪ್ರಭುವಾದ ಕೆಂಪೇಗೌಡ. ಇವರು 1510ರಲ್ಲಿ ಜನಿಸಿದರು. ಇನ್ನೂ ಮೂವರೆಂದರೆ ವೀರೇಗೌಡ, ಬಸವೇಗೌಡ ಹಾಗೂ ಕೆಂಪಸೋಮೇಗೌಡ. ಇವರುಗಳ ತಂದೆ ಕೆಂಪನಂಜೇಗೌಡ ವಿಜಯನಗರ ಸಾಮ್ರಾಜ್ಯಕ್ಕೆ ಅತ್ಯಂತ ನಿಷ್ಠರಾಗಿದ್ದುದರಿಂದ ಕೃಷ್ಣದೇವರಾಯ ಇವರನ್ನು ಹಾಗೂ ಇವರ ಆಡಳಿತದ ಕಾರ್ಯಶೈಲಿಯನ್ನು ಬಹಳ ಮೆಚ್ಚಿಕೊಂಡಿದ್ದರು. ಇದು ನಾಡಪ್ರಭು ಕೆಂಪೇಗೌಡರ ಕಾಲಕ್ಕೂ ಮುಂದುವರೆದು ಕೃಷ್ಣದೇವರಾಯರಿಗೆ ಕೆಂಪೇಗೌಡ ಅತ್ಯಂತ ಪ್ರೀತಿ ಪಾತ್ರನಾಗಿದ್ದರು.

ಯಲಹಂಕ ಊರಿಗೆ ಅಂದಾಜು 1200 ವರ್ಷಗಳ ಇತಿಹಾಸವಿದೆ. ಗಂಗರ ಕಾಲದಲ್ಲಿ ಇದು ಹೆಚ್ಚಿನ ಮಹತ್ವ ಪಡೆದಿತ್ತು. ವಿಶೇಷ ಮಾನ್ಯತೆಗಳಿಸಿತ್ತು. ಬೆಂಗಳೂರು ಸಮೀಪದ ಚಿಕ್ಕಜಾಲದ ಚೆನ್ನಕೇಶವ ಯಲಹಂಕ ಪ್ರಭುಗಳ ಆರಾಧ್ಯದೈವ ಹಾಗೆಯೇ ಕುರುವಗೆರೆ ಕೆಂಪಮ್ಮ ಆರಾಧ್ಯ ದೇವತೆ. ಕುಲದೈವ ಭೈರವೇಶ್ವರ. ನಾಡಪ್ರಭು ಕೆಂಪೇಗೌಡರ ವಂಶಸ್ಥರು ರಾಜ್ಯಭಾರ ಮಾಡಿದ ಮತ್ತೊಂದು ಪ್ರಮುಖ ಸ್ಥಳ 'ಮಾಗಡಿ'. ಇದು 12ನೇ ಶತಮಾನದಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾದ ಐತಿಹ್ಯ ಕೂಡ ಇಲ್ಲುಂಟು. ನಂತರದ ದಿನಗಳಲ್ಲಿ 'ಮಾಗಡಿ'ಯು ಹೊಯ್ಸಳರ ಕೈವಶವಾಗಿ ಬಳಿಕ ವಿಜಯನಗರದ ಅರಸರ ಕೈ ಸೇರಿತು. ಅಂತಿಮವಾಗಿ ಕೆಂಪೇಗೌಡರ ವಂಶಸ್ಥರ ವಶಕ್ಕೆ ಬಂತು. ಇದನ್ನು ಬಹು ವೈಭವದಿಂದ ಆಳಿದ ನಾಡಪ್ರಭು ಕೆಂಪೇಗೌಡರ ಎರಡನೇ ಪುತ್ರ ಇಮ್ಮಡಿ ಕೆಂಪೇಗೌಡರು ಮಾಗಡಿ ಕೆಂಪೇಗೌಡರೆಂದೇ ಕರೆಸಿಕೊಂಡು ಹೆಸರುವಾಸಿಯಾದರು. ಮತ್ತೊಬ್ಬ ಮಗ ಗಿಡ್ಡೇಗೌಡ ಕ್ರಿ.ಶ. 1578ರವರೆಗೆ ಆಳಿದರೆಂದು ಹೇಳಲಾಗುತ್ತದೆ. 18ನೇ ಶತಮಾನದ ಪ್ರಾರಂಭದ ತನಕವೂ ಕೆಂಪೇಗೌಡರ ವಂಶಸ್ಥರ ಆಳ್ವಿಕೆಯಲ್ಲಿದ್ದ ಮಾಗಡಿ ಆ ನಂತರ ಮೈಸೂರು ಅರಸರ ಪಾಲಾಯಿತು. ಕ್ರಿ.ಶ. 1791ರಲ್ಲಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಅಲ್ಲಿಗೆ ವೈಭವದ ಮಾಗಡಿಯ ಇತಿಹಾಸ ಮಣ್ಣುಗೂಡಿತು. ಇದು ನಾಡಪ್ರಭು ಕೆಂಪೇಗೌಡರ ವಂಶಸ್ಥರ ಇತಿಹಾಸ. ಸುಮಾರು 500 ವರ್ಷಗಳ ಕಾಲ ವೈಭವಪೂರ್ಣವಾಗಿ ಆಡಳಿತ ನಡೆಸಿದ ಈ ವಂಶದ ಸಾಮ್ರಾಜ್ಯ ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕಿಂತ ವಿಶಾಲವಾಗಿತ್ತು. ವಿಶ್ವವಿಖ್ಯಾತಿಯಾಗಿ ಮೆರೆದಿತ್ತು.

ವಜ್ರದೋಪಾದಿಯ ಇಂಥಾ ಕಿರೀಟಪ್ರಾಯ ವಂಶದಲ್ಲಿ ರತ್ನಪ್ರಾಯರಾಗಿ ಜನಿಸಿದ ನಾಡಪ್ರಭು ಕೆಂಪೇಗೌಡ ಪುಟ್ಟ ವಯಸ್ಸಿನಲ್ಲೇ ಪುಟಿದೇಳುವ ಪಾದರಸದಂತಹ ಚುರುಕು ಸ್ವಭಾವದ ಕ್ರಿಯಾಶೀಲತೆ ಹೊಂದಿದ್ದರು. ತನ್ನ ಜೀವಿತಾವಧಿಯಲ್ಲಿ ಏನಾದರೂ ಅದ್ಭುತವಾದುದನ್ನು ಸಾಧಿಸಿ ಸೈ ಎನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಬಾಲಕ ಕೆಂಪೇಗೌಡನ ಕಣ್ಣುಗಳಲ್ಲಿ ಆಗಲೇ ಕುಣಿಯುತ್ತಿತ್ತು. ಇವರ ಬಾಲ್ಯ ಅತ್ಯಂತ ರೋಚಕವಾದದ್ದು. ತಂದೆ ಕೆಂಪನಂಜೇಗೌಡರಿಗೆ ಮಗ ಕೆಂಪೇಗೌಡರ ಮೇಲೆ ಅಗಾಧ ಪ್ರೀತಿ ಮತ್ತು ಅನನ್ಯ ಪ್ರೇಮ. ಹಾಗಾಗಿ ಕೆಂಪೇಗೌಡನನ್ನು ಸಕಲಕಲಾವಲ್ಲಭನನ್ನಾಗಿ ಮಾಡಬೇಕೆಂಬ ಅದಮ್ಯ ಆಸೆ. ಅದಕ್ಕೆ ತಕ್ಕ ಹಾಗೆ ಬೆಳೆವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಬಾಲಕ ಕೆಂಪೇಗೌಡ ಎಲ್ಲಕ್ಕೂ ಸಿದ್ಧನಿದ್ದ. ಗುರುಗಳೆಂದರೆ ಹೀಗಿರಬೇಕೆನ್ನುವಂತಿದ್ದ ತಮ್ಮ ಪಾಂಡಿತ್ಯದಿಂದ ಹೆಸರುವಾಸಿಯಾಗಿದ್ದ ಐಗಂಡಪುರದ ಮಾಧವ ಭಟ್ಟರಲ್ಲಿ ಶಿಷ್ಯನೆಂದರೆ ಹೀಗಿರಬೇಕೆನ್ನುವಂತಿದ್ದ ಐದು ವರ್ಷದ ಬಾಲಕ ಕೆಂಪೇಗೌಡನನ್ನು, ತಂದೆ ಕೆಂಪನಂಜೇಗೌಡ ವಿದ್ಯಾಭ್ಯಾಸಕ್ಕೆ ಸೇರಿಸಿದ್ದರು. ಅಲ್ಲಿ ಗುರುಗಳಿಂದ ಆಡಳಿತ, ರಾಜನೀತಿ ಸೇರಿದಂತೆ ಪ್ರತಿಯೊಂದು ವಿಷಯಗಳಲ್ಲೂ ಪರಿಣತಿ ಗಳಿಸಿ ಕುದುರೆ ಸವಾರಿ, ಕತ್ತಿವರಸೆ, ಮಲ್ಲಯುದ್ಧ ಮುಂತಾದ ಓರ್ವ ರಾಜನಿಗಿರಬೇಕಾದ ಸರ್ವ ವಿದ್ಯೆಗಳಲ್ಲೂ ಸಮರ್ಥರಾದರು. ಅಲ್ಲಿ ಗೆಳೆಯನಾಗಿ ದೊರೆತ ನಾರಾಯಣ ಭಟ್ಟ (ನಾಣಿ) ಕೆಂಪೇಗೌಡರ ಪ್ರತಿಯೊಂದು ಹೆಜ್ಜೆಯಲ್ಲೂ ಸಹಕಾರದ ಆತ್ಮೀಯನಾಗಿದ್ದರು. ಇವರಿಬ್ಬರ ಸ್ನೇಹ ಕೃಷ್ಣ–ಕುಚೇಲ ಸಂಬಂಧವಾಗಿತ್ತು.

> ಕೃಷ್ಣದೇವರಾಯ 1529ರಲ್ಲಿ ನಿಧನರಾದಾಗ ಅವರ ಸಹೋದರ ಅಚ್ಚುತರಾಯ ಅಧಿಕಾರಕ್ಕೆ ಬರುತ್ತಾರೆ. ಬೆಂಗಳೂರು ನಿರ್ಮಾಣಕ್ಕೆ 50 ಸಾವಿರ ಚಿನ್ನದ ವರಹಗಳನ್ನು ನೀಡುವುದರ ಜೊತೆಗೆ 30 ಸಾವಿರ ಪಗೋಡಗಳ ಉತ್ಪನ್ನ ಬರುವ ಹಳೆಬೆಂಗಳೂರು, ಬೇಗೂರು, ವರ್ತೂರು, ಹಲಸೂರು, ಜಿಗಣಿ, ತಲಘಟ್ಟಪುರ, ಕೆಂಗೇರಿ, ಕುಂಬಳಗೋಡು, ಹೆಸರಘಟ್ಟ, ಕಾವಳ್ಳಿ (ಈಗಿನ ಕನ್ನಲ್ಲಿ), ಚಿಕ್ಕಬಾಣಾವರ ಇತ್ಯಾದಿ 12 ಹೋಬಳಿಗಳನ್ನು ಕೆಂಪೇಗೌಡರಿಗೆ ದಾನವಾಗಿ ಬಿಟ್ಟುಕೊಡುತ್ತಾರೆ. ವೈಜ್ಞಾನಿಕ ಪ್ರಜ್ಞೆಯ ಪ್ರಖರ ವಿಚಾರವಾದಿಯಾಗಿದ್ದ ಕೆಂಪೇಗೌಡರು ಯಾವುದೇ ಮೂಢ ನಂಬಿಕೆಗಳಿಗೆ ಒಳಗಾಗದೆ ಪುರೋಹಿತರ ಆಣತಿಯಂತೆ ಯಾವುದೇ ಶಾಸ್ತ್ರ, ಘಳಿಗೆ ನೋಡದೆ ರೈತನೊಬ್ಬನಿಂದ ನೇಗಿಲಿನಿಂದ ಗೆರೆ ಎಳೆಸುವ ಮೂಲಕ ತಮ್ಮ ಮಹದಾಕಾಂಕ್ಷೆಯ ಬೆಂಗಳೂರು ನಿರ್ಮಾಣ ಆರಂಭಿಸಿದ್ದರು.

ಗುರುದೇವ ಮಾಧವಭಟ್ಟರ ಆಣತಿಯಂತೆ ರಾಜ್ಯಾಡಳಿತ ರಥವೇರುವ ಮುನ್ನ ದೇಶ ನೋಡು ಕೋಶ ಓದು ಎಂಬಂತೆ ದೇಶ ಪರ್ಯಟನೆಗೆ ಹೊರಟ ಕೆಂಪೇಗೌಡ ಮೊದಲಿಗೆ ವಿಜಯನಗರಕ್ಕೆ ಭೇಟಿ ನೀಡುತ್ತಾರೆ. ಐದಾರು ವರ್ಷಗಳ ಬಾಲಕನಾಗಿದ್ದಾಗಲೇ 1515ರ ಆಸುಪಾಸಿನಲ್ಲಿ ಒಮ್ಮೆ ತಂದೆಯ ಹೆಗಲ ಮೇಲೆ ಕೂತು ರಾಜಧಾನಿ ಹಂಪಿಯಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡ ಈಗ ಮತ್ತಷ್ಟು ನಿಬ್ಬೆರಗುಗೊಂಡು ರೋಮಾಂಚಿತರಾಗುತ್ತಾರೆ. ಅಷ್ಟೇ ಅಲ್ಲ, ಬಾಲಕನಾಗಿದ್ದಾಗಲೇ ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ಕನಸು ಕಂಡಿದ್ದ ಕನಸುಗಾರ ಕೆಂಪೇಗೌಡ, ಈಗ ಅದನ್ನು ಸಾಕಾರಗೊಳಿಸುವತ್ತ ಮನಸ್ಸನ್ನು ದೃಢ ಮಾಡಿಕೊಂಡು ಒಟ್ಟಾರೆ ದೇಶ ಸಂಚಾರದ ಬಳಿಕ ಯಲಹಂಕಕ್ಕೆ ವಾಪಸ್ಸು ಬರುತ್ತಾರೆ. 1528ರಲ್ಲಿ ಚೆನ್ನಮಾಂಬೆಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಸುವರ್ಣಯುಗ. ಇದು ಅಂತಿಂಥಾ ಸುವರ್ಣಯುಗವಲ್ಲ. ಇಡೀ ಜಗತ್ತೇ ಕೆಂಪೇಗೌಡರತ್ತ ಹಾಗೂ ಇವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾ ಮಹದದ್ಭುತ...!

ರಾಜಧಾನಿ ಹಂಪೆಯ ಬೀದಿ ಬೀದಿಗಳಲ್ಲಿ ಮುತ್ತುರತ್ನಗಳನ್ನು, ವಜ್ರ ವೈಢೂರ್ಯಗಳನ್ನು ಬಳ್ಳಗಳಲ್ಲಿ ಅಳೆದು ಸುರಿದು ಮಾರುತ್ತಿದ್ದ ಮಹಾ ಸಿರಿವಂತಿಕೆಯ ವಿಜಯನಗರ ಸಾಮ್ರಾಜ್ಯದ ಸಂಪದಭಿವೃದ್ಧಿಯ ವೈಭವದಲ್ಲಿ ಸಾಮಂತರಾಗಿದ್ದ ಕೆಂಪೇಗೌಡರ ವಂಶಸ್ಥರದ್ದೂ ಸಿಂಹಪಾಲಿತ್ತು. ಹಾಗಾಗಿ ವಿಜಯನಗರ ಅರಸರಿಗೆ ಅದರಲ್ಲೂ ವಿಶೇಷವಾಗಿ ಕೃಷ್ಣದೇವರಾಯನಿಗೆ ಇವರ ಮೇಲೆ ಹೆಚ್ಚಿನ ಒಲವಿತ್ತು. ಚಿಕ್ಕ ವಯಸ್ಸಿನಲ್ಲೇ ಕೆಂಪೇಗೌಡರಿಗೆ ಕೃಷ್ಣದೇವರಾಯರೊಡನಾಟ ಚೆನ್ನಾಗಿತ್ತು.

ಕೃಷ್ಣದೇವರಾಯ 1529ರಲ್ಲಿ ನಿಧನರಾದಾಗ ಅವರ ಸಹೋದರ ಅಚ್ಚುತರಾಯ ಅಧಿಕಾರಕ್ಕೆ ಬರುತ್ತಾರೆ. ಬೆಂಗಳೂರು ನಿರ್ಮಾಣಕ್ಕೆ 50 ಸಾವಿರ ಚಿನ್ನದ ವರಹಗಳನ್ನು ನೀಡುವುದರ ಜೊತೆಗೆ 30 ಸಾವಿರ ಪಗೋಡಗಳ ಉತ್ಪನ್ನ ಬರುವ ಹಳೆಬೆಂಗಳೂರು, ಬೇಗೂರು, ವರ್ತೂರು, ಹಲಸೂರು, ಜಿಗಣಿ, ತಲಘಟ್ಟಪುರ, ಕೆಂಗೇರಿ, ಕುಂಬಳಗೋಡು, ಹೆಸರಘಟ್ಟ, ಕಾವಳ್ಳಿ (ಈಗಿನ ಕನ್ನಲ್ಲಿ), ಚಿಕ್ಕಬಾಣಾವರ ಇತ್ಯಾದಿ 12 ಹೋಬಳಿಗಳನ್ನು ಕೆಂಪೇಗೌಡರಿಗೆ ದಾನವಾಗಿ ಬಿಟ್ಟುಕೊಡುತ್ತಾರೆ. ವೈಜ್ಞಾನಿಕ ಪ್ರಜ್ಞೆಯ ಪ್ರಖರ ವಿಚಾರವಾದಿಯಾಗಿದ್ದ ಕೆಂಪೇಗೌಡರು ಯಾವುದೇ ಮೂಢನಂಬಿಕೆಗಳಿಗೆ ಒಳಗಾಗದೆ ಪುರೋಹಿತರ ಆಣತಿಯಂತೆ ಯಾವುದೇ ಶಾಸ್ತ್ರ, ಘಳಿಗೆ ನೋಡದೆ ರೈತನೊಬ್ಬನಿಂದ ನೇಗಿಲಿನಿಂದ ಗೆರೆ ಎಳೆಸುವ ಮೂಲಕ ತಮ್ಮ ಮಹತ್ವಾಕಾಂಕ್ಷೆಯ ಬೆಂಗಳೂರು ನಿರ್ಮಾಣ ಆರಂಭಿಸಿದ್ದರು. ಹಾಗೆಯೇ ರೈತ ಸಮುದಾಯದಿಂದ ಬಂದವರಾದ ಇವರು ಬಸವನನ್ನು ರಾಜಮುದ್ರೆಯಾಗಿ ಸ್ವೀಕರಿಸಿದ್ದರು. ಇದರ ದ್ಯೋತಕವಾಗಿ ಬೆಂಗಳೂರು ಕೋಟೆಯ ದಕ್ಷಿಣ ಭಾಗದ ಗುಡ್ಡವೊಂದರ ಮೇಲೆ ಬೃಹತ್ ಬಸವ ವಿಗ್ರಹ ನಿರ್ಮಿಸಿದ್ದರು. ನವ ಬೆಂಗಳೂರಿಗೆ 1537ರಲ್ಲಿ ಅಡಿಗಲ್ಲು ಹಾಕಿ ನಗರದ 4 ದಿಕ್ಕುಗಳಿಗೂ ನಾಲ್ಕು ದ್ವಾರಗಳನ್ನು ನಿರ್ಮಿಸಿ ಅವುಗಳನ್ನು ಹಲಸೂರು ಹೆಬ್ಬಾಗಿಲು, ಕೆಂಗೇರಿ ಹೆಬ್ಬಾಗಿಲು, ಯಶವಂತಪುರ ಹೆಬ್ಬಾಗಿಲು, ಯಲಹಂಕ ಹೆಬ್ಬಾಗಿಲುಗಳೆಂದು ಹೆಸರಿಟ್ಟರು. ಮುಖ್ಯದ್ವಾರದ ಬಾಗಿಲು ನಿಲ್ಲದೇ ಬೀಳುತ್ತಿರಲು ಸೊಸೆ ಲಕ್ಷ್ಮೀದೇವಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ. ನಾಡಪ್ರಭು ಕೆಂಪೇಗೌಡರ ಸೊಸೆ ನಾಡಿಗಾಗಿ ಬಲಿದಾನಗೈದ ಪರಿಣಾಮವಾಗಿ ಮುಖ್ಯ ದ್ವಾರದ ಬಾಗಿಲು ಭದ್ರವಾಗಿ ನಿಲ್ಲುತ್ತದೆ. ಈ ಮುಖೇನ ಲಕ್ಷ್ಮೀದೇವಿ ಬೆಂಗಳೂರು ಚರಿತ್ರೆಯ ಸುವರ್ಣ ಪುಟಗಳಲ್ಲಿ ತಾನೇ ಒಂದು ವಿಶೇಷ ಪುಟವಾಗಿ ಸೇರಿ ಹೋಗುತ್ತಾಳೆ.

ಮೈಸೂರಿನ ಪಿರಿಯಾಪಟ್ಟಣ, ಕಲ್ಲಹಳ್ಳಿ, ನಂಜರಾಯಪಟ್ಟಣ, ಕೊಡಗು ಮುಂತಾದ ಪ್ರಾಂತ್ಯಗಳು ಸೇರಿದಂತೆ ಉಮ್ಮತ್ತೂರಿನ ಆಡಳಿತಕ್ಕೆ ಒಳಪಟ್ಟಿದ್ದ ಶಿವನಸಮುದ್ರ ಸೀಮೆಯವರೆಗೂ ಕೆಂಪೇಗೌಡರ ಆಳ್ವಿಕೆ ಇತ್ತು. ಇದರಿಂದ ಯಲಹಂಕ ನಾಡು ದಕ್ಷಿಣದ ಗಡಿ ಕಾವೇರಿ ತೀರದವರೆಗೂ ವಿಸ್ತಾರಗೊಂಡಿತ್ತು. 1510ರಲ್ಲಿ ಜನಿಸಿ 1531ರಲ್ಲಿ ಪಟ್ಟಾಭಿಷಕ್ತರಾದ ನಾಡಪ್ರಭು ಕೆಂಪೇಗೌಡರು, 1569ರವರೆಗೆ ಸುಮಾರು 38 ವರ್ಷಗಳ ಕಾಲ ಆಳ್ವಿಕೆ ನಡೆಸಿ 1569ರಲ್ಲಿ ಇಹಲೋಕ ತ್ಯಜಿಸಿದರು.

ಆಷಾಢ ಮಾಸ ವೈಶಿಷ್ಟ್ಯ

ಶ್ರೀ ಚಾಮುಂಡೇಶ್ವರಿ ನೆಲೆಯೂರು ಮೈಸೂರಿನ ನಾಗರಿಕರಿಗೂ ಆಷಾಢ ಮಾಸಕ್ಕೂ ಒಂದು ವಿಶಿಷ್ಟ ಸಂಬಂಧವಿದೆ. ಒಡೆಯರ್ ರಾಜರಮನೆ ದೇವತೆಯಾದ ಈ ದೇವಿಯ ಜನ್ಮದಿನ ಬರುವುದೇ ಈ ಆಷಾಢ ಮಾಸದಲ್ಲಿ.

ಸನಾತನ ಹಿಂದೂ ಪಂಚಾಂಗದ ಪ್ರಕಾರ ಈ ಆಷಾಢ ಮಾಸ ಚಾಂದ್ರಮಾನ ರೀತ್ಯ ಬರುವ ದ್ವಾದಶ ಮಾಸಗಳಲ್ಲೇ ಅತ್ಯಂತ ಶ್ರೇಷ್ಠ ಮಾಸವೆನಿಸಿದೆ. ಶೃತಿ, ಸ್ಮೃತಿ, ಪುರಾಣಗಳ ಪ್ರಕಾರ ಆಷಾಢ ಮಾಸ ಶ್ರೀ ಮನ್ಮಹಾವಿಷ್ಣುವಿಗೆ ಅತ್ಯಂತ ಪ್ರಿಯವಾದ ಮಾಸವೆಂಬ ಉಲ್ಲೇಖವಿದೆ. ಅದಕ್ಕೆ ಕಾರಣವೇನೆಂದರೆ ಆಷಾಢ ಮಾಸದ ಶುಕ್ಲ ಪಕ್ಷ ಏಕಾದಶಿ, ವೈಕುಂಠ ಏಕಾದಶಿ ಅಥವಾ ಪ್ರಥಮೈಕಾದಶಿ ಎಂದು ಪ್ರಸಿದ್ಧಿ ಹೊಂದಿರುವುದೇ ಆಗಿದೆ. ಇದು ಒಂದು ಸಂವತ್ಸರದಲ್ಲಿ ಬರುವ 24 ಏಕಾದಶಿಗಳಲ್ಲಿ ಸರ್ವಶ್ರೇಷ್ಠವಾದ ಏಕಾದಶಿ ಎಂದೆನಿಸಿದೆ. ಈ ದಿನದಂದು ಶ್ರೀ ಮಹಾವಿಷ್ಣುವಿನ ವಾಸಸ್ಥಾನವಾದ ವೈಕುಂಠದ ದ್ವಾರ ತೆರೆದಿರುತ್ತದೆ ಎಂಬ ಪ್ರತೀತಿ ಇದೆ. ಆದ್ದರಿಂದಲೇ ಇದನ್ನು ವೈಕುಂಠ ಏಕಾದಶಿ ಎಂದು ಕರೆದಿರುವುದು. ಒಂದು ಸಂವತ್ಸರದಲ್ಲಿ ಬರುವ 24 ಏಕಾದಶಿಗಳು ಶ್ರೀ ವಿಷ್ಣುವಿನ 24 (ಚತುರ್ವಿಂಶತಿ ನಾಮಗಳು) ಹೆಸರುಗಳಿಂದ ಗುರುತಿಸಲ್ಪಟ್ಟಿರುವುದು ವಿಶೇಷವೆನಿಸುತ್ತದೆ.

ಆ 24 ನಾಮಗಳು 1) ಕೇಶವ 2) ಮಾಧವ 3) ನಾರಾಯಣ 4) ಮಾಧವ 5) ಗೋವಿಂದ 6) ವಿಷ್ಣು 7) ಮಧುಸೂದನ 8) ತ್ರಿವಿಕ್ರಮ 9) ವಾಮನ 10) ಶ್ರೀಧರ 11) ಹೃಷಿಕೇಶ 12) ಪ್ರದ್ಯುಮ್ನ 13) ದಾಮೋದರ 14) ಸಂಕರ್ಷಣ 15) ಅನಿರುದ್ಧ 16) ಪುರುಷೋತ್ತಮ 17) ಅಧೋಕ್ಷಜ 18) ನಾರಸಿಂಹ 19) ಅಚ್ಯುತ 20) ಉಪೇಂದ್ರ 21) ಹರಿ 22) ಕೃಷ್ಣ 23) ಜನಾರ್ಧನ 24) ವಾಸುದೇವ.

ಈ ವೈಕುಂಠ ಏಕಾದಶಿ ವ್ರತವನ್ನು ಆಚರಿಸಿದರೆ ಉಳಿದ 23 ಏಕಾದಶಿ ವ್ರತಗಳನ್ನೂ ಆಚರಿಸಿದಷ್ಟು ಪುಣ್ಯಫಲ ದೊರಕುತ್ತದೆ. ಈ ದಿನದಂದು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಸಾಧ್ಯವಿದ್ದಲ್ಲಿ ಪುಣ್ಯ ನದಿಗೆ ತೆರಳಿ, ಸಂಕಲ್ಪಪೂರ್ವಕವಾಗಿ ಸ್ನಾನ ಮಾಡಿ ಶ್ರೀ ವಿಷ್ಣುವಿಗೆ ಅರ್ಘ್ಯ ಅರ್ಪಿಸಬೇಕು. ಆ ದಿನವೆಲ್ಲ ಹರಿನಾಮ ಸ್ಮರಣೆ, ಶ್ರೀ ವಿಷ್ಣು ಸಹಸ್ರನಾಮ ಪಠಣ, ದೇವತೋಪಾಸನೆಗಳನ್ನು ಆಚರಿಸುವುದರ ಜೊತೆಗೆ ಉಪವಾಸವಿರಬೇಕು. ಸತ್ಯ–ಧರ್ಮ ಮಾರ್ಗದಲ್ಲಿ ನಡೆಯುವ ಸಂಕಲ್ಪ ಮಾಡಬೇಕು. ಈ ಶುಭ ದಿನದಂದು ಆ ಜಗನ್ನಿಯಾಮಕನಾದ ಭಗವಂತನಲ್ಲಿ ಭಕ್ತಿ ಸ್ಥಿರವಾಗಿ ನಿಲ್ಲಲಿ ಎಂದು ಪ್ರಮುಖ ವೈಷ್ಣವ ದೇವಾಲಯಗಳಲ್ಲಿ ವೈಕುಂಠ ದ್ವಾರವನ್ನು ಹೂವುಗಳಿಂದ ನಿರ್ಮಿಸಿ ಭಕ್ತರನ್ನು ಆಕರ್ಷಿಸುವ ಪರಿಪಾಠ ಈಚೆಗೆ ಪ್ರಾರಂಭವಾಗಿದೆ.

ವ್ರತಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ವ್ರತ 'ಚಾತುರ್ಮಾಸ್ಯ'. ಇದು ಪ್ರಾರಂಭವಾಗುವುದು ಆಷಾಢ ಮಾಸದಲ್ಲೇ. ಸಾಧು, ಸಂತರು, ಮಠಾಧಿಪತಿಗಳು ಈ ವ್ರತವನ್ನು ಆಷಾಢ ಮಾಸದಲ್ಲಿ ಪ್ರಾರಂಭಿಸಿ ಶ್ರಾವಣ, ಭಾದ್ರಪದ ನಂತರ ಆಶ್ವಯುಜ ಮಾಸಕ್ಕೆ ಸಂಪನ್ನ ಮಾಡುತ್ತಾರೆ.

ಶ್ರೀ ಚಾಮುಂಡೇಶ್ವರಿಯ ಜನ್ಮದಿನ ಬರುವುದು ಈ ಮಾಸದಲ್ಲೇ. ಪೂರ್ವದಲ್ಲಿ ಚಂಡ–ಮುಂಡರೆಂಬ ರಾಕ್ಷಸರು ಬ್ರಹ್ಮನ ವರಬಲದಿಂದ ಲೋಕ ಕಂಟಕರಾಗಿ ಉಪಟಳ ನೀಡುತ್ತಿರುತ್ತಾರೆ. ಯಜ್ಞ–ಯಾಗಾದಿಗಳಿಗೆ ಭಂಗವನ್ನುಂಟು ಮಾಡುತ್ತಿರುತ್ತಾರೆ. ಅಸುರರ ಒಡೆಯನಾದ ಮಹಿಷಾಸುರನು ದೇವೇಂದ್ರನ ಸೈನ್ಯವನ್ನು ಸೋಲಿಸಿ, ಇಂದ್ರನ ಸಿಂಹಾಸನವನ್ನು ಆಕ್ರಮಿಸಿಕೊಂಡಿರುತ್ತಾನೆ. ಪರಾಜಿತರಾದವರು ವೈಕುಂಠಕ್ಕೆ ತೆರಳಿ ತಮಗೆ ಒದಗಿರುವ ದುಸ್ಥಿತಿಯನ್ನು ಹೇಳಿಕೊಳ್ಳುತ್ತಾರೆ. ಮಹಿಷನು ತನಗೆ 'ಹೆಣ್ಣಿನಿಂದ ಮಾತ್ರ ಮರಣ' ಎಂಬ ವರವನ್ನು ಪಡೆದಿದ್ದರಿಂದ ಒಂದು ಅತ್ಯಪೂರ್ವ ಸ್ತ್ರೀಶಕ್ತಿಯನ್ನು ಉದ್ಭವ ಮಾಡುವ ತೀರ್ಮಾನವಾಗುತ್ತದೆ. ಆಗ ತ್ರಿಮೂರ್ತಿಗಳ ಮುಖದಿಂದ ತೇಜಃಪುಂಜವಾದ ಶಕ್ತಿಯೊಂದು ಹೊರಹೊಮ್ಮಿ ನಿರತಿಶಯ ತೇಜೋರೂಪವಾದ ದಿವ್ಯ ನಾರಿಯ ರೂಪವನ್ನು ತಾಳುತ್ತದೆ. ಶಿವನಿಂದ ಹೊರಟ ಶಾಂಭವ ತೇಜಸ್ಸು ದೇವಿಯ ಮುಖವಾಗುತ್ತದೆ. ವಿಷ್ಣುವಿನಿಂದ ಹೊಮ್ಮಿದ ವೈಷ್ಣವ ತೇಜಸ್ಸು ಬಾಹುಗಳಾಗುತ್ತವೆ. ಬ್ರಹ್ಮನಿಂದ ಹೊರಟ ಬ್ರಹ್ಮ ತೇಜಸ್ಸು ದೇವಿಯ ಪಾದಗಳಾಗುತ್ತವೆ. ಇತರ ಮೂವತ್ತುಮೂರು ಕೋಟಿ ದೇವತೆಗಳ ವಿಧವಿಧವಾದ ಶಕ್ತಿಗಳು ದೇವಿಯ ಅಂಗಾಂಗಗಳಾಗುತ್ತವೆ. ನೋಡ ನೋಡುತ್ತಿದ್ದಂತೆಯೇ ಅತಿಶಯ ಸುಂದರಿಯೂ, ರುದ್ರ ರಮಣೀಯಳೂ ನಭೋ ಮಂಡಲವನ್ನೇ ವ್ಯಾಪಿಸಿಬಿಡುವ, ನಾನಾ ವಿಧವಾದ ಆಯುಧಗಳನ್ನು ಹಿಡಿದಿರುವ ದೇವಿಯು ಪ್ರತ್ಯಕ್ಷಳಾಗುತ್ತಾಳೆ. ಈ ರೀತಿಯಾಗಿ 'ಅಯೋನಿಜೆ'ಯಾಗಿ ದೇವಿಯು ಆವಿರ್ಭವಿಸಿದ ದಿನವೇ ಆಷಾಢಮಾಸ ಕೃಷ್ಣ ಪಕ್ಷ ಸಪ್ತಮಿ, ಅದುವೇ ಶ್ರೀ ಚಾಮುಂಡೇಶ್ವರಿ ಜನ್ಮದಿನ. 17.7.2025.



ಅನಂತರ ಅಪರಾಜಿತಳಾದ ದೇವಿ ಮಹಿಷನ ಸೈನ್ಯವನ್ನೆಲ್ಲಾ ಏಕಾಂಗಿಯಾಗಿ ಸಂಹರಿಸುತ್ತಾಳೆ. ಜೊತೆಗೆ ದೇವಿಯ ದಿವ್ಯ ಶಕ್ತಿಯಿಂದ ಹೊರ ಹೊಮ್ಮಿದ ನವದುರ್ಗೆಯರಾದ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟ, ಕೂಷ್ಮಾಂಡ, ಸ್ಕಂದಮಾತ, ಕಾತ್ಯಾಯನಿ, ಕಾಲರಾತ್ರಿ, ಗೌರಿ ಮತ್ತು ಸಿದ್ಧಿಧಾತ್ರಿ ಎಂಬ ದೇವಿಯರು ಶ್ರೀ ಚಾಮುಂಡೇಶ್ವರಿಯ ಸಹಾಯಕ್ಕೆ ನಿಲ್ಲುತ್ತಾರೆ. ಈ ದೇವಿಯ ಅವತಾರದಲ್ಲೇ ಶುಂಭ–ನಿಶುಂಭ, ಧೂಮ್ರಾಕ್ಷ, ರಕ್ತಬೀಜ, ಚಂಡ–ಮುಂಡರೆಂಬ ಅನೇಕ ದೈತ್ಯರನ್ನು ಸಂಹಾರ ಮಾಡುತ್ತಾರೆ. ಈ ಭಗವತಿಯು ಚಂಡ–ಮುಂಡರನ್ನು ಸಂಹರಿಸಿದ್ದಕ್ಕೆ 'ಚಾಮುಂಡೇಶ್ವರಿ' ಎಂದೂ, ಮಹಿಷಾಸುರನನ್ನು ಕೊಂದದ್ದಕ್ಕೆ 'ಮಹಿಷಾಸುರ ಮರ್ಧಿನಿ' ಎಂದೂ ಲೋಕವಿಖ್ಯಾತಳಾಗಿದ್ದಾಳೆ.

ಇದೇ ಯುದ್ಧದಲ್ಲಿ ದೇವಿಯ ಸಹಾಯಕ್ಕಾಗಿ ಅನೇಕ ಶಕ್ತಿದೇವಿಯರು ಜಗದೀಶ್ವರಿಯ ಶರೀರದಿಂದ ಉತ್ಪತ್ತಿಯಾಗುತ್ತಾರೆ. ಅವರಲ್ಲಿ ಪ್ರಮುಖರಾದವರು ಸಪ್ತಮಾತೃಕೆಯರಾದ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ ಎಂಬ ನಾಮಾಂಕಿತರು. ಇದರ ಪೂರ್ಣ ಪಾಠ ಶ್ರೀದೇವೀ ಮಹಾತ್ಮೆಯಲ್ಲಿ ದೊರಕುತ್ತದೆ.

ಆಷಾಢ ಮಾಸದ ಇನ್ನೊಂದು ವಿಶಿಷ್ಟತೆ ಏನೆಂದರೆ, ಈ ಮಾಸದಲ್ಲಿ ಬರುವ 'ಶುಕ್ರವಾರ'ಗಳು. ಈ ಶುಕ್ರವಾರಗಳಂದು ಸುಮಂಗಲಿಯರು ಮನೆಯಲ್ಲಿ ಕಳಸ ವಿಟ್ಟು ಶ್ರೀ ಲಕ್ಷ್ಮೀಯನ್ನು ಪೂಜೆ ಮಾಡಿ ನೆರೆಹೊರೆಯ ಮುತ್ತೈದೆಯರನ್ನು ಕರೆದು ಅರಿಶಿನ–ಕುಂಕುಮ, ತಾಂಬೂಲ, ವಿವಿಧ ಪ್ರಸಾದಗಳನ್ನು ಕೊಟ್ಟು ದೀರ್ಘ ಮಾಂಗಲ್ಯದ ಶುಭಾಶಯ ಕೋರುತ್ತಾರೆ.

ಇದೇ ಮಾಸದ ಅಂತ್ಯಕ್ಕೆ ಬರುವ ಅಮಾವಾಸ್ಯೆ ಶ್ರೀ ಜ್ಯೋತಿರ್ಭೀಮೇಶ್ವರ ವ್ರತ ಅಥವಾ ಭೀಮನ ಅಮಾವಾಸ್ಯೆ ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದು, ಇದು ಹಲವಾರು ಧಾರ್ಮಿಕ ಹಿನ್ನಲೆಗಳುಳ್ಳ ಶ್ರೇಷ್ಠ ಪರ್ವ ಕಾಲವಾಗಿದೆ. ಈ ದಿನದಂದು ಪಿತೃತರ್ಪಣ ಆಚರಣೆ ಅತ್ಯಂತ ಪುಣ್ಯಪ್ರದವಾದದ್ದು ಎಂಬ ಪ್ರತೀತಿ ಇದೆ. ಇದೇ ದಿನ ಸ್ವಯಂಪಾಕ ದಾನ, ನವಧಾನ್ಯ ದಾನಗಳು ಮಹತ್ವವುಳ್ಳವಾಗಿವೆ. ಈ ಮಾಸದಲ್ಲಿ ಗಾಳಿ ಚೆನ್ನಾಗಿ ಬೀಸುವುದರಿಂದ ಗಾಳಿಪಟ ಹಾರಿಸುವ ವಾಡಿಕೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಇದನ್ನು 'ಪಟದ ಹಬ್ಬ' ಎಂತಲೂ ಕರೆಯುತ್ತಾರೆ.



ವಿ.ಕೇಶವಮೂರ್ತಿ
ಜ್ಯೋತಿಷ ವಿದ್ವಾನ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆ

ಕೋರ್ಟ್ ನಿರ್ಣಯದ ಬಳಿಕ ಪೂರ್ಣ ಫಲಿತಾಂಶ ಲಭ್ಯ!

ಚುನಾವಣೆ ನಡೆದ ಒಟ್ಟು ನಿರ್ದೇಶಕ ಸ್ಥಾನ 12; ಸದ್ಯಕ್ಕೆ ಪ್ರಕಟಿತ ಸ್ಥಾನ 9; ಇದರಲ್ಲಿ ಕಾಂಗ್ರೆಸ್ ಬೆಂಬಲಿತರು 6(ಓರ್ವ ಅವಿರೋಧ ಆಯ್ಕೆ); ಜೆಡಿಎಸ್ ಬೆಂಬಲಿತರು 2; ಬಿಜೆಪಿ ಬೆಂಬಲಿತ ಒಬ್ಬರು ಆಯ್ಕೆ

ಮೈಸೂರು, ಜೂ.26(ಎಂಕೆ)– ಸಾರ್ವತ್ರಿಕ ಚುನಾವಣೆಯನ್ನೂ ಮೀರಿಸುವಂತೆ ಜಿದ್ದಾಜಿದ್ದಿಯಿಂದ ನಡೆದ ಮೈಸೂರು–ಚಾಮರಾಜನಗರ ಜಿಲ್ಲೆ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಪಾರುಪತ್ಯ ಮೆರೆದಿದ್ದಾರೆ. ಈ ಬಾರಿ ಬ್ಯಾಂಕ್ ಅಧಿಕಾರ ಗದ್ದುಗೆ ಹಿಡಿಯಲು ಸಜ್ಜಾಗಿದೆ.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಕ್ಕೆ ಗುರುವಾರ ನಡೆದ ಮತದಾನದ ಬಳಿಕ ಈ ಹಿಂದೆಯೇ ಅವಿರೋಧ ಆಯ್ಕೆಯಾಗಿರುವ ಒಂದು ಸ್ಥಾನವೂ ಸೇರಿ ಒಟ್ಟು 9 ಕ್ಷೇತ್ರಗಳ ಫಲಿತಾಂಶ ಪ್ರಕಟಿಸಲಾಯಿತು. ನ್ಯಾಯಾಲಯದಿಂದ ಅನುಮತಿ ಪಡೆದು ಮತ ಚಲಾಯಿಸಿರುವ 4 ಕ್ಷೇತ್ರಗಳ ಫಲಿತಾಂಶವನ್ನು ಕಾಯ್ದಿರಿಸಲಾಗಿದೆ.

ಕೈ ಮೇಲುಗೈ: ಈ ಬಾರಿ ಹೇಗಾದರೂ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಮೇಲುಗೈ ಸಾಧಿಸಲೇಬೇಕೆಂಬ ಕಾಂಗ್ರೆಸ್ ಪ್ರಯತ್ನ ಫಲ ನೀಡಿದೆ. ಫಲಿತಾಂಶ ಪ್ರಕಟವಾದ 9ರಲ್ಲಿ 6 ಮಂದಿ(ಒಬ್ಬ ಅವಿರೋಧ ಆಯ್ಕೆ ಸೇರಿ) ಕಾಂಗ್ರೆಸ್ ಬೆಂಬಲಿತರು ಆಯ್ಕೆಯಾಗಿದ್ದಾರೆ. ಇಬ್ಬರು ಜೆಡಿಎಸ್ ಬೆಂಬಲಿತರು ಹಾಗೂ ಒಬ್ಬರು ಬಿಜೆಪಿ ಬೆಂಬಲಿತರು ಗೆಲುವು ಸಾಧಿಸಿದ್ದಾರೆ.

ನ್ಯಾಯಾಲಯದಿಂದ ಅನುಮತಿ ಪಡೆದು ಚಲಾಯಿಸಿರುವ ನಾಲ್ಕು ಕ್ಷೇತ್ರ ಗಳ ಮತ ಎಣಿಕೆಯನ್ನು ನ್ಯಾಯಾಲಯದ ಸೂಚನೆ ನಂತರವೇ ಎಣಿಕೆ ನಡೆಸಿ, ಫಲಿತಾಂಶ ಪ್ರಕಟಿಸಬೇಕಿದೆ. ಇದರಲ್ಲಿ ಕಾಂಗ್ರೆಸ್ ಬೆಂಬಲಿತರು ಎರಡರಲ್ಲಿ ಸಮಬಲ ಸಾಧಿಸಿದ್ದಾರೆ. ಹಾಗೆಯೇ ಎರಡರಲ್ಲಿ ಜೆಡಿಎಸ್ ಬೆಂಬಲಿತರು ಮುನ್ನಡೆ ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಆಶಪ್ಪ ಪ್ರಕಟಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತರು: ಕಾಂಗ್ರೆಸ್ ಬೆಂಬಲಿತರಾದ ಚಾಮರಾಜನಗರ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಗೆಲುವು ಸಾಧಿಸಿದ್ದಾರೆ. ಆದರೆ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು(ಸಿ.ಅನಿಲ್ ಕುಮಾರ್) ಹಾಗೂ ಅವರ ಪ್ರತಿಸ್ಪರ್ಧಿ ಜಿ.ಕೆ.ಲಕ್ಷ್ಮಿ ಪ್ರಸಾದ್ ಸಮಾನ ಮತಗಳನ್ನು ಗಳಿಸಿದ್ದು, ನ್ಯಾಯಾಲಯದ ಅನುಮತಿ ಪಡೆದಿರುವ ಒಂದೇ ಒಂದು ಮತ ಯಾರಿಗೆ ಚಲಾವಣೆಯಾಗುವುದೋ ಅವರು ಜಯಶಾಲಿಯಾಗಲಿದ್ದಾರೆ.

ಹಾಗೆಯೇ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಕೆ.ಆರ್.ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅವರ ತಂದೆ ದೊಡ್ಡಸ್ವಾಮೇಗೌಡ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಬಂಧಿ ಕೆಂಚಪ್ಪ, ಈ.ಪಿ.ಲೋಕೇಶ, ವೈ.ಎಂ.ಜಯರಾಂ (ಅವಿರೋಧ) ಆಯ್ಕೆಯಾಗಿದ್ದಾರೆ. ಇನ್ನು ಹನೂರು ಮಾಜಿ ಶಾಸಕ ಆರ್.ನರೇಂದ್ರ ಕೂಡ ತಮ್ಮ ಪ್ರತಿಸ್ಪರ್ಧಿ ಬಿ.ಎಸ್.ಮಲ್ಲೇಶ್ ಸಮಾನ ಮತಗಳನ್ನು ಪಡೆದಿದ್ದು, ಫಲಿತಾಂಶ ಕಾಯ್ದಿರಿಸಲಾಗಿದೆ.

ಹರೀಶ್‌ಗೌಡರು ಹ್ಯಾಟ್ರಿಕ್: ಕಾಂಗ್ರೆಸ್ ತೀವ್ರ ಪೈಪೋಟಿ ನಡುವೆಯೂ ಸತತ ಮೂರನೇ ಅವಧಿಗೆ ನಿರ್ದೇಶಕರಾಗಿ ಆಯ್ಕೆಯಾಗುವಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ (ಜಿ.ಡಿ.ಹರೀಶ್) ಯಶಸ್ವಿಯಾಗಿದ್ದಾರೆ. ಇವರ ಬೆಂಬಲಿಗರಾದ ಟಿ.ಪಿ.ಬೋರೇಗೌಡ ಗೆಲುವು ದಾಖಲಿಸಿದ್ದು, ಎಸ್.ಬಿ.ಎಂ. ಮಂಜು ಹಾಗೂ ಟಿ.ರಾಮೇಗೌಡ ಮುನ್ನಡೆ ಕಾಯ್ದುಕೊಂಡಿದ್ದಾರೆ. ಇವರಿಬ್ಬರ ಫಲಿತಾಂಶ ನ್ಯಾಯಾಲಯದ ಆದೇಶದಂತೆ ಪ್ರಕಟವಾಗಬೇಕಿದೆ. ಇನ್ನು ಹಿರಿಯ ಸಹಕಾರಿ ಬಿ.ಎನ್.ಸದಾನಂದ ಅವರು ಏಕೈಕ ಬಿಜೆಪಿ ಬೆಂಬಲಿತರಾಗಿ ಗೆಲುವು ದಾಖಲಿಸಿದ್ದಾರೆ.

ಮತಗಳ ವಿವರ: ಮೈಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಎ) ಎಂ.ಕೆಂಚಪ್ಪ (13 ಮತಗಳು), ತಮ್ಮ ಪ್ರತಿಸ್ಪರ್ಧಿ ಎಂ.ಜೆ.ಸಿದ್ದರಾಜು(12 ಮತಗಳು) ಅವರ ವಿರುದ್ಧ 1 ಮತದ ಅಂತರದಲ್ಲಿ ಜಯಗಳಿಸಿದ್ದಾರೆ. ಹಾಗೆಯೇ ನಂಜನಗೂಡು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ ದಿಂದ(ಕ್ಷೇತ್ರ–1ಬಿ) ಬಿ.ಎನ್.ಸದಾನಂದ (22 ಮತಗಳು), ಟಿ.ನರಸೀಪುರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಸಿ) ಟಿ.ಪಿ.ಬೋರೆಗೌಡ(18 ಮತಗಳು), ಹುಣಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ (ಕ್ಷೇತ್ರ–1ಇ) ಶಾಸಕ ಜಿ.ಡಿ.ಹರೀಶ್‌ಗೌಡ(10 ಮತಗಳು), ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ ದಿಂದ(ಕ್ಷೇತ್ರ–1ಜಿ) ದೊಡ್ಡಸ್ವಾಮೇಗೌಡ (14 ಮತಗಳು), ಪಿರಿಯಾಪಟ್ಟಣ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಎಫ್) ಈ.ಪಿ.ಲೋಕೇಶ(16 ಮತಗಳು), ಚಾಮರಾಜನಗರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಹೆಚ್)ದಿಂದ ಶಾಸಕ ಸಿ.ಪುಟ್ಟರಂಗಶೆಟ್ಟಿ(19 ಮತಗಳು), ಗುಂಡ್ಲುಪೇಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ ದಿಂದ(ಕ್ಷೇತ್ರ–1ಐ) ಹೆಚ್.ಎಂ.ಗಣೇಶ್ ಪ್ರಸಾದ್(22 ಮತಗಳು) ಜಯಶೀಲರಾದರೆ, ಯಳಂದೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ವೈ.ಎಂ.ಜಯರಾಂ ಅವಿರೋಧವಾಗಿ ಆಯ್ಕೆಯಾಗಿದ್ದರು.

ಫಲಿತಾಂಶ ಕಾಯ್ದಿರಿಸಿರುವ ಕ್ಷೇತ್ರಗಳು: ಮತದಾನದ ದಿನದಂದು ಕೋರ್ಟ್‌ನಿಂದ 'ಅರ್ಹ ಮತದಾರ' ಎಂದು ಪರಿಗಣಿತರು ಮಾಡಿರುವ ಮತದಾನದ ಎಣಿಕೆ ಬಾಕಿ ಇದ್ದು, ಕೋರ್ಟ್ ಅನುಮತಿಯ ನಂತರ ಎಣಿಕೆ ನಡೆಸಿ, ಫಲಿತಾಂಶ ಪ್ರಕಟಿಸಲಾಗುವುದು. ಹೆಚ್.ಡಿ. ಕೋಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಡಿ) ಶಾಸಕ ಸಿ.ಅನಿಲ್‌ಕುಮಾರ್(8 ಮತಗಳು) ಹಾಗೂ ಜಿ.ಕೆ.ಲಕ್ಷ್ಮಿ ಪ್ರಸಾದ್ (8 ಮತಗಳು) ಸಮಾನ ಮತಗಳನ್ನು ಪಡೆದರೆ, ಕೊಳ್ಳೇಗಾಲ ಮತ್ತು ಹನೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಜೆ) ಮಾಜಿ ಶಾಸಕ ಆರ್.ನರೇಂದ್ರ 9 ಮತಗಳು ಹಾಗೂ ಬಿ.ಎಸ್.ಮಲ್ಲೇಶ್ 8 ಮತಗಳನ್ನು ಪಡೆದಿದ್ದು, ಕೋರ್ಟ್ ಆದೇಶದನ್ವಯ ಚಲಾವಣೆಯಾಗಿರುವ 1 ಮತವನ್ನು ಎಣಿಕೆ ಮಾಡಿದ್ದು, ಅದನ್ನು ಬಹಿರಂಗ ಪಡಿಸಿಲ್ಲ.

ಹಾಗೆಯೇ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–2) ಸ್ಪರ್ಧಿಸಿದ್ದ ಎಸ್.ಬಿ.ಎಂ.ಮಂಜು 23 ಮತಗಳು, ಜಿ.ಎನ್.ಮಂಜುನಾಥ್ 22 ಮತಗಳು ಹಾಗೂ ಹೆಚ್.ವಿ.ರಾಜೀವ್ 9 ಮತಗಳನ್ನು ಪಡೆದಿದ್ದು, ಕೋರ್ಟ್ ಆದೇಶದನ್ವಯ ಚಲಾವಣೆಯಾಗಿರುವ 3 ಮತಗಳ ಎಣಿಕೆ ಬಾಕಿ ಇದೆ.

ಅದೇ ರೀತಿ ತಾಲೂಕು, ಜಿಲ್ಲೆ ಹಾಗೂ ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ(ಕ್ಷೇತ್ರ–4) ಸ್ಪರ್ಧಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಚಂದ್ರಶೇಖರ್ 23 ಮತಗಳನ್ನು ಪಡೆದರೆ, ಅವರ ಪ್ರತಿಸ್ಪರ್ಧಿ ಟಿ.ರಾಮೇಗೌಡ 27 ಮತಗಳ ಪಡೆದು ಮುನ್ನಡೆ ಕಾಯ್ದುಕೊಂಡಿದ್ದು, ಕೋರ್ಟ್ ಆದೇಶದನ್ವಯ ಚಲಾವಣೆಯಾಗಿರುವ 9 ಮತಗಳ ಎಣಿಕೆ ಬಾಕಿ ಹಿನ್ನಲೆ ಫಲಿತಾಂಶ ಹೊರಬಿದ್ದಿಲ್ಲ.



ಎಂಸಿಡಿಸಿಸಿ ಬ್ಯಾಂಕ್‌ನ ನೂತನ ನಿರ್ದೇಶಕರು


ಪುಟ್ಟರಂಗಶೆಟ್ಟಿ


ಜಿ.ಡಿ.ಹರೀಶ್‌ಗೌಡ


ಗಣೇಶ್ ಪ್ರಸಾದ್


ದೊಡ್ಡಸ್ವಾಮೇಗೌಡ


ಸದಾನಂದ


ಲೋಕೇಶ್


ಜಯರಾಮ್


ಬೋರೇಗೌಡ

359 ಮತ ಚಲಾವಣೆ, 3 ಕುಲಗೆಟ್ಟ ಮತ...

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯ 380 ಮತದಾರರ ಪೈಕಿ 359 ಮಂದಿ ಮತ ಚಲಾಯಿಸಿದ್ದು, ಅದರಲ್ಲಿ ಕ್ಷೇತ್ರ–1(ನಂಜನಗೂಡು)ರಲ್ಲಿ 1, ಸಹಕಾರ ಬ್ಯಾಂಕ್ ಮತ್ತು ಗೃಹ ನಿರ್ಮಾಣ ಸಂಘಗಳ ಕ್ಷೇತ್ರದಲ್ಲಿ 1 ಮತ್ತು ಕ್ಷೇತ್ರ–1ಎ(ಮೈಸೂರು ತಾಲೂಕು)ನಲ್ಲಿ 1 ಕುಲಗೆಟ್ಟ ಮತ ಚಲಾವಣೆಯಾಗಿದೆ. ಹಾಗೆಯೇ ಕೋರ್ಟ್ ಆದೇಶದನ್ವಯ 14 ಮತ ಚಲಾವಣೆಯಾಗಿದ್ದು, ಎಣಿಕೆ ಬಾಕಿ ಇದೆ.

ಶಾಸಕ ಹರೀಶ್‌ಗೌಡರ ಹ್ಯಾಟ್ರಿಕ್ ಗೆಲುವು...

ಹುಣಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ(ಕ್ಷೇತ್ರ–1ಇ) ಸ್ಪರ್ಧಿಸಿದ್ದ ಎಂಸಿಡಿಸಿಸಿ ಬ್ಯಾಂಕ್‌ನ ನಿಕಟಪೂರ್ವ ಅಧ್ಯಕ್ಷರೂ ಆದ ಶಾಸಕ ಜಿ.ಡಿ. ಹರೀಶ್‌ಗೌಡ(ಜಿ.ಡಿ.ಹರೀಶ್) ನಿರೀಕ್ಷೆಯಂತೆ ಗೆಲುವು ಸಾಧಿಸುವ ಮೂಲಕ ಎಂಸಿಡಿಸಿಸಿ ಬ್ಯಾಂಕ್‌ಗೆ ಸತತ ಮೂರನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ತಮ್ಮ ಪ್ರತಿಸ್ಪರ್ಧಿ ಜೆ.ಶಿವಣ್ಣ(4 ಮತಗಳು) ವಿರುದ್ಧ 10 ಮತಗಳನ್ನು ಪಡೆದು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

> ಅವಿರೋಧ ಆಯ್ಕೆ ಸೇರಿ 9 ಕ್ಷೇತ್ರಗಳ ಫಲಿತಾಂಶ ಪ್ರಕಟಿಸಲಾಗಿದೆ. ನ್ಯಾಯಾಲಯದ ಆದೇಶದಂತೆ ನಾಲ್ಕು ಕ್ಷೇತ್ರಗಳ ಮತ ಎಣಿಕೆ ಬಾಕಿ ಇದೆ. ಕ್ಷೇತ್ರ–4(ತಾಲೂಕು, ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯವ್ಯಾಪ್ತಿ)ರಲ್ಲಿ ಕೋರ್ಟ್ ಆದೇಶದನ್ವಯ ಚಲಾವಣೆಯಾಗಿರುವ 9 ಮತಗಳ ಎಣಿಕೆ ಬಾಕಿ ಇದೆ. ಕ್ಷೇತ್ರ–2ರಲ್ಲಿ 3, ಕ್ಷೇತ್ರ–1ಜೆ(ಕೊಳ್ಳೆಗಾಲ ಮತ್ತು ಹನೂರು) ಯಲ್ಲಿ ಕೋರ್ಟ್ ಆದೇಶದನ್ವಯ 1 ಮತ ಎಣಿಕೆ ಮಾಡಿದ್ದು, ಫಲಿತಾಂಶ ಬಹಿರಂಗಪಡಿಸಿಲ್ಲ. ಹಾಗೆಯೇ ಕ್ಷೇತ್ರ–1ಡಿ(ಹೆಚ್.ಡಿ.ಕೋಟೆ) ಯಲ್ಲಿ 1 ಮತ ಎಣಿಕೆ ಬಾಕಿ ಇದೆ. ಮತಪೆಟ್ಟಿಗೆಗಳನ್ನು ಭದ್ರವಾಗಿರಿಸಿ, ಕೋರ್ಟ್ ಆದೇಶದ ನಂತರ ಮತ ಎಣಿಕೆ ನಡೆಸಿ, ಈ ಕ್ಷೇತ್ರಗಳ ಫಲಿತಾಂಶ ಪ್ರಕಟಿಸಲಾಗುವುದು.
> – **ಆಶಪ್ಪ**, ಎಂಸಿಡಿಸಿಸಿ ಬ್ಯಾಂಕ್ ಚುನಾವಣಾ ರಿಟರ್ನಿಂಗ್ ಅಧಿಕಾರಿ

ಕುತೂಹಲ ಕಾಯ್ದಿರಿಸಿದ ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಕ್ಷೇತ್ರ

ತಾಲೂಕು, ಜಿಲ್ಲೆ ಹಾಗೂ ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿ ರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ(ಕ್ಷೇತ್ರ–4) ಸ್ಪರ್ಧಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಚಂದ್ರಶೇಖರ್ ಹಾಗೂ ಅವರ ಪ್ರತಿಸ್ಪರ್ಧಿ ಜೆಡಿಎಸ್ ಬೆಂಬಲಿತ ಟಿ.ರಾಮೇಗೌಡರ ನಡುವಿನ ಜಿದ್ದಾಜಿದ್ದಿ ಕುತೂಹಲವನ್ನು ಕಾಯ್ದಿರಿಸಿದೆ. ಎಸ್.ಚಂದ್ರಶೇಖರ್ 23 ಮತಗಳನ್ನು ಪಡೆದಿದ್ದರೆ, ಟಿ.ರಾಮೇಗೌಡ 27 ಮತಗಳನ್ನು ಪಡೆದು ಮುನ್ನಡೆ ಕಾಯ್ದುಕೊಂಡಿದ್ದರೂ ಕೋರ್ಟ್ ಆದೇಶದನ್ವಯ ಚಲಾವಣೆಯಾಗಿರುವ 9 ಮತಗಳು ಯಾರ ಪಾಲಾಗಲಿವೆ ಎಂಬುದು ಎಲ್ಲರ ಗಮನ ಸೆಳೆದಿದೆ.

ಸಂಭ್ರಮಾಚರಣೆ...

ಎಂಸಿಡಿಸಿಸಿ ಬ್ಯಾಂಕ್ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ವಿಜೇತ ಅಭ್ಯರ್ಥಿಗಳ ಬೆಂಬಲಿಗರು ಪಟಾಕಿ ಸಿಡಿಸಿ, ಸಂಭ್ರಮಾಚರಣೆ ನಡೆಸಿದರು. ಮೂರನೇ ಬಾರಿಗೆ ಆಯ್ಕೆಯಾದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಮೇಲೆತ್ತಿ ಅಭಿ ಮಾನಿಗಳು ಜೈಕಾರ ಕೂಗಿದರು. ಹಾಗೆಯೇ ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್‌ಗೆ ಬಾರೀ ಗಾತ್ರದ ಹಾರ ಹಾಕಿ ವಿಜಯದ ನಗೆ ಬೀರಿದರು.

> ಮಾಜಿ ಸಚಿವ ಹಾಗೂ ಹಾಲಿ ಶಾಸಕನಾಗಿದ್ದರೂ ಕ್ಷೇತ್ರದಲ್ಲಿ ಒಂದು ಮತದಿಂದ ಗೆದ್ದಿರುವುದು ನನ್ನ ಗೆಲುವಲ್ಲ.
> – **ಸಿ.ಪುಟ್ಟರಂಗಶೆಟ್ಟಿ**, ಶಾಸಕ.

> ಚುನಾವಣೆಯಲ್ಲಿ ಗೆಲ್ಲುವ ನಿರೀಕ್ಷೆ ಇತ್ತು. ಡ್ರಾ ಆಗುತ್ತೆ ಎಂದುಕೊಂಡಿರಲಿಲ್ಲ. ಆದರೂ ಎಣಿಕೆಯಾಗದೆ ಇರುವ ಮತ ನನ್ನ ಪರವೇ ಆಗಲಿದ್ದು, ಈಗಲೂ ಗೆಲ್ಲುವ ವಿಶ್ವಾಸವಿದೆ.
> – **ಅನಿಲ್ ಚಿಕ್ಕಮಾದು**, ಶಾಸಕ

> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರ ಸಕಾಲದಲ್ಲಿ ಚುನಾವಣೆ ನಡೆಸದೆ ಸಹಕಾರಿ ನಿಯಮಗಳನ್ನೇ ಗಾಳಿಗೆ ತೂರಿ, ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿ ತಂತ್ರ ನಡೆಸಿ, ಬ್ಯಾಂಕಿನ ಚುಕ್ಕಾಣಿ ಹಿಡಿಯಲು ಮುಂದಾಗಿರುವುದು ದುರ್ದೈವದ ಸಂಗತಿಯಾಗಿದೆ. ಇದಕ್ಕೆ ಸಹಕಾರಿಗಳು ಈ ಚುನಾವಣೆಯ ಫಲಿತಾಂಶದ ಮೂಲಕ ತಕ್ಕ ಉತ್ತರ ನೀಡಿದ್ದಾರೆ.
> – **ಜಿ.ಡಿ.ಹರೀಶ್ ಗೌಡ**, ಶಾಸಕರು ಹಾಗೂ ನಿಕಟಪೂರ್ವ ಅಧ್ಯಕ್ಷ, ಎಂಸಿಡಿಸಿಸಿ ಬ್ಯಾಂಕ್.


ಕೆ.ಆರ್.ನಗರ ತಾಲೂಕು ಕ್ಷೇತ್ರದಿಂದ ಜಯಗಳಿಸಿದ ದೊಡ್ಡಸ್ವಾಮೇಗೌಡರ ವಿಜಯೋತ್ಸವ


ಸತತ ಮೂರನೇ ಬಾರಿಗೆ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಜಿ.ಡಿ.ಹರೀಶ್ ಗೌಡರ ಸಂಭ್ರಮಾಚರಣೆ


ಪಿರಿಯಾಪಟ್ಟಣ ತಾಲೂಕು ಕ್ಷೇತ್ರದಿಂದ ಜಯಗಳಿಸಿದ ಈ.ಪಿ.ಲೋಕೇಶ್ ವಿಜಯೋತ್ಸವ


ಗುಂಡ್ಲುಪೇಟೆ ತಾಲೂಕು ಕ್ಷೇತ್ರದಿಂದ ವಿಜಯ ಸಾಧಿಸಿದ ಶಾಸಕ ಗಣೇಶ್ ಪ್ರಸಾದ್ ಸಂಭ್ರಮ


ನಂಜನಗೂಡು ತಾಲೂಕು ಕ್ಷೇತ್ರದಿಂದ ಆಯ್ಕೆಯಾದ ಬಿಜೆಪಿ ಬೆಂಬಲಿತ ಅಭ್ಯರ್ಥಿ ಸದಾನಂದ


ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ಹಿನ್ನೆಲೆ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು

ತರಕಾರಿ ಮಾರುಕಟ್ಟೆ ಬಳಿ ಎಂಜಿ ರಸ್ತೆಯಲ್ಲಿ ಮತ್ತೆ ಸಂಚಾರ ಸಮಸ್ಯೆ

ಮೈಸೂರು, ಜೂ.26(ಆರ್‌ಕೆ)–ಮೈಸೂರಿನ ಮಹಾತ್ಮಗಾಂಧಿ ರಸ್ತೆ (ಎಂಜಿ ರಸ್ತೆ)ಯ ತರಕಾರಿ ಮಾರುಕಟ್ಟೆ ಬಳಿ ಮತ್ತೆ ವಾಹನ ಸಂಚಾರ ಸಮಸ್ಯೆ ಉಂಟಾಗಿದೆ.

10 ತಿಂಗಳ ಹಿಂದಷ್ಟೇ ಜಿಲ್ಲಾಡಳಿತ, ನಗರ ಪೊಲೀಸ್ ಘಟಕ ಹಾಗೂ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ರಸ್ತೆ ಬದಿ ವ್ಯಾಪಾರ ಮಾಡುತ್ತಿದ್ದವರನ್ನು ಹಿಂದಕ್ಕೆ ಸರಿಸಿದ್ದರು. ಅಲ್ಲದೆ ಅವರಿಗೆ ವ್ಯಾಪಾರ ಮಾಡಲು, ವಾಹನಗಳಿಂದ ತರಕಾರಿ ಇಳಿಸಲು, ಲೋಡ್ ಮಾಡಿಕೊಳ್ಳಲು ಸ್ಥಳಾವಕಾಶ ಕಲ್ಪಿಸಿ, ಇನ್ನು ಮುಂದೆ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಪಡಿಸದಂತೆ ತಾಕೀತು ಮಾಡಿದ್ದರು.

ಅಲ್ಲದೆ, ಮಾನಸ ರಸ್ತೆ ಜಂಕ್ಷನ್‌ನಿಂದ ಅಂಡರ್ ಬ್ರಿಡ್ಜ್‌ವರೆಗೆ ಎಂಜಿ ರಸ್ತೆಗೆ ಸಿಮೆಂಟ್ ಕಾಂಕ್ರಿಟ್ ವಿಭಜಕವನ್ನು ಅಳವಡಿಸಲಾಗಿತ್ತು. ಆದರೆ, ಅದರಿಂದ ವಾಹನಗಳು ಎಲ್ಲೆಂದರಲ್ಲಿ ತಿರುವು ತೆಗೆದುಕೊಳ್ಳುವುದು ತಪ್ಪಿತೇ ಹೊರತು, ರಸ್ತೆ ಬದಿ ವ್ಯಾಪಾರ ಮಾಡುವುದನ್ನು ಸಂಪೂರ್ಣವಾಗಿ ತಡೆಯಲು ಈಗ ಸಾಧ್ಯವಾಗಿಲ್ಲ.

ತರಕಾರಿಗಳನ್ನು ತರುವ ವಾಹನಗಳು ಮಾರುಕಟ್ಟೆಯ ಎಲ್ಲೆಂದರಲ್ಲಿ ಅನ್‌ಲೋಡ್ ಮಾಡುತ್ತಿರುವುದಲ್ಲದೆ, ರಸ್ತೆ ಬದಿಯೇ ವ್ಯಾಪಾರ ಮಾಡುತ್ತಿರುವುದರಿಂದ ಗ್ರಾಹಕರು ತಮ್ಮ ವಾಹನಗಳನ್ನು ಕಂಡ ಕಂಡಲ್ಲಿ ನಿಲ್ಲಿಸಿ ತರಕಾರಿ ಖರೀದಿಸುತ್ತಿರುವುದರಿಂದ ಅಲ್ಲಿ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿದೆ. ನಿಗಧಿತ ಮಾರುಕಟ್ಟೆ ಸ್ಥಳಕ್ಕೆ ಹೋಗದೇ ಎಲ್ಲರೂ ರಸ್ತೆ ಬದಿಯೇ ವ್ಯಾಪಾರ ಮಾಡುತ್ತಿದ್ದು, ತೆರವುಗೊಳಿಸಲು ಅವರಿಗೆ ಜನಪ್ರತಿನಿಧಿಗಳ ಅಭಯ ಹಸ್ತವಿರುವ ಕಾರಣ ಸಾಧ್ಯವಾಗಿಲ್ಲ. ಒಂದು ವೇಳೆ ಸಂಚಾರ ಪೊಲೀಸರು ರಸ್ತೆ ಬದಿ ವ್ಯಾಪಾರ ಮಾಡಬೇಡಿ. ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದರೂ ತರಕಾರಿ ವ್ಯಾಪಾರಸ್ಥರು ಕೇಳುತ್ತಿಲ್ಲ.

ಮುಂಜಾನೆ 5ರಿಂದ ಬೆಳಗ್ಗೆ 11 ಗಂಟೆವರೆಗಂತೂ ಈ ರಸ್ತೆಯಲ್ಲಿನ ಸಂಚಾರ ದುಸ್ತರವಾಗಿದ್ದು, ಆಂಬುಲೆನ್ಸ್, ತುರ್ತು ವಾಹನ, ಸರ್ಕಾರಿ ವಾಹನಗಳು ಎಂಜಿ ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುವುದಿಲ್ಲ. 2024ರ ಜೂನ್ 19ರಂದು ಅಂದಿನ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಕಮಿಷ್ನರ್ ರಮೇಶ್ ಬಾನೋತ್ ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳು ತರಕಾರಿ ಮಾರುಕಟ್ಟೆಯನ್ನು ಪರಿಶೀಲಿಸಿ ರಸ್ತೆ ಬದಿ ಇದ್ದವರನ್ನು ತೆರವುಗೊಳಿಸಿ ಹಿಂಬದಿಯಲ್ಲಿ ಮಾರಾಟ ಮಾಡುವಂತೆ ಸ್ಥಳಾಂತರಿಸಿದ್ದರು. ಅದರ ಬೆನ್ನಲ್ಲೇ 2024ರ ಜೂನ್ 24ರಂದು ನಗರ ಪೊಲೀಸ್ ಕಮಿಷ್ನರ್, ತರಕಾರಿ ಮಾರುಕಟ್ಟೆ ಬಳಿ ಎಂಜಿ ರಸ್ತೆಯಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಿ ಆದೇಶಿಸಿದ್ದರು. ಅದರಿಂದ ಸ್ವಲ್ಪ ಮಟ್ಟಿಗೆ ಅಲ್ಲಿ ಸಂಚಾರ ಸಮಸ್ಯೆ ಬಗೆಹರಿದಿತ್ತು. ಆದರೆ, ಈಗ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿದೆ.




> ಎಂಜಿ ರಸ್ತೆ ಮಾರುಕಟ್ಟೆ ಬಳಿ ಸಾರ್ವಜನಿಕರಿಗೆ ಸಂಚರಿಸಲು ತೊಂದರೆ ಉಂಟಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಸಮಯಾವಕಾಶ ನೋಡಿಕೊಂಡು ನಗರ ಪೊಲೀಸ್ ಕಮಿಷ್ನರ್, ಸಂಚಾರ ವಿಭಾಗದ ಎಸಿಪಿ ಹಾಗೂ ನಗರ ಪಾಲಿಕೆ ಕಮಿಷ್ನರ್‌ರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ರಸ್ತೆ ಬದಿ ತರಕಾರಿ ವ್ಯಾಪಾರ ಮಾಡುತ್ತಿರುವವರನ್ನು ಹಿಂಬದಿಗೆ ಸರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುತ್ತೇನೆ.
> –**ಜಿ.ಲಕ್ಷ್ಮೀಕಾಂತರೆಡ್ಡಿ**, ಜಿಲ್ಲಾಧಿಕಾರಿ, ಮೈಸೂರು.

ಕೆಆರ್‌ಎಸ್ ಜಲಾಶಯದಿಂದ 50ರಿಂದ 80 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ನದಿ ತಟದಲ್ಲಿ ಪ್ರವಾಹದ ಭೀತಿ; ಜನರಿಗೆ ಎಚ್ಚರಿಕೆ ಸಂದೇಶ

ಶ್ರೀರಂಗಪಟ್ಟಣ, ಜೂ.26– ಕೊಡಗು ಮತ್ತು ಹಾಸನದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಪರಿಣಾಮ ಕೆಆರ್‌ಎಸ್ ಜಲಾಶಯಕ್ಕೆ ಭಾರೀ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 50 ಸಾವಿರದಿಂದ 80 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.


124.80 ಅಡಿ ಗರಿಷ್ಠ ಸಾಮರ್ಥ್ಯದ ಕೆಆರ್‌ಎಸ್ ಜಲಾಶಯದಲ್ಲಿ 121 ಅಡಿ ನೀರು ಭರ್ತಿಯಾಗುತ್ತಿದ್ದಂತೆಯೇ ಜಲಾಶಯದ ಸುರಕ್ಷತಾ ದೃಷ್ಟಿಯಿಂದ ಹೆಚ್ಚುವರಿ ನೀರನ್ನು ಹೊರಬಿಡಲಾಗುತ್ತಿದೆ. ಇಂದು ಬೆಳಗ್ಗೆ ಜಲಾಶಯದ ಒಳ ಹರಿವು 33ಸಾವಿರ ಕ್ಯೂಸೆಕ್ ಆಗಿದ್ದು, ಕೊಡಗಿನ ಹಾರಂಗಿ ಮತ್ತು ಹಾಸನದ ಹೇಮಾವತಿ ಜಲಾಶಯಗಳಿಂದ ಕೆಆರ್‌ಎಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವ ಕಾರಣ ಗುರುವಾರ ಸಂಜೆ 6ಗಂಟೆಯಿಂದ 50 ಸಾವಿರದಿಂದ 80ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದ್ದು, ಕಾವೇರಿ ನದಿ ಪಾತ್ರದಲ್ಲಿ ಪ್ರವಾಹದ ಭೀತಿ ಎದುರಾಗಿದೆ.



ಶ್ರೀರಂಗಪಟ್ಟಣದ ಕಾವೇರಿ ನದಿ ಪಾತ್ರದ ಗ್ರಾಮಗಳಿಗೆ ಮುಳುಗಡೆ ಭೀತಿ ಎದುರಾಗಿದೆ. ಅಲ್ಲದೆ ರಂಗನತಿಟ್ಟು, ಬಲಮುರಿ, ಸಂಗಮ, ನಿಮಿಷಾಂಬ, ಮುತ್ತತ್ತಿ ಸೇರಿದಂತೆ ಕಾವೇರಿ ನದಿ ಪಾತ್ರದ ಪ್ರಮುಖ ಪ್ರವಾಸಿ ತಾಣಗಳು ಹಾಗೂ ಸ್ನಾನ ಘಟ್ಟಗಳಿಗೆ ಪ್ರವಾಸಿಗರು ಇಳಿಯದಂತೆ ಕ್ರಮ ವಹಿಸಲಾಗಿದೆ. ಜೊತೆಗೆ ತಗ್ಗು ಪ್ರದೇಶದ ಕೃಷಿ ಪ್ರದೇಶಕ್ಕೂ ರೈತರು ಇಳಿಯದಂತೆ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಕೆಆರ್‌ಎಸ್ ಜಲಾಶಯ ಭರ್ತಿಯಾಗಿರುವುದರಿಂದ ಮಂಡ್ಯ ಜಿಲ್ಲೆಯ ರೈತರ ಮುಖದಲ್ಲಿ ಮಂದಹಾಸ ಮೂಡಿದ್ದು, ಈ ವರ್ಷ ಕೃಷಿ ಚಟುವಟಿಕೆಗೆ ನೀರಿನ ಕೊರತೆ ಉಂಟಾಗುವುದಿಲ್ಲ ಎಂದು ಭಾವಿಸಲಾಗಿದೆ. ಅಲ್ಲದೆ ಬೆಂಗಳೂರು ನಗರಕ್ಕೂ ಕುಡಿಯುವ ನೀರಿಗೆ ಸಮಸ್ಯೆ ಉದ್ಭವಿಸುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ತಮಿಳುನಾಡಿಗೆ ಪ್ರಸಕ್ತ ಸಾಲಿನಲ್ಲಿ ಬಿಡಬೇಕಾದ ನೀರು ವಾಡಿಕೆಗಿಂತ ಮುಂಚೆಯೇ ತಲುಪುತ್ತಿದ್ದು, ಈ ವರ್ಷ ಕರ್ನಾಟಕ ಮತ್ತು ತಮಿಳುನಾಡು ನಡುವೆ ಕಾವೇರಿ ಜಲವಿವಾದ ಉದ್ಭವಿಸುವ ಸಾಧ್ಯತೆ ಇಲ್ಲ ಎಂದು ಅಭಿಪ್ರಾಯಪಡಲಾಗಿದೆ.

ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ಎಂ.ಶಂಕರ್ ನಾಮನಿರ್ದೇಶನ



ಮೈಸೂರು, ಜೂ.26(ಪಿಎಂ)–ತಾಲೂಕಿನ ಹುಯಿಲಾಳು ಗ್ರಾಮದ ಎಂ.ಶಂಕರ್ ಅವರನ್ನು ಮೈಸೂರು ವಿವಿಯ ಸಿಂಡಿಕೇಟ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ. ತಾಲೂಕಿನ ಇಲವಾಲ ಹೋಬಳಿಯ ಸಿ.ಜಟ್ಟಿಹುಂಡಿ ಗ್ರಾಮದ ಡಾ.ಬಸವರಾಜು ಅವರನ್ನು ಹಿಂದುಳಿದ ಪ್ರವರ್ಗದಡಿ ಮೈಸೂರು ವಿವಿಗೆ ಸಿಂಡಿಕೇಟ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು. ಇವರ ನಾಮನಿರ್ದೇಶನ ಹಿಂಪಡೆದು ಎಂ.ಶಂಕರ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಗುರುವಾರ ಅಧಿಸೂಚನೆ ಹೊರಡಿಸಿದ್ದಾರೆ.


ಶ್ರೀ ಯತೀಂದ್ರ ಸಿದ್ದರಾಮಯ್ಯ ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು
ತಿ.ನರಸೀಪುರ ಪುರಸಭಾ
ಅಧ್ಯಕ್ಷರು, ಉಪಾಧ್ಯಕ್ಷರು
ಮತ್ತು ಸದಸ್ಯರುಗಳು.
ಶ್ರೀ ಸೋಮಣ್ಣ .ಎನ್
ಮಾಜಿ ಪುರಸಭಾ ಅಧ್ಯಕ್ಷರು, ತಿನರಸೀಪುರ.

ಕೊಡಗಲ್ಲಿ ಮುಂದುವರೆದ ವರುಣನ ಅಬ್ಬರ

3ನೇ ಬಾರಿಗೆ ಮುಳುಗಡೆಯಾದ ತ್ರಿವೇಣಿ ಸಂಗಮ



ಮಡಿಕೇರಿ,ಜೂ.26– ಕೊಡಗು ಜಿಲ್ಲೆಯಲ್ಲಿ ಆರಿದ್ರಾ ಮಳೆಯ ಅಬ್ಬರಕ್ಕೆ ತಗ್ಗು ಪ್ರದೇಶಗಳ ಮನೆ, ಮಳಿಗೆಗಳು, ಕಾಫಿ, ಅಡಿಕೆ ತೋಟಗಳಿಗೆ ಪ್ರವಾಹ ನೀರು ನುಗ್ಗಿ ನಷ್ಟ ಸಂಭವಿಸಿರುವುದು ಒಂದು ಕಡೆಯಾದರೆ, ನದಿ ಪ್ರವಾಹದಿಂದ ರಸ್ತೆ ಸಂಪರ್ಕ ಬಂದ್ ಆಗಿ ವಾಹನ, ಜನ ಸಂಚಾರ ಸ್ಥಗಿತವಾಗಿರುವ ಬಗ್ಗೆಯೂ ವರದಿಯಾಗಿದೆ.

ಭಾಗಮಂಡಲ ತ್ರಿವೇಣಿ ಸಂಗಮ ಪ್ರಸ್ತುತ ವರ್ಷದ ಮುಂಗಾರಿನಲ್ಲಿ ಇದೀಗ 3ನೇ ಬಾರಿಗೆ ಮುಳುಗಡೆಯಾಗುತ್ತಿದೆ.

ರಸ್ತೆಗಳು ಬಂದ್: ನಾಪೋಕ್ಲುವಿನಿಂದ ಮೂರ್ನಾಡು ಸಂಪರ್ಕಿಸುವ ಮುಖ್ಯ ರಸ್ತೆಯ ಕೊಟ್ಟಮುಡಿ ಜಂಕ್ಷನ್ ಬಳಿ ಹಾಗೂ ಹೊದವಾಡ ಗ್ರಾಮದ ಬೊಳಿಬಾಣೆ ಬಳಿಯ ರಸ್ತೆಯಲ್ಲಿ ಕಾವೇರಿ ನದಿ ಪ್ರವಾಹದಿಂದ ರಸ್ತೆ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಸ್ಥಳೀಯರು ಕಲ್ಲುಬಾಣೆ ತೆಪ್ಪದ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆ ತೆರಳುವ ಸಾಹಸಕ್ಕೂ ಮುಂದಾಗಿರುವುದು ಕಂಡು ಬಂತು. ಚೆರಿಯಪರಂಬು ಕಲ್ಲುಮೊಟ್ಟೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲೂ ಕಾವೇರಿ ನದಿ ಪ್ರವಾಹ ತಲೆದೋರಿದೆ. ಇದರಿಂದ ಚೆರಿಯಪರಂಬು ದರ್ಗಾ ಬಳಿಯ ನಿವಾಸಿಗಳು ನಾಪೋಕ್ಲು ಪಟ್ಟಣಕ್ಕೆ ತೆರಳಲು ಪರದಾಡುವಂತಾಗಿದೆ. ವಿರಾಜಪೇಟೆಗೆ ತೆರಳುವ ಮುಖ್ಯ ರಸ್ತೆ ಹಾಗೂ ಕಕ್ಕಬ್ಬೆ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯಕ್ಕೆ ತೆರಳುವ ರಸ್ತೆಯಲ್ಲಿ ನದಿ ಪ್ರವಾಹದಿಂದ ಸಂಚಾರ ಸ್ಥಗಿತಗೊಂಡಿದೆ. ಅಲ್ಲದೆ ನದಿ ಪ್ರವಾಹದಿಂದ ಕಕ್ಕಬ್ಬೆ ಪಟ್ಟಣದ ಹಲವು ಅಂಗಡಿ ಮಳಿಗೆಗಳಿಗೆ ನೀರು ನುಗ್ಗಿದ್ದು ವರ್ತಕರು ಸಂಕಷ್ಟ ಅನುಭವಿಸುವಂತಾಗಿದೆ. ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ಹೊಳೆಕೆರೆ ರಸ್ತೆ ಸಂಪರ್ಕ ಕಾವೇರಿ ನದಿ ಪ್ರವಾಹದಿಂದ ಕಡಿತಗೊಂಡಿದ್ದು, ಅಂದಾಜು ರಸ್ತೆಯಲ್ಲಿ 4 ಅಡಿ ನೀರು ಹರಿಯುತ್ತಿದೆ. ಪ್ರವಾಹ ಆತಂಕ ಮುಂದುವರೆದಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಇಂದೂ ಶಾಲಾ ಕಾಲೇಜುಗಳಿಗೆ ರಜೆ

ಮಡಿಕೇರಿ: ಜಿಲ್ಲೆಯಲ್ಲಿ ಧಾರಕಾರ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ನಾಳೆ (ಜೂ.27) ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ಪರಿಶೀಲನೆ



ಮಳೆ ಹಾನಿ ಪ್ರದೇಶಗಳಿಗೆ ಸಚಿವ ಬೋಸ್‌ರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಡಿಕೇರಿ: ಜಿಲ್ಲೆಯಾದ್ಯಂತ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸ್ ರಾಜು ಇಂದು ಭೇಟಿ ನೀಡಿ ಮಳೆ ಹಾನಿ ಪರಿಶೀಲನೆ ನಡೆಸಿದರು. ಕುಶಾಲನಗರದ ಕಾವೇರಿ ನದಿ ಪಾತ್ರದ ಪ್ರದೇಶಗಳು, ಮನೆ ಕುಸಿದ ಸ್ಥಳಗಳಿಗೆ, ಕಾವೇರಿ ಸೇತುವೆ ಬಳಿ ಕಾವೇರಿ ನದಿ ವೀಕ್ಷಿಸಿದ ಸಚಿವರು, ಟೌನ್ ಕಾಲೋನಿಯಲ್ಲಿರುವ ಜಯಪ್ರಕಾಶ್ ಮನೆಗೆ ಭೇಟಿ ನೀಡಿ ಪರಿಹಾರ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ನಂಜರಾಯಪಟ್ಟಣ ಗ್ರಾಪಂ ವ್ಯಾಪ್ತಿಯ ರಂಗಸಮುದ್ರ ಕೂಪ್ ಹಾಡಿಗೆ ತೆರಳುವ ಮಾರ್ಗದಲ್ಲಿ ಚಿಕ್ಲಿಹೊಳೆ ಮುಖ್ಯನಾಲೆ ಕಿರು ಸೇತುವೆ ಒಂದು ಭಾಗ ಕುಸಿದಿದ್ದು, ತಡೆಗೋಡೆ ವೀಕ್ಷಿಸಿದರು. ಸುರಕ್ಷತೆ ದೃಷ್ಟಿಯಿಂದ ಕೂಡಲೆ ಸ್ಯಾಂಡ್ ಬಂಡ್ ಹಾಗೂ ಮೆಸ್ ಅಳವಡಿಸಲು ಸಚಿವರು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಕಣಿವೆ ತೂಗು ಸೇತುವೆ ಹಾಗೂ ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಮೈಸೂರು–ಕೊಡಗು ಗಡಿ ಪ್ರದೇಶದ ಸಂಪರ್ಕ ಕೊಂಡಿಯಾಗಿರುವ ಕಣಿವೆ ತೂಗು ಸೇತುವೆ ದುಸ್ಥಿತಿಯಲ್ಲಿರುವ ಕಾರಣ ಶಾಶ್ವತ ಸೇತುವೆ ನಿರ್ಮಾಣ ಕುರಿತು ಶಾಸಕ ಡಾ.ಮಂತರ್ ಗೌಡ ಸಚಿವರ ಗಮನ ಸೆಳೆದರು. ಈ ಬಗ್ಗೆ ಮೈಸೂರು ಜಿಲ್ಲಾ ಶಾಸಕರೊಂದಿಗೆ ಚರ್ಚಿಸಲಾಗುವುದು ಎಂದು ಸಚಿವರು ತಿಳಿಸಿದರು.

ಧಾರಾಕಾರ ಮಳೆಗೆ 500ಕ್ಕೂ ಹೆಚ್ಚು ವಿದ್ಯುತ್ ಕಂಬಗಳ ಹಾನಿ

ವಿರಾಜಪೇಟೆ: ಧಾರಾಕಾರ ಮಳೆಯಿಂದ ದಾಗಿ ತಾಲೂಕಿನಲ್ಲಿ ಸುಮಾರು 500 ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಹಾನಿಯಾಗಿ ಮುರಿದು ಬಿದ್ದು ಇದರಿಂದ ಸೆಸ್ಕಾಂ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ. ಕಳೆದ ವರ್ಷ 645 ವಿದ್ಯುತ್ ಕಂಬಗಳು ಮುರಿದು ಬಿದ್ದಿತ್ತು ಆದರೆ ಈಗ ಎರಡೇ ತಿಂಗಳಲ್ಲಿ ಹೆಚ್ಚು ಗಾಳಿ ಮಳೆಯಿಂದಾಗಿ ಮರಗಳು ರಸ್ತೆಗೆ ಉರುಳಿರುವ ಕಾರಣ 506 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ತಾಲೂಕು ವ್ಯಾಪ್ತಿಯಲ್ಲಿ ಒಟ್ಟು 39 ಮಂದಿ ವಿದ್ಯುತ್ ನಿರ್ವಹಣ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದು. ಶಾಸಕ ಎ.ಎಸ್.ಪೊನ್ನಣ್ಣ ಅವರು 20 ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಅದರಲ್ಲಿ 12 ಮಂದಿ ತಾತ್ಕಾಲಿಕ ಸಿಬ್ಬಂದಿಗಳು ಮಾತ್ರ ಬಂದಿದ್ದಾರೆ.

ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಉತ್ತಮ ವಿದ್ಯುತ್ ಮಾರ್ಗಗಳ ಕಾಮಗಾರಿಗಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರು ಅಂದಾಜು 42 ಕೋಟಿ ರೂ. ಅನುದಾನವನ್ನು ನೀಡಿದ್ದಾರೆ.

ನಿಗಮದ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ ಅವರು ಸಹಕಾರದಿಂದ ಈಗಾಗಲೇ ವಿದ್ಯುತ್ ಸರಬರಾಜು ಅಡಚಣೆ ಆಗದಂತೆ ಗ್ರಾಮೀಣ ಪ್ರದೇಶದ ಕಾಡುಗಳಲ್ಲಿ ಮತ್ತು ತೋಟಗಳಲ್ಲಿದ್ದ ವಿದ್ಯುತ್ ಮಾರ್ಗವನ್ನು ಬದಲಾಯಿಸಿ ರಸ್ತೆಬದಿಯಲ್ಲಿ ಅಳವಡಿಸುವ ಕಾರ್ಯ ಮುಂದುವರಿಯುತ್ತಿದೆ ಎಂದು ಸೆಸ್ಕಾಂ ಉಪವಿಭಾಗ ವಿರಾಜಪೇಟೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಪಿ.ಎಸ್.ಸುರೇಶ್ ತಿಳಿಸಿದರು.

ಇಂದಿನಿಂದ ಕೊಡವ ಹಾಕಿ ಪ್ರೀಮಿಯರ್ ಲೀಗ್

ಮೈಸೂರಿನಲ್ಲಿ 3 ದಿನ ನಡೆಯಲಿರುವ ಪಂದ್ಯಾವಳಿ

ಮೈಸೂರು, ಜೂ.26– ಮೈಸೂರು ಕೊಡವ ಸಮಾಜ ಯೂತ್‌ವಿಂಗ್ ವತಿಯಿಂದ ಆಯೋಜಿಸಿರುವ ಕೊಡವ ಹಾಕಿ ಪ್ರೀಮಿಯರ್ ಲೀಗ್ ಪಂದ್ಯಾವಳಿ ನಾಳೆಯಿಂದ (ಜೂ.27) 3 ದಿನಗಳ ಕಾಲ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

10 ತಂಡಗಳು ಸೆಣಸಾಡಲಿರುವ ಈ ಪಂದ್ಯಾವಳಿ ನಾಳೆ ಬೆಳಗ್ಗೆ 11 ಗಂಟೆಗೆ ಆರಂಭವಾಗಲಿದೆ. ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಕೊಡವ ಸಮಾಜ ಯೂತ್‌ವಿಂಗ್ ಅಧ್ಯಕ್ಷ ಕೋಟೇರ ವೇದಿತ್ ಉತ್ತಪ್ಪ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಟಿ.ಎಸ್.ಶ್ರೀವತ್ಸ, ಮೈಸೂರು ಕೊಡವ ಸಮಾಜದ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್ ಅಧ್ಯಕ್ಷ ಕುಟ್ಟಿಮಾಡ ಮುತ್ತಪ್ಪ, ಕೆ.ಎಂ.ಕಾರ್ಯಪ್ಪ ಅಸೋಸಿಯೇಷನ್ ಅಧ್ಯಕ್ಷ ನಾಯಕಂಡ ತಿಮ್ಮಯ್ಯ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ಒಲಿಂಪಿಯನ್ ಅಂಜಪರವಂಡ ಸುಬ್ಬಯ್ಯ, ಹಾಕಿ ಮೈಸೂರು ಅಧ್ಯಕ್ಷ ಕೊಂಗಂಡ ದಿಲೀಪ್, ಉಪಾಧ್ಯಕ್ಷ ಕೋಟೇರ ಮುದ್ದಯ್ಯ, ಮೈಸೂರು ಕೊಡವ ಸಮಾಜದ ಅಧ್ಯಕ್ಷ ಕೋಜಂಡ ಗಣಪತಿ, ಚಿತ್ರನಟ ವಿಕಾಸ್ ಉತ್ತಯ್ಯ, ನಟಿ ನಿಧಿ ಸುಬ್ಬಯ್ಯ ಭಾಗವಹಿಸಲಿದ್ದಾರೆ. ಮೊದಲ ದಿನವಾದ ನಾಳೆ 6 ಲೀಗ್ ಪಂದ್ಯಗಳು ನಡೆಯಲಿದೆ.

ವಿದ್ಯುತ್ ತಂತಿ ತಾಗಿ ಹಸು ಸಾವು

ಗೋಣಿಕೊಪ್ಪ,ಜೂ.26– ಪೊನ್ನಂಪೇಟೆ ತಾಲೂಕಿನ ಕುಮಟೂರು ಗ್ರಾಮದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯಿಂದ ವಿದ್ಯುತ್ ತಗುಲಿ ಹಸು ಸಾವಿಗೀಡಾಗಿದೆ.

ಕೆ.ಎಂ. ಸತೀಶ್ ನಂಜಪ್ಪ ಎಂಬುವರಿಗೆ ಸೇರಿದ ಕಾಫಿ ತೋಟದಲ್ಲಿ ಗುರುವಾರ ಬೆಳಗ್ಗೆ ಘಟನೆ ನಡೆದಿದೆ. ಹಸುವನ್ನು ಹಗ್ಗ ಕಟ್ಟಿ ಹಿಡಿದುಕೊಂಡು ಹೋಗುತ್ತಿದ್ದಾಗ, ಅವರಿಂದ ತಪ್ಪಿಸಿಕೊಂಡು ಹಸು ಓಡಿಹೋಗಿದೆ. ಈ ಸಂದರ್ಭ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಾಗಿ ಸ್ಥಳದಲ್ಲಿಯೆ ಅಸು ನೀಗಿದೆ. ಹಸು ತಪ್ಪಿಸಿಕೊಂಡು ಓಡಿದ ಕಾರಣ ಸತೀಶ್ ಅಪಾಯದಿಂದ ಪಾರಾಗಿದ್ದಾರೆ.

ಸ್ಥಳಕ್ಕೆ ಸೆಸ್ಕ್ ಅಧಿಕಾರಿಗಳು ಬೇಟಿ ನೀಡಿ ಕ್ರಮಕೈಗೊಂಡಿದ್ದಾರೆ.

ಹೇಮಗಿರಿ ಸಕ್ಕರೆ ಕಾರ್ಖಾನೆ ಕಬ್ಬು ನುರಿಯುವಿಕೆ ಆರಂಭ

ಕಿಕ್ಕೇರಿ, ಜೂ.26– ತಾಲೂಕಿಗೆ ಸಕ್ಕರೆ ಕಾರ್ಖಾನೆ ಜೀವನಾಡಿಯಾಗಿದ್ದು ಸಮಗ್ರ ಅಭಿವೃದ್ಧಿಗೆ ರೈತರು ಸಹಕರಿಸಬೇಕು ಎಂದು ಹೇಮಗಿರಿ ಶುಗರ್ಸ್ ಕಾರ್ಖಾನೆ ಅಧ್ಯಕ್ಷ ರವಿರೆಡ್ಡಿ ತಿಳಿಸಿದರು.

ಸಮೀಪದ ಮಾಕವಳ್ಳಿ ಗ್ರಾಮದಲ್ಲಿನ ಹೇಮಗಿರಿ ಶುಗರ್ಸ್ ಹಾಗೂ ರಿನಿವಬಲ್ಸ್ ಪ್ರೈ.ಲಿ. ವತಿಯಿಂದ ಗುರುವಾರ ಪ್ರಸಕ್ತ ಸಾಲಿನ ಕಬ್ಬು ನುರಿಯುವಿಕೆಗೆ ಚಾಲನೆ ನೀಡಿ ಮಾತನಾಡುತ್ತಾ, ಪ್ರಸಕ್ತ ಸಾಲಿನಿಂದ ಕೋರ ಮಂಡಲ್ ಸಕ್ಕರೆ ಕಾರ್ಖಾನೆಯು ಹೇಮಗಿರಿ ಶುಗರ್ಸ್ ಅವರಿಗೆ ಹಸ್ತಾಂತರಿಸಲಾಗಿದೆ. 4 ಕೋಟಿ ರೂ. ಮುಂಗಡ ಹಣ ನೀಡಿ ಕಬ್ಬು ಕಟಾವು ಗುಂಪುಗಳೊಂದಿಗೆ ಕಳೆದ ಸಾಲಿನಲ್ಲಿ ಪ್ರತಿ ಟನ್ ಕಬ್ಬಿಗೆ 3154 ರೂ.ಗಳನ್ನು ರೈತರಿಗೆ ಸಕಾಲದಲ್ಲಿ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಟನ್ ಕಬ್ಬಿಗೆ 3291 ರೂ. ನಿಗದಿಯಾಗಿದ್ದು ರೈತರಿಗೆ ಹಣ ನೀಡಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದರು.



ಮಾಕವಳ್ಳಿಯ ಹೇಮಗಿರಿ ಶುಗರ್ಸ್ ಹಾಗೂ ರಿನೀವಬಲ್ಸ್ ಕಾರ್ಖಾನೆ ಕಬ್ಬು ನುರಿಯುವಿಕೆಗೆ ಕಾರ್ಖಾನೆ ಉಪಾಧ್ಯಕ್ಷ ವಿ.ಜೆ. ರವಿ ಗುರುವಾರ ಚಾಲನೆ ನೀಡಿದರು.

ನಿತ್ಯ 4 ಸಾವಿರ ಟನ್ ಕಬ್ಬು ನುರಿಯುವ ಸಾಮರ್ಥ್ಯವಿದೆ. ವಾರ್ಷಿಕ 8 ಲಕ್ಷ ಟನ್ ಕಬ್ಬು ನುರಿಯುವ ಗುರಿ ಇದೆ. ಆದರೆ ಕೇವಲ 11 ಸಾವಿರ ಎಕರೆಯಲ್ಲಿ 5 ಲಕ್ಷ ಮೆಟ್ರಿಕ್ ಟನ್‌ನಷ್ಟು ಕಬ್ಬು ಮಾತ್ರ ಲಭ್ಯವಿದೆ. 3 ಲಕ್ಷ ಟನ್ ಕಬ್ಬಿಗಾಗಿ ರೈತರು ಸುಧಾರಿತ ಪದ್ಧತಿಯಲ್ಲಿ ಹೆಚ್ಚು ಕಬ್ಬು ಬೆಳೆಯಲು ಮುಂದಾಗಿ. ಮುಂಗಾರು ಹಂಗಾಮಿನಲ್ಲಿ ಉತ್ತಮ ಇಳುವರಿಗಾಗಿ ಬಿತ್ತನೆ ಸಸಿ ಮಡಿ ಅಭಿವೃದ್ಧಿಗಾಗಿ 300ಎಕರೆಗೆ ಉಚಿತವಾಗಿ ವಿತರಿಸಲಾಗುವುದು. ಉತ್ತಮ ಇಳುವರಿಗಾಗಿ ಒಂದು ಕಣ್ಣಿನ ಸಸಿಗಳನ್ನು 500ಎಕರೆಗೆ ಸಾಲದ ರೂಪದಲ್ಲಿ ವಿತರಣೆ, ಟ್ರಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಖರೀದಿಗಾಗಿ ಸಾಲದ ರೂಪದಲ್ಲಿ ಹಣ ನೆರವು, ಶೇ.50ರ ರಿಯಾಯಿತಿಯಲ್ಲಿ ಲಘು ಪೋಷಕಾಂಶ, ಪ್ರೆಷ್‌ಮಡ್ಡಿ ರಿಯಾಯಿತಿಯಲ್ಲಿ ಸೌಲಭ್ಯ ಕಲ್ಪಿಸಲಾಗುವುದು ಎಂದು.


ಕಬ್ಬಿನ ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ ಇಳುವರಿ ಹೆಚ್ಚಿಸಲು ಕಾರ್ಖಾನೆಯ 95 ಎಕರೆಯಲ್ಲಿ ಮಾದರಿ ತಾಕು, ವೈಜ್ಞಾನಿಕ ನಾಟಿ, ಮಣ್ಣಿನ ಪರೀಕ್ಷೆ ಆಳವಾದ ಉಳುಮೆ ಮಾಡಿ ಪ್ರತಿ ಎಕರೆಗೆ 70 ಮೆಟ್ರಿಕ್ ಟನ್ ಇಳುವರಿ ನಿರೀಕ್ಷಿಸಲಾಗಿದೆ. ಒಂದು ಕಣ್ಣಿನ ಸಸಿ ಉತ್ಪಾದನೆಗೆ 4 ವಿವಿಧ ಸ್ಥಳ ಗಳಲ್ಲಿ ರೈತ ಉದ್ಯಮಿಗಳನ್ನು ಗುರ್ತಿಸಿ ನರ್ಸರಿ ಫಾರಂ ಆರಂಭಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾರ್ಖಾನೆಗೆ ಸಿಸ್ಟಾ ಅವರಿಂದ ಅತ್ಯುತ್ತಮ ಕೋಜನ್ ಪ್ರಥಮ ಸ್ಥಾನ, ಉತ್ತಮ ದಕ್ಷ ಕಾರ್ಯಚರಣೆಗೆ ಎಸ್. ನಿಜಲಿಂಗಪ್ಪ ಸಂಸ್ಥೆ ತಾಂತ್ರಿಕ ಪ್ರಶಸ್ತಿ ನೀಡಿದೆ. ಸುತ್ತಮುತ್ತಲ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆ ಆರಂಭವಾಗಲಿದ್ದು, ಸ್ಥಳೀಯ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಲು ರೈತರು ಸಹಕರಿಸಿ. ಒಪ್ಪಿಗೆ ಹಾಗೂ ಒಪ್ಪಂದ ರಹಿತ ಕಬ್ಬು ಬೆಳೆಗಾರರಿಂದ ಜೇಷ್ಠತೆ ರೀತ್ಯ ಕಬ್ಬು ಪಡೆಯಲಾಗುವುದು ಎಂದು ಹೇಳಿದರು.

ಕಾರ್ಖಾನೆ ಹಿರಿಯ ಅಧಿಕಾರಿ ಕೆ ಬಾಬು ರಾಜ್ ಮಾತನಾಡಿ, ಕಬ್ಬು ಕಟಾವುಗಾರರಿಗೆ ಕಾರ್ಖಾನೆ ನಿಗದಿಪಡಿಸಿದಷ್ಟು ಹಣ ನೀಡಿ. ಸಮಸ್ಯೆಗಳಿದ್ದಲ್ಲಿ ವಿಭಾಗಮಟ್ಟದ ಅಧಿಕಾರಿಗಳಿಗೆ ತಿಳಿಸಿ, ಹೆಚ್ಚು ಹಣ ನೀಡದಿರಿ ಎಂದು ತಿಳಿ ಹೇಳಿದರು.

ಕಾರ್ಖಾನೆ ಅಧಿಕಾರಿಗಳಾದ ಮೇಯನ್, ಅಶೋಕ್‌ಕುಮಾರ್, ಆರ್.ಇ. ಕುಮಾರ್, ಮೋಹನ್, ರವಿಚಂದ್ರನ್, ಜಿ.ಆರ್. ದತ್ತಾತ್ರೇಯ, ಚಾಮುಂಡೇಶ್ವರಿ ಶುಗರ್ಸ್ ಅಧ್ಯಕ್ಷ ನಾಚಿಯಪ್ಪನ್, ಮುಖ್ಯ ಹಣಕಾಸು ಅಧಿಕಾರಿ ಎನ್.ಶ್ರೀನಿವಾಸನ್, ಚೀಫ್ ಜನರಲ್ ಮ್ಯಾನೇಜರ್ ಪೂರ್ಣಸ್ವಾಮಿ, ಹೇಮಾವತಿ ಸಕ್ಕರೆ ಕಾರ್ಖಾನೆ ಕಬ್ಬು ವಿಭಾಗಾಧಿಕಾರಿ ದೇವೇಗೌಡ, ಕಾಯಿ ಮಂಚೇಗೌಡ, ಕೆ.ಜಿ.ಪುಟ್ಟರಾಜು, ಬೋರಾಪುರ ಮಂಜುನಾಥ್, ವಡಕಹಳ್ಳಿ ಮಂಚೇಗೌಡ, ಕುಮಾರ್, ಕಬ್ಬು ಬೆಳೆಗಾರ ಸಂಘ, ಲಾರಿ ಹಾಗೂ ಟ್ರಾಕ್ಟರ್ ಮಾಲೀಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಖಾನೆ ಸಿಬ್ಬಂದಿಗಳು ಹಾಜರಿದ್ದರು.

ಬೆನಮನಹಳ್ಳಿ ಡೇರಿ ಚುನಾವಣೆ



ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು.

ಹಲಗೂರು, ಜೂ,26– ಸಮೀಪದ ಬೆನಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳನ್ನು ರಿಟರ್ನಿಂಗ್ ಅಧಿಕಾರಿ ಜಿ.ಎಂ. ರಾಮಕೃಷ್ಣ ಅಧಿಕೃತವಾಗಿ ಘೋಷಿಸಿದರು.

ಇಂದು ನಡೆದ ಬೆನಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 11 ಸ್ಥಾನಗಳಿಗೆ ಒಟ್ಟು 19 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಪರಿಶಿಷ್ಟ ಜಾತಿ ಮೀಸಲು ಸ್ಥಾನಕ್ಕೆ ಚನ್ನಬಸಮ್ಮ ಅವಿರೋಧವಾಗಿ ಆಯ್ಕೆಯಾದರು, ಉಳಿದ 10 ಸ್ಥಾನಗಳಿಗೆ 19 ಅಭ್ಯರ್ಥಿಗಳು ಕಣದಲ್ಲಿದ್ದರು. ಸಾಮಾನ್ಯ ವರ್ಗದಿಂದ ಬಿ.ಪಿ.ಭೀಮೇಗೌಡ, ಬಿ.ಎಂ. ಸ್ವಾಮಿ, ಕೃಷ್ಣೇಗೌಡ, ಜಿ.ರಮೇಶ, ಬಿ.ಪಿ. ಪ್ರಕಾಶ, ತೇಜಸ್ವಿನ್ ಮತ್ತು ಮಹಿಳಾ ಮೀಸಲು ಕ್ಷೇತ್ರದಿಂದ ರತ್ನಮ್ಮ, ಸುಧಾ ಹಾಗು ಹಿಂದುಳಿದ ವರ್ಗ ಬಿ ಮೀಸಲು ಕ್ಷೇತ್ರದಲ್ಲಿ ಬಿ.ಎಂ.ನಾಗರಾಜು ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಸನ್ನ, ಕಾರ್ಯದರ್ಶಿ ಸೌಮ್ಯ, ಹಾಲು ಉತ್ಪಾದಕರ ಸಂಘದ ಸಿಬ್ಬಂದಿಗಳು ಹಾಗೂ ಊರಿನ ಹಿರಿಯರು, ಮುಖಂಡರು ಉಪಸ್ಥಿತರಿದ್ದರು.

ಗೃಹರಕ್ಷಕದಳ ನೇಮಕಾತಿ ಪ್ರಕ್ರಿಯೆ

ಮಂಡ್ಯ: ಗೃಹರಕ್ಷಕದಳದಲ್ಲಿ ಗೌರವ ಸೇವೆಯನ್ನು ಸಲ್ಲಿಸಲು ಮತ್ತು ಸ್ವಯಂ ಸೇವೆ ಮಾಡಲು ಇಚ್ಛಿಸುವವರಿಗೆ ಗೃಹರಕ್ಷಕದಳ ಸಂಸ್ಥೆ ಸೇರಲು ಮುಕ್ತ ಅವಕಾಶವಿರುತ್ತದೆ. ಜಿಲ್ಲೆಯಲ್ಲಿ 12 ಗೃಹರಕ್ಷಕದಳ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಖಾಲಿ ಇರುವ 49 ಸ್ಥಾನಗಳನ್ನು ಭರ್ತಿ ಮಾಡಲು ಗೃಹರಕ್ಷಕರ ನೇಮಕಾತಿ ಪ್ರಕ್ರಿಯೆ ಹಮ್ಮಿಕೊಳ್ಳಲಾಗಿದೆ.

10ನೇ ತರಗತಿ ಪಾಸಾಗಿರುವ 19 ರಿಂದ 40 ವರ್ಷ ವಯೊಮಿತಿಯುಳ್ಳ ಆಸಕ್ತರು ಅರ್ಜಿಯನ್ನು ಮಂಡ್ಯದ ವಿವೇಕಾನಂದ ನಗರದಲ್ಲಿರುವ ಬಿ.ಸಿ.ಎಂ ಹಾಸ್ಟಲ್ ಹತ್ತಿರದ ಮಂಡ್ಯ, ಮೇಲುಕೋಟೆ ರಸ್ತೆಯ ಕೆರೆ ಅಂಗಳದಲ್ಲಿರುವ ಜಿಲ್ಲಾ ಗೃಹರಕ್ಷಕದಳ ಕಛೇರಿಯಲ್ಲಿ ಪಡೆದು ಸಲ್ಲಿಸಬಹುದಾಗಿದೆ.

ಗೃಹರಕ್ಷಕರಿಗೆ ಕರ್ತವ್ಯಗಳ ಸಮಯದಲ್ಲಿ ಮತ್ತು ವಾರದ ಕವಾಯತುಗಳ ಹಾಜರಿಗೆ ಗೌರವಧನ ನೀಡಲಾಗುತ್ತದೆ. ಗೃಹರಕ್ಷಕ ಸದಸ್ಯರಾದವರಿಗೆ ಸ್ಥಳೀಯವಾಗಿ ಮೂಲ ತರಬೇತಿ ನೀಡಲಾಗುತ್ತದೆ ಹಾಗೂ ಹೆಚ್ಚಿನ ತರಬೇತಿಗೆ ಬೆಂಗಳೂರಿನಲ್ಲಿರುವ ಗೃಹರಕ್ಷದಳ ಮತ್ತು ಪೌರರಕ್ಷಣಾ ಅಕಾಡೆಮಿಯಲ್ಲಿ ನೀಡುವ ವಿಪತ್ತು ನಿರ್ವಹಣೆ, ನಿಸ್ತಂತು ಚಾಲನಾ ತರಬೇತಿ, ಲಘು ಮತ್ತು ಪ್ರವಾಹ ರಕ್ಷಣೆ, ಪ್ರಥಮ ಚಿಕಿತ್ಸೆ, ಮುಂದಾಳತ್ವ ತರಬೇತಿ, ಅಗ್ನಿಶಮನ ತರಬೇತಿ ವಿವಿಧ ತರಬೇತಿಗಳಿಗೆ ನಿಯೋಜಿಸಲಾಗುವುದು. ಈ ಸಂದರ್ಭದಲ್ಲಿ ಆಗುವ ಪ್ರಯಾಣ ವೆಚ್ಚ ಹಾಗೂ ತರಬೇತಿ ಭತ್ಯೆಗಳನ್ನು ಗೃಹರಕ್ಷಕದಳ ಸಂಸ್ಥೆಯಿಂದ ವೆಚ್ಚ ಭರಿಸಲಾಗುತ್ತದೆ.

ಗೃಹರಕ್ಷಕ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ ಎಂದು ಗೃಹರಕ್ಷಕ ದಳದ ಸಮಾದೇಷ್ಟರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಷುಗರ್ ಪ್ರೌಢಶಾಲೆ ಖಾಸಗಿಯವರಿಗೆ ಹಸ್ತಾಂತರ

ಶ್ರೀಕಂಠೇಗೌಡ ವಿರೋಧ

ಮಂಡ್ಯ: ಮೈಷುಗರ್ ಪ್ರೌಢಶಾಲೆಯನ್ನು ಖಾಸಗಿಯವರಿಗೆ ಗುತ್ತಿಗೆ ಅಥವಾ ಹಸ್ತಾಂತರ ಮಾಡುವ ಅಧಿಕಾರ ಮೈಷುಗರ್ ಕಂಪನಿ ಅಧ್ಯಕ್ಷರಿಗಿಲ್ಲ. ಶಾಲೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ ಮೈಷುಗರ್ ಕಂಪನಿಯ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಲಿ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಶಾಲೆಯ ಹಿರಿಯ ವಿದ್ಯಾರ್ಥಿ ಕೆ.ಟಿ.ಶ್ರೀಕಂಠೇಗೌಡ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಖಾನೆಗೆ ಒಪ್ಪಿಗೆಯಾದ ಕಬ್ಬನ್ನು ಪಡೆದು ನುರಿಸುವುದಷ್ಟೇ ಕೆಲಸ. ಅದು ಬಿಟ್ಟು ಮೈಷುಗರ್ ಶಾಲೆಯನ್ನು ಖಾಸಗೀಕರಣಗೊಳಿಸುವ ಅಧಿಕಾರ ಮೈಷುಗರ್ ಅಧ್ಯಕ್ಷರಿಗಿಲ್ಲ ಎಂದರು.

ಮಂಡ್ಯದಲ್ಲಿ ಕಾರ್ಮಲ್ ಕಾನ್ವೆಂಟ್ ಹಾಗೂ 1949ರಲ್ಲಿ ಆರಂಭಗೊಂಡ ಪ್ರಪ್ರಥಮ ಶಾಲೆಯಾದ ಮೈಷುಗರ್ ಪ್ರೌಢಶಾಲೆ ಮಾತ್ರ ಸರ್ಕಾರದ ಅನುದಾನಿತ ಶಾಲೆಯಾಗಿದ್ದು, ಈಗಾಗಲೇ ಸರ್ಕಾರದಿಂದಲೇ 4 ಮಂದಿ ಹೆಚ್ಚುವರಿ ಶಿಕ್ಷಕರನ್ನು ಶೀಘ್ರದಲ್ಲಿಯೇ ನಿಯೋಜಿಸಲಾಗುತ್ತಿದೆ. ಇವರಿಗೆ ಸರ್ಕಾರವೇ ವೇತನ ನೀಡಲಿದ್ದು, ಖಾಸಗಿಯವರಿಗೆ ವಹಿಸುವ ಅಗತ್ಯವಿಲ್ಲ ಎಂದು ಹೇಳಿದರು.

ಮೈಷುಗರ್ ಕಂಪನಿಯ ಅಧ್ಯಕ್ಷರು ಸರಬರಾಜು ಮಾಡುವ ಹಾಗೂ ಕಾರ್ಖಾನೆಯಿಂದ ನುರಿಯಲಾಗುವ ಕಬ್ಬಿಗೆ ರೈತರಿಂದ 4 ರೂ ಕಂಪನಿಯಿಂದ 4 ರೂ ಒಟ್ಟು 8 ರೂಗಳನ್ನು ಶಾಲೆಗೆ ನೀಡಬೇಕಿದೆಯಷ್ಟೆ ಶಾಲೆಯನ್ನು ಖಾಸಗಿಯವರಿಗೆ ಪರಭಾರೆ ಮಾಡುವ ಸಲುವಾಗಿ ಈಗಾಗಲೇ ಆಡಳಿತ ಮಂಡಳಿ ಮೂರು ಸಭೆಗಳನ್ನು ಮಾಡಿದ್ದು, ಶಾಲೆ ಪರಭಾರೆ ಮಾಡಲು ಇವರಿಗೆ ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು.

ಸರಿಯಾಗಿ ಕಬ್ಬು ನುರಿಯಲಾಗಿಲ್ಲವೆಂದು ಕಂಪನಿಯಿಂದ ಶಾಲೆಗೆ ನೀಡಬೇಕಾದ ಹಣ ನೀಡದ ಇವರು ಶಾಲೆಯ 14 ಎಕರೆ ಆಸ್ತಿಯಲ್ಲಿ ಕ್ರಿಕೆಟ್ ಅಕಾಡೆಮಿಗೆ ವರ್ಷಕ್ಕೆ 50 ಸಾವಿರ ಪಡೆದು ಸ್ಥಳ ನೀಡಿದ್ದು, ಕಿಕ್ ಬ್ಯಾಕ್ ಪಡೆಯುತ್ತಿದ್ದಾರೆ. ಇದೀಗ ಶಾಲೆಯನ್ನು ಖಾಸಗಿಯವರಿಗೆ ಪರಭಾರೆ ಮಾಡಿ ಎಷ್ಟು ಹಣ ಕಿಕ್‌ಬ್ಯಾಕ್ ಪಡೆಯಲು ಹುನ್ನಾರ ನಡೆಸಿದ್ದಾರೆ ಎಂದು ಮರು ಪ್ರಶ್ನೆಹಾಕಿದರು.

ಗೋಷ್ಠಿಯಲ್ಲಿ ಶಾಲೆಯ ಶ್ರೆಯೋಭಿವೃದ್ಧಿ ಹಿರಿಯ ವಿದ್ಯಾರ್ಥಿಗಳ ಸಂಘ ಕಾರ್ಯದರ್ಶಿ ಸತ್ಯನಾರಾಯಣಮೂರ್ತಿ, ಸಿ.ಕುಮಾರಿ, ಮಂಜುನಾಥ್ ಇತರರಿದ್ದರು.

ಪಡಿತರ ಅಕ್ರಮ ದಾಸ್ತಾನು: ಪೊಲೀಸರ ದಾಳಿ

743 ಕೆಜಿ ಅಕ್ಕಿ, ತೂಕದ ಯಂತ್ರ ವಶ



ಅಕ್ರಮ ಪಡಿತರ ವಶಪಡಿಸಿಕೊಂಡ ಪೋಲೀಸರು.

ಕೊಳ್ಳೇಗಾಲ, ಜೂ.26–ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಂಗ್ರಹಿಸಿ ಮಾರಾಟಕ್ಕಾಗಿ ತನ್ನ ಮನೆಯ ಹಿಂಭಾಗದಲ್ಲಿ ಇರಿಸಿಕೊಂಡಿದ್ದ ಬಗ್ಗೆ ಖಚಿತ ಮಾಹಿತಿ ಹಿನ್ನೆಲೆ ಪೊಲೀಸರು, ಆಹಾರ ಇಲಾ ಖಾಧಿಕಾರಿಗಳ ತಂಡ ದಾಳಿ ನಡೆಸಿ 743ಕೆಜಿ ಅಕ್ಕಿ, ತೂಕದ ಯಂತ್ರವನ್ನು ವಶಕ್ಕೆ ಪಡೆದಿರುವ ಘಟನೆ ಗುರುವಾರ ನಡೆದಿದೆ.

ತಾಲೂಕಿನ ಪಾಳ್ಯ ಗ್ರಾಮದ ನಾಯಕರ ಬೀದಿಯ ಸುಬ್ಬನಾಯಕ ಎಂಬ ಆರೋಪಿ ಅಕ್ರಮ ಪಡಿತರ ದಾಸ್ತಾನು ಮಾಡಿಕೊಂಡು ಮಾರಾಟಕ್ಕೆ ತೆಗೆದುಕೊಂಡು ಹೋಗಲು ಅಣಿಯಾಗಿದ್ದ. ಖಚಿತ ಮಾಹಿತಿ ಮೇರೆಗೆ ಡಿವೈಎಸ್ಪಿ ಮಾರ್ಗದರ್ಶನದಲ್ಲಿ ಗ್ರಾಮಾಂತರ ಠಾಣೆಯ ಪಿಎಸೈ ಸುಪ್ರೀತ್, ಆಹಾರ ಇಲಾಖೆಯ ನಿರೀಕ್ಷಕ ಪ್ರಸಾದ್, ಡಿವೈಎಸ್ಪಿ ಪತ್ತೆ ತಂಡದ ಎಎಸೈ ತಖೀವುಲ್ಲಾ, ರವಿ, ವೆಂಕಟೇಶ್, ಬಿಳಿಗೌಡ ಇನ್ನಿತರರು ದಾಳಿ ನಡೆಸುವ ವೇಳೆಗಾಗಲೇ ಆರೋಪಿ ಪರಾರಿಯಾಗಿದ್ದನ್ನೆನ್ನಲಾಗಿದೆ ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಪೂರ್ವಭಾವಿ ಸಭೆ

ಚಾಮರಾಜನಗರ: ಜಿಲ್ಲಾ ಕೇಂದ್ರದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ ಆಯೋಜಿಸುವ ಸಂಬಂಧ ಹೆಚ್ಚುವರಿ ಡಿಸಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಜೂ.27ರ ಸಂಜೆ 4 ಗಂಟೆಗೆ ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ದೇಹದ ಸುಭದ್ರತೆಗೆ ಮಾದಕ ಪದಾರ್ಥ ತ್ಯಜಿಸಿ

ಚಾಮರಾಜನಗರ, ಜೂ.26– ದೇಹದ ಸದೃಢತೆ, ಸುಭದ್ರತೆಯಿಂದ ಕಾಪಾಡಿಕೊಳ್ಳಲು ಅಲ್ಕೋಹಾಲ್, ಬೀಡಿ, ಸಿಗರೇಟ್, ಗುಟ್ಕಾ, ಅಫೀಮು, ಗಾಂಜಾದಂತಹ ಮತ್ತು ಭರಿಸುವ ಮಾದಕ ಪದಾರ್ಥಗಳನ್ನು ಇಂದೇ ತ್ಯಜಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ತಿಳಿಸಿದ್ದಾರೆ.

ನಗರದ ಹೊರವಲಯದಲ್ಲಿರುವ ಯಡಬೆಟ್ಟದ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಉಪನ್ಯಾಸ ಸಭಾಂಗಣದಲ್ಲಿಂದು ಜಿಲ್ಲಾ ಪೊಲೀಸ್ ಇಲಾಖೆ, ಸಿಇಎನ್ ಅಪರಾಧ ಪೊಲೀಸ್ ಠಾಣೆ ಹಾಗೂ ಸಿವಸ್ಸ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ "ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ" ಕಾರ್ಯಕ್ರಮವನ್ನು ಉದ್ಘಾಟಿಸಿ, ತಂದೆ–ತಾಯಿ, ಸ್ನೇಹಿತರು, ಬಂಧು ಬಳಗ, ಆಪ್ತವರ್ಗ ನಮ್ಮಿಂದ ದೂರವಾದರೂ ಕೊನೆ ಉಸಿರಿರುವವರೆಗೂ ನಮ್ಮೊಂದಿಗಿರುವ ದೇಹವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಉತ್ತಮ ಜೀವನ ಕಟ್ಟಿಕೊಂಡು ಸಮಾಜಕ್ಕೆ ನಮ್ಮಿಂದಾದ ಕೊಡುಗೆ ನೀಡಬೇಕು. ಆಗ ಮಾತ್ರ ಮಾನವ ಬದುಕು ಸಾರ್ಥಕವಾಗಲಿದೆ ಎಂದರು.



ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಉದ್ಘಾಟಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಂ.ಎನ್. ಶಶಿಧರ್ ಮಾತನಾಡಿ, ಕ್ಷಣಿಕ ಸುಖದ ವ್ಯಸನಕ್ಕೆ ಒಳಗಾಗುವ ಮೂಲಕ ಯುವಜನಾಂಗ ತಮ್ಮ ಇಡೀ ಜೀವನವನ್ನೇ ಹಾಳು ಮಾಡಿಕೊಳ್ಳಲಿದೆ. ಒಂದಡಿ ಹೆಜ್ಜೆ ಇಡಲು ನಾವು ಪ್ರಜ್ಞಾಪೂರ್ವಕವಾಗಿ ಚಿಂತನೆ ನಡೆಸಬೇಕಾಗಿದೆ ಎಂದರು.

ಸಿಇಎನ್ (ಸೆನ್) ಅಪರಾಧ ಪೊಲೀಸ್ ಠಾಣೆಯ ಡಿವೈಎಸ್‌ಪಿ ಪವನ್‌ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಡಾ.ಎಚ್.ಜಿ.ಮಂಜುನಾಥ್ ಹಾಗೂ ಅರ್ಥೋಪಡಿಕ್ ವಿಭಾಗದ ಮುಖ್ಯಸ್ಥರಾದ ಡಾ. ಮಾರುತಿ ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆಯ ಮಹತ್ವ ಕುರಿತು ಕಾರ್ಯಕ್ರಮದಲ್ಲಿ ಮಾತನಾಡಿದರು. ಇದೇ ವೇಳೆ ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ ಅಂಗವಾಗಿ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣಪತ್ರ ಹಾಗೂ ಬಹುಮಾನ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮುಖ್ಯ ಆಡಳಿತಾಧಿಕಾರಿ ನಂಜುಂಡೇಗೌಡ, ಜಿಲ್ಲಾ ಸರ್ಜನ್, ಡಾ. ಕೆ.ಆರ್. ಮಹೇಶ್, ಡಿವೈಎಸ್‌ಪಿ ಲಕ್ಷ್ಮಯ್ಯ, ಪೊಲೀಸ್ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸಲು ನಗರದ ಚಾಮರಾಜೇಶ್ವರ ದೇವಸ್ಥಾನದ ಆವರಣದಿಂದ ಹೊರಟ ಜಾಗೃತಿ ಜಾಥಾಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅವರು ಚಾಲನೆ ನೀಡಿದರು. ವಿವಿಧ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಜಾಥಾವು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಪ್ಲೇ ಕಾರ್ಡ್ ಪ್ರದರ್ಶಿಸುವ ಮೂಲಕ ಜಾಗೃತಿ ಮೂಡಿಸಿದರು.

ಬಿಎಸ್‌ಎನ್‌ಎಲ್‌ಗೆ 7 ಸಾವಿರ ರೂ. ದಂಡ ವಿಧಿಸಿದ ನ್ಯಾಯಾಲಯ

ಯಳಂದೂರು, ಜೂ.26 (ವಿ.ನಾಗರಾಜು) ಬಿಲ್ ಹಣ ಪಾವತಿಸದ ವಕೀಲೆ ವಿರುದ್ಧ ಬಿಎಸ್‌ಎನ್‌ಎಲ್ ಸುಳ್ಳು ಮೊಕದ್ದಮೆ ಹೂಡಿದ್ದ ನ್ಯಾಯಾಲಯವು ಬಿಎಸ್‌ಎನ್‌ಎಲ್‌ಗೆ 7 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಪಟ್ಟಣದ ನ್ಯಾಯಾಲಯಕ್ಕೆ ಸಮೀಪದ ಕೆ.ಕೆ.ರಸ್ತೆಯಲ್ಲಿರುವ ವಕೀಲೆ ಎಸ್. ನಂದಕುಮಾರಿ ವಿರುದ್ಧ ಮೊಕದ್ದಮೆಯಲ್ಲಿ ಸತ್ಯಾಂಶ ಇಲ್ಲವೆಂದು ನ್ಯಾಯಾಲಯ ಈ ತೀರ್ಪು ನೀಡಿದೆ.

ತಮ್ಮ ಹೆಸರಿನಲ್ಲಿರುವ ವಕೀಲರೊಬ್ಬರ ಕಚೇರಿಗೆ ಬಿಎಸ್‌ಎನ್‌ಎಲ್ ಅಂತರ್ಜಾಲ ಸಂಪರ್ಕಕ್ಕಾಗಿ 2020ರಲ್ಲಿ ಅರ್ಜಿ ಸಲ್ಲಿಸಿದ್ದರು. ಠೇವಣಿ ಮೊತ್ತ 777 ರೂ. ಗಳನ್ನು ಪಾವತಿ ಮಾಡಿದ್ದರು. ಆದರೆ ನೆಟ್ ಸೇವೆಯನ್ನು ಪಡೆದಿರಲಿಲ್ಲ. ಜತೆಗೆ ಯಾವುದೇ ಪರಿಕರ, ಸೌಲಭ್ಯಗಳನ್ನೂ ನೀಡಿರಲಿಲ್ಲ. ಆದರೂ ನಂದಕುಮಾರಿ ಅವರಿಗೆ ನೆಟ್ ಸೇವೆ ಬಿಲ್ ಬರಲು ಶುರುವಾಗಿತ್ತು. ಆದರೆ ಇದ್ಯಾವುದೂ ನಂದಕುಮಾರಿ ಅವರ ಗಮನಕ್ಕೆ ಬಂದಿರಲಿಲ್ಲ. ಆದರೆ ಇತ್ತೀಚೆಗೆ 18,028 ರೂ. ಶುಲ್ಕ ಪಾವತಿ ಮಾಡುವಂತೆ ಬಿಎಸ್‌ಎನ್‌ಎಲ್ ನಂದಕುಮಾರಿ ಅವರಿಗೆ ನೋಟಿಸ್ ನೀಡಿತ್ತು ಆದರೆ ಸೇವೆಯನ್ನೇ ಪಡೆಯದಿರುವುದರಿಂದ ಬಿಲ್ ಪಾವತಿ ಮಾಡುವುದಿಲ್ಲ ಎಂದು ವಕೀಲೆ ತಿಳಿಸಿದ್ದರು. ಇದಕ್ಕೆ ಒಪ್ಪದ ಬಿಎಸ್‌ಎನ್‌ಎಲ್ ವ್ಯವಸ್ಥಾಪಕರು ಕಾಯಂ ಜನತಾ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು.

ಜೂ.21 ರಂದು ನಡೆದ ವಿಚಾರಣೆಯಲ್ಲಿ ಕೇಬಲ್ ವೈರಿಂಗ್ ಮಾಡಿ ಉಪಕರಣ ನೀಡದೆ ಅಂತರ್ಜಾಲ ಸೇವೆ ಒದಗಿಸದೆ ಬಿಲ್ ಪಾವತಿಸುವಂತೆ ನೋಟಿಸ್ ನೀಡಿರುವುದು ಬಹಿರಂಗವಾಗಿದೆ. ಬಿಎಸ್‌ಎನ್‌ಎಲ್ ಕಚೇರಿಗೆ ಸಲ್ಲಿಸಿದ ದಾಖಲಾತಿಗಳ ಆಧಾರದ ಮೇಲೆ ಈ ಪ್ರಕರಣ ಸುಳ್ಳೆಂದು ಪ್ರತಿವಾದಿ ವಕೀಲೆ ಪರವಾಗಿ ವಕಾಲತ್ತು ವಹಿಸಿದ್ದ ಕೆಸ್ತೂರು ಎಂ.ಮಾದೇಶ ಸಾಬೀತುಪಡಿಸಿದರು.

ವಿನಾಕಾರಣ ಪ್ರತಿವಾದಿಗಳನ್ನು ಕೋರ್ಟ್‌ಗೆ ಎಳೆದ ಕಾರಣ ನಂದಕುಮಾರಿ ರವರ ಠೇವಣಿ ಹಣ 777 ರೂ. ಮತ್ತು ದಂಡದ ರೂಪವಾಗಿ 7000 ರೂ. ಪಾವತಿಸುವಂತೆ ನ್ಯಾಯಪೀಠದ ಅಧ್ಯಕ್ಷರಾದ ವಿಮಲಾ ಆರ್. ನಂದಗೋನ್ ಮತ್ತು ಸದಸ್ಯರಾದ ಪಿ. ಸರಸ್ವತಿ ಮತ್ತು ಬಿ.ಕೆ. ಶಾಂತಲಾ ನ್ಯಾಯಪೀಠವು ಆದೇಶ ಮಾಡಿದೆ.

ಕೆಆರ್‌ಎಸ್, ಕಬಿನಿಯಿಂದ ನೀರು ಬಿಡುಗಡೆ: ಮುನ್ನೆಚ್ಚರಿಕೆಗೆ ಮನವಿ

ಚಾಮರಾಜನಗರ: ಕೆ.ಆರ್.ಎಸ್ ಮತ್ತು ಕಬಿನಿ ಜಲಾಶಯಗಳ ಜಲಾನಯನ ಪ್ರದೇಶಗಳಲ್ಲಿ ಅತಿ ಹೆಚ್ಚು ಮಳೆಯಾಗುತ್ತಿದ್ದು ಒಳಹರಿವು ಹೆಚ್ಚಿರುವುದರಿಂದ, ಕೃಷ್ಣರಾಜಸಾಗರ ಜಲಾಶಯದಿಂದ ಸುಮಾರು 50 ಸಾವಿರದಿಂದ 80 ಸಾವಿರ ಕ್ಯೂಸೆಕ್ ಹಾಗೂ ಕಬಿನಿ ಜಲಾಶಯದಿಂದ ಸುಮಾರು 30,000 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕಾವೇರಿ ನದಿ ಪಾತ್ರದಲ್ಲಿ ಬರುವ ಗ್ರಾಮಗಳ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ನದಿಯಲ್ಲಿ ಪಾತ್ರೆ ತೊಳೆಯಲು, ಬಟ್ಟೆ ಸ್ವಚ್ಛಗೊಳಿಸಲು, ಜಾನುವಾರುಗಳಿಗೆ ನೀರು ಕುಡಿಸಲು, ನದಿ ಪಾತ್ರದಲ್ಲಿ ರೈತರು ಮೇವಿಗಾಗಿ ಜಾನುವಾರುಗಳನ್ನು ತಗ್ಗು ಪ್ರದೇಶಕ್ಕೆ ಬಿಡದಿರುವಂತೆ ಹಾಗೂ ಜಾನುವಾರುಗಳನ್ನು ಶುಚಿಗೊಳಿಸಲು ಹೋಗದಿರುವಂತೆ ಮತ್ತು ಯಾವುದೇ ಅನಾಹುತಕ್ಕೆ ಅವಕಾಶ ಕೊಡದೆ ಮುನ್ನೆಚ್ಚರಿಕೆ ಕ್ರಮವಹಿಸುವಂತೆ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ಪ್ರವಾಹ ಪರಿಸ್ಥಿತಿ ಕುರಿತು ಮಾಹಿತಿ ಹಾಗೂ ಸಹಾಯಕ್ಕಾಗಿ ಜಿಲ್ಲಾಧಿಕಾರಿಗಳ ಕಚೇರಿಯ ಜಿಲ್ಲಾ ವಿಪತ್ತು ನಿರ್ವಹಣಾ ನಿಯಂತ್ರಣ ಕೊಠಡಿಯಲ್ಲಿ 24x7 ಕಾರ್ಯನಿರ್ವಹಿಸುತ್ತಿರುವ ಮೊ.ಸಂ. 9740942901, ಟೋಲ್ ಫ್ರೀ 1077, ಸ್ಥಿರ ದೂರವಾಣಿ ಸಂಖ್ಯೆ 08226–223160/61/63 ಸಂಪರ್ಕಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮೊದಲ ಆಷಾಢ ಶುಕ್ರವಾರ

•ಚಾಮುಂಡೇಶ್ವರಿಗೆ ವಿಶೇಷ ಪೂಜಾ ವ್ಯವಸ್ಥೆ •13 ದಿನ ಬೆಟ್ಟಕ್ಕೆ ಖಾಸಗಿ ವಾಹನ ಪ್ರವೇಶ ನಿರ್ಬಂಧ •ಲಲಿತ ಮಹಲ್ ಪ್ಯಾಲೇಸ್ ಮೈದಾನದಿಂದ ಉಚಿತ ಬಸ್ ವ್ಯವಸ್ಥೆ







ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಭಕ್ತರನ್ನು ಕರೆದೊಯ್ಯುವ ಬಸ್ ಹತ್ತಲು ಬ್ಯಾರಿಕೇಡ್ ವ್ಯವಸ್ಥೆ ಮಾಡುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಧ್ವನಿವರ್ಧಕ ಅಳವಡಿಸುತ್ತಿರುವುದು.

ಮೈಸೂರು, ಜೂ.26(ಎಂಟಿವೈ)- ಆಷಾಢ ಶುಕ್ರವಾರದೊಂದಿಗೆ ಶನಿವಾರ ಹಾಗೂ ಭಾನುವಾರವೂ ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದ್ದು, ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಚಾಮುಂಡಿಬೆಟ್ಟಕ್ಕೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಚಾಮುಂಡಿಬೆಟ್ಟದಲ್ಲಿ ಪೂಜಾ ಮಹೋತ್ಸವದ ಸಿದ್ಧತಾ ಕಾರ್ಯ ಪೂರ್ಣಗೊಂಡಿದೆ.

ಆಷಾಢ ಮಾಸದ ಶುಕ್ರವಾರವಾದ ಜೂ.27, ಜು.4, ಜು.11, ಜು.18 ಹಾಗೂ ವರ್ಧಂತಿ ದಿನವಾದ ಜು.17ರಂದು ಲಲಿತ ಮಹಲ್ ಪ್ಯಾಲೇಸ್ ಮೈದಾನದಿಂದ ಚಾಮುಂಡಿ ಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯಲು ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಆಷಾಢ ಶುಕ್ರವಾರದೊಂದಿಗೆ ವಾರಾಂತ್ಯ ದಿನವಾದ ಶನಿವಾರ ಮತ್ತು ಭಾನುವಾರವೂ ಬೆಟ್ಟಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದರಿಂದ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ವಾರಾಂತ್ಯ ದಿನದಲ್ಲೂ ಲಲಿತ ಮಹಲ್ ಪ್ಯಾಲೇಸ್ ಮೈದಾನದಿಂದ ಸಾರಿಗೆ ಬಸ್‌ಗಳು ಸಂಚರಿಸುತ್ತವೆಯಾದರೂ, ಪುರುಷರು ಟಿಕೆಟ್ ಪಡೆದು ಪ್ರಯಾಣಿಸಬೇಕಾಗಿದೆ.

ಬೆಟ್ಟಕ್ಕೆ 13 ದಿನ ಖಾಸಗಿ ವಾಹನ ಪ್ರವೇಶ ನಿಷೇಧ: ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವದ ಅಂಗವಾಗಿ ಚಾಮುಂಡಿಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಚಾಮುಂಡಿಬೆಟ್ಟದಲ್ಲಿ ಉಂಟಾಗಬಹುದಾದ ಟ್ರಾಫಿಕ್ ಜಾಮ್ ತಡೆಗಟ್ಟಲು ಪೊಲೀಸ್ ಇಲಾಖೆ 13 ದಿನ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಿದೆ. ಮೊದಲ ವಾರ ಜೂ.27, 28, 29, ಎರಡನೇ ವಾರ ಜು.4, 5, 6, ಮೂರನೇ ವಾರ ಜು.11, 12, 13 ಹಾಗೂ ನಾಲ್ಕನೇ ವಾರ ಜು.17, 18, 19 ಹಾಗೂ 20ರಂದು ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಕ್ಕೆ ಪ್ರವೇಶ ನಿರ್ಬಂಧ ಹೇರಲಾಗಿದೆ.

ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಸಿದ್ಧತೆ: ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಚಾಮುಂಡಿಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯಲು ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಧರ್ಮ ದರ್ಶನ, 300 ರೂ. ಟಿಕೆಟ್ ಹಾಗೂ 2 ಸಾವಿರ ರೂ. ಟಿಕೆಟ್ ಪಡೆದು ದರ್ಶನಕ್ಕೆ ಹೋಗುವವರಿಗೆ ಪ್ರತ್ಯೇಕ ಬಸ್‌ನಲ್ಲಿ ಬೆಟ್ಟಕ್ಕೆ ಕರೆದೊಯ್ಯಲು ಪ್ರತ್ಯೇಕ ಕೌಂಟರ್ ನಿರ್ಮಿಸಲಾಗಿದೆ. ಅಲ್ಲದೆ, ಖಾಸಗಿ ವಾಹನಗಳ ನಿಲುಗಡೆಗೆ ಸ್ಥಳ, ವಿಶೇಷ ದರ್ಶನದ ಟಿಕೆಟ್ ವಿತರಣಾ ಕೌಂಟರ್, ಚಪ್ಪಲಿ ಬಿಡಲು ಕೌಂಟರ್ ನಿರ್ಮಿಸಲಾಗಿದೆ ಸರದಿ ಸಾಲಿನಲ್ಲಿ ಬರಲು ಬ್ಯಾರಿಕೇಡ್ ವ್ಯವಸ್ಥೆ, ಭದ್ರತೆಗಾಗಿ ಸಿಸಿ ಕ್ಯಾಮರಾ, ವಿದ್ಯುತ್ ದೀಪದ ವ್ಯವಸ್ಥೆ ಮಾಡಲಾಗಿದೆ.

ಕೇವಲ ಗೋಪುರಕ್ಕೆ ಕೈ ಮುಗಿದು ಬರಲು ಅವಕಾಶವಿಲ್ಲ: ಆಷಾಢ ಮಾಸದ ಶುಕ್ರವಾರದಂದು ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿದ್ದು, ಅವರಲ್ಲಿ ಅರ್ಧ ದಷ್ಟು ಸಂಖ್ಯೆಯ ಭಕ್ತರು ದೇವಾಲಯದ ಗೋಪುರಕ್ಕೆ ಕೈ ಮುಗಿದು ವಾಪಸ್ಸಾಗುತ್ತಿದ್ದರು. ಆದರೆ, ಈ ಬಾರಿ ಆಷಾಢ ಶುಕ್ರವಾರದಂದು ಬೆಟ್ಟಕ್ಕೆ ಬಂದವರೆಲ್ಲಾ ದೇವಾಲಯಕ್ಕೆ ಪ್ರವೇಶಿಸಲೇಬೇಕು. ಧರ್ಮ ದರ್ಶನ, 300 ರೂ. ಹಾಗೂ 2 ಸಾವಿರ ರೂ. ಟಿಕೆಟ್ ಪಡೆದು ಬರುವ ಭಕ್ತರು ಬಸ್‌ನಿಂದ ಇಳಿಯುತ್ತಿದ್ದಂತೆ ಸರದಿ ಸಾಲಿನ ಬ್ಯಾರಿಕೇಡ್ ಒಳಗೆ ಪ್ರವೇಶಿಸಬೇಕು. ಒಮ್ಮೆ ಸಾಲಿನಲ್ಲಿ ಸಿಲುಕಿದರೆ ಹಿಂದೆ ಬರಲು ಸಾಧ್ಯವಾಗುವುದಿಲ್ಲ. ದರ್ಶನ ಮುಗಿಸಿಕೊಂಡೇ ಹೊರಗೆ ಬರಬೇಕಾಗುತ್ತದೆ. ಮೆಟ್ಟಿಲು ಮೂಲಕ ಬರುವ ಭಕ್ತರದ್ದೂ ಅದೇ ಪರಿಸ್ಥಿತಿ. ಮೆಟ್ಟಿಲು ಏರಿ ಬರುತ್ತಿದ್ದಂತೆಯೇ ಬ್ಯಾರಿಕೇಡ್ ಒಳಗೆ ಹೋಗಬೇಕಾಗುತ್ತದೆ. ಇದರಿಂದ ದೇಗುಲದ ಮುಂಭಾಗದ ದ್ವಾರದ ಬಳಿ ಕೈ ಮುಗಿದು, ಪೂಜೆ ಸಲ್ಲಿಸಿ ವಾಪಸ್ಸಾಗುವ ಬಯಕೆಯೊಂದಿಗೆ ಬರುವ ಭಕ್ತರಿಗೆ ಈ ಬಾರಿ ಬ್ಯಾರಿಕೇಡ್‌ಗಳ ಚಕ್ರವ್ಯೂಹ ತಡೆಯೊಡ್ಡಲಿದೆ. ಆ ಕಾರಣದಿಂದ ದೇವಾಲಯದ ಗೋಪುರಕ್ಕೆ ಕೈ ಮುಗಿದು ಬರುತ್ತೇವೆಂದು ಬೆಟ್ಟಕ್ಕೆ ಬಂದರೆ ಚಕ್ರವ್ಯೂಹಕ್ಕೆ ಸಿಲುಕುವುದು ಖಚಿತ.

ಶುಕ್ರವಾರ ಹೊರತುಪಡಿಸಿ ಬೇರೆ ದಿನ ಬನ್ನಿ

ಚಾಮುಂಡಿಬೆಟ್ಟದಲ್ಲಿ ಸ್ಥಳಾವಕಾಶ ಕೊರತೆ ಇದೆ. ಇರುವ ಜಾಗದಲ್ಲಿಯೇ ಭಕ್ತರಿಗೆ ತೊಂದರೆಯಾಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ. ಕಳೆದ ಬಾರಿ ಉಂಟಾಗಿದ್ದ ನೂಕುನುಗ್ಗಲು ಗಮನಿಸಿ ಈ ಬಾರಿ ವ್ಯವಸ್ಥಿತವಾಗಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ದೇವಾಲಯದ ಕಳಸ(ಗೋಪುರ)ಕ್ಕೆ ಕೈ ಮುಗಿದು ವಾಪಸ್ಸಾಗಲು ಬಯಸುವವರು ಶುಕ್ರವಾರ ಹೊರತುಪಡಿಸಿ ಉಳಿದ ದಿನ ಬರಬೇಕು. ಶುಕ್ರವಾರದ ವಿಶೇಷ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಇದರಿಂದ ದೇವಾಲಯದ ಬಳಿ ಯಾರಿಗೂ ಬರಲು ಸಾಧ್ಯವಿಲ್ಲ. ಆ ಕಾರಣದಿಂದ ಭಕ್ತರು ಸಹಕರಿಸಬೇಕು.

- **ಡಾ.ಎಂ.ಜೆ.ರೂಪ,** ಕಾರ್ಯದರ್ಶಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ.

ನಗರ ಬಸ್ ನಿಲ್ದಾಣದಿಂದ ಹೊರಡುವ ಬಸ್‌ನಲ್ಲಿ ಪುರುಷರಿಗೆ ಟಿಕೆಟ್

ಆಷಾಢ ಶುಕ್ರವಾರದಂದು ಮೈಸೂರು ನಗರ ಬಸ್ ನಿಲ್ದಾಣದಿಂದ ಚಾಮುಂಡಿ ಬೆಟ್ಟಕ್ಕೆ ಹೊರಡುವ ಬಸ್‌ಗಳಲ್ಲಿ ಮಹಿಳೆಯರಿಗೆ ಶಕ್ತಿ ಯೋಜನೆ ಅನ್ವಯವಾಗುತ್ತದೆ. ಆದರೆ, ಪುರುಷ ಪ್ರಯಾಣಿಕರು ಟಿಕೆಟ್ ಪಡೆದು ಪ್ರಯಾಣಿಸಬೇಕು.

-**ಹೆಚ್.ಟಿ.ವೀರೇಶ್,** ವಿಭಾಗೀಯ ನಿಯಂತ್ರಣಾಧಿಕಾರಿ, ನಗರ ಸಾರಿಗೆ ಸಂಸ್ಥೆ

ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಬಂದು ಸರ ಕಳವಿಗೆ ಯತ್ನ

ಕಿತ್ತರೂ ಕೈಗೆ ಸಿಗದೇ ಖದೀಮ ಪರಾರಿ

ಮೈಸೂರು, ಜೂ.26– ಎಲೆಕ್ಟ್ರಿಕ್ ಸ್ಕೂಟರ್ ನಲ್ಲಿ ಬಂದ ಖದೀಮ, ಮಹಿಳೆಯ ಚಿನ್ನದ ಸರ ಕಿತ್ತುಕೊಳ್ಳಲು ವಿಫಲ ಯತ್ನ ನಡೆಸಿರುವ ಘಟನೆ ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಗುರುವಾರ ರಾತ್ರಿ ನಡೆದಿದೆ.

ವಿದ್ಯಾರಣ್ಯಪುರಂನ 4ನೇ ಮೇನ್, 3ನೇ ಕ್ರಾಸ್‌ನಲ್ಲಿ ಇಂದು ರಾತ್ರಿ ಸುಮಾರು 7.45ರ ವೇಳೆಯಲ್ಲಿ ಈ ಘಟನೆ ನಡೆದಿದ್ದು, ಖದೀಮ ಸರ ಕೀಳಲು ಯತ್ನಿಸಿದಾಗ ಮಹಿಳೆಯ ಕೊರಳಿಗೆ ಸಣ್ಣ ಗಾಯವಾಗಿದೆ.

ಅತ್ತೆ–ಸೊಸೆ ಅಂಗಡಿಗೆ ಹೋಗಿ 4ನೇ ಮೇನ್ ಮೂಲಕ ಮನೆಗೆ ಹೋಗುತ್ತಿದ್ದರು. ಈ ವೇಳೆ ಸ್ವಲ್ಪ ದೂರದಲ್ಲಿ ದ್ವಿಚಕ್ರ ವಾಹನ ಸಹಿತ ಇಬ್ಬರು ವೃದ್ಧರು ಕೆಳಗೆ ಬಿದ್ದಿದ್ದರು. ಅವರನ್ನು ಮತ್ತೋರ್ವ ವ್ಯಕ್ತಿ ಸಂತೈಸುತ್ತಿದ್ದ. ಯಾರಿಗೂ ಹೆಚ್ಚು ಪೆಟ್ಟಾಗಿರಲಿಲ್ಲ. ಹಾಗಾಗಿ ಅದರತ್ತ ಹೆಚ್ಚು ಗಮನಹರಿಸದೇ ಅತ್ತೆ–ಸೊಸೆ ಮನೆಯತ್ತ ಹೆಜ್ಜೆ ಹಾಕಿದ್ದಾರೆ.

ಅವರು ಪಾರ್ಕ್ ಬಳಿ ಹೋಗುತ್ತಿದ್ದಾಗ ವ್ಯಕ್ತಿಯೊಬ್ಬ ಏಕಾಏಕಿ ಅತ್ತೆಯ ಕೊರಳಿನಿಂದ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಆದರೆ ಅದೃಷ್ಟವಶಾತ್ ಸರ ತುಂಡಾಗಿ ಒಂದು ಭಾಗ ಕೊರಳಲ್ಲೇ ಉಳಿದರೆ ಮತ್ತೊಂದು ಭಾಗ ನೆಲಕ್ಕೆ ಬಿದ್ದಿದೆ. ಅಷ್ಟರಲ್ಲಿ ಸೊಸೆ ರಕ್ಷಣೆಗೆ ಧಾವಿಸಿದ್ದರಿಂದ ಖದೀಮ ಸ್ಥಳದಿಂದ ಬರಿಗೈಯಲ್ಲಿ ಪರಾರಿಯಾಗಿದ್ದಾನೆ. ಬೈಕ್‌ನಿಂದ ಬಿದ್ದವರನ್ನು ಸಂತೈಸುತ್ತಿದ್ದ ವ್ಯಕ್ತಿಯೇ ಸರ ಕಳವಿಗೆ ಯತ್ನಿಸಿದ್ದು ಎಂದು ಮಹಿಳೆ ಗುರುತಿಸಿದ್ದಾರೆ. ಆತಂಕಗೊಂಡಿದ್ದ ಮಹಿಳೆಯರಿಗೆ ಧೈರ್ಯ ಹೇಳಿರುವ ಮಾಜಿ ಕಾರ್ಪೊರೇಟರ್ ಮ.ವಿ.ರಾಂ ಪ್ರಸಾದ್, ಘಟನೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದೇನೆ. ಮೂರು ವಾರಗಳ ಹಿಂದೆ ಇದೇ ರಸ್ತೆಯಲ್ಲಿ ಸರ ಕಿತ್ತುಕೊಂಡು ಹೋಗಿದ್ದರು. ಈ ಭಾಗದಲ್ಲಿ ಗಸ್ತು ಹೆಚ್ಚಿಸಿ ಮತ್ತೆ ಈ ರೀತಿ ಘಟನೆ ಆಗದಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿರುವುದಾಗಿ ತಿಳಿಸಿದ್ದಾರೆ.

ನಾಳೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

ಮೈಸೂರು, ಜೂ.26– ಮೈಸೂರು ನರ ಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ವಿದ್ವಾನ್ ಶೃಂಗೇರಿ ಹೆಚ್.ಎಸ್. ನಾಗರಾಜ್ (ಶಿವಮೊಗ್ಗ) ಅವರಿಂದ ಅಮೋಘ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಜೂ.28(ಶನಿವಾರ) ಸಂಜೆ 6.30ಕ್ಕೆ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಶಿವಾಜಿ ರಸ್ತೆ, ಎನ್.ಆರ್.ಮೊಹಲ್ಲಾ ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ವಿದುಷಿ ಡಾ. ಶ್ರೀಮತಿ ವೀಣಾ ಸುರೇಶ್‌ರವರಿಂದ ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್ ಅವರಿಂದ ಮೃದಂಗ, ವಿದ್ವಾನ್ ವಿ.ಎಸ್. ರಮೇಶ್ ಅವರಿಂದ ಘಟಂ ಪಕ್ಕವಾದ್ಯವಿರಲಿದೆ.

ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣ: ಸೂರಜ್ ರೇವಣ್ಣಗೆ ರಿಲೀಫ್

ಬೆಂಗಳೂರು, ಜೂ.26– ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣಗೆ ಬಿಗ್ ರಿಲೀಫ್ ಸಿಕ್ಕಿದೆ. ಸೂರಜ್ ವಿರುದ್ಧದ ಆರೋಪ ಸಂಬಂಧ ಸಿಐಡಿ ಬಿ ರಿಪೋರ್ಟ್ ಸಲ್ಲಿಸಿದೆ. ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ತನಿಖೆ ನಡೆಸಿದ್ದರು. ಸೂರಜ್ ರೇವಣ್ಣ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿದ್ದವು. ಒಂದು ಪ್ರಕರಣದಲ್ಲಿ ಸಿಐಡಿ ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಸಿದೆ.

ಮೂರನೇ ಪುಟದಿಂದ

ಹುಲಿಗಳು ಧಾರುಣ ಸಾವು

ತಾಯಿ ತಿಂದು, ತಂದ ಆಹಾರ ಸೇವಿಸಿರಬಹುದು: ಮರಿಗಳಿಗೆ ತಾಯಿ ಹುಲಿ ತಾನೇ ಆಹಾರ ತಂದು ನೀಡಿರುವ ಶಂಕೆಯೂ ಇದೆ. ಕಾಡಂಚಿನ ಗ್ರಾಮದ ಜಾನುವಾರು ಬೇಟೆಯಾಡಿರಬಹುದು. ಹುಲಿ ತಿಂದು ಬಿಟ್ಟು ಹೋದ ಆ ಜಾನು ವಾರು ಮೇಲೆ ವಿಷ ಸುರಿದಿರುವ ಸಾಧ್ಯತೆ ಇದೆ. ಅದನ್ನು ಮತ್ತೆ ಸೇವಿಸಿದ ತಾಯಿ, ಮರಿಗಳಿಗೂ ಪೂರೈಸಿರುವ ಶಂಕೆ ಇದೆ. ಇದರಿಂದ ತಾಯಿಯೊಂದಿಗೆ ನಾಲ್ಕು ಮರಿಗಳು ಮೃತಪಟ್ಟಿವೆ ಎಂದು ಹೇಳಲಾಗುತ್ತಿದೆ.

ಅಲ್ಲದೆ, ಹೊಲ–ತೋಟದಲ್ಲಿ ಬೆಳೆದ ಬೆಳೆಗೆ ಕಳೆನಾಶಕ ಸಿಂಪಡಿಸಿದಾಗ, ಮಳೆ ನೀರಲ್ಲಿ ವಿಷದ ಅಂಶ ಬೆರೆತು, ಹಳ್ಳ–ಕೊಳ್ಳದಲ್ಲಿ ಸಂಗ್ರಹವಾಗಿರಬಹುದು. ಹೀಗೆ ಕ್ರಿಮಿನಾಶಕದ ಅಂಶ ಸೇರ್ಪಡೆಯಾಗಿರುವ ನೀರನ್ನು ಹುಲಿಗಳು ಸೇವಿಸಿರುವ ಸಾಧ್ಯತೆಯೂ ಇದೆ. ಈ ಎಲ್ಲಾ ಅಂಶಗಳನ್ನು ಮುಂದಿಟ್ಟುಕೊಂಡು ಅರಣ್ಯ ಇಲಾಖೆ ತನಿಖೆ ಆರಂಭಿಸಿದೆ.

ಮರಣೋತ್ತರ ಪರೀಕ್ಷೆ: ಹುಲಿಗಳ ಮಾರಣ ಹೋಮಕ್ಕೆ ನಿಖರ ಕಾರಣ ಪತ್ತೆ ಮಾಡಲು ಮುಂದಾಗಿರುವ ಅರಣ್ಯ ಇಲಾಖೆ ಎಲ್ಲಾ ಐದು ಹುಲಿಗಳ ಮರಣೋತ್ತರ ಪರೀಕ್ಷೆ ನಡೆಸಿ, ಅಂಗಾಂಗಗಳ ಸ್ಯಾಂಪಲ್ ಪ್ರಯೋಗಾಲಯಕ್ಕೆ ರವಾನಿಸಿದೆ. ಡಿಸಿಎಫ್ ವೈ.ಚಕ್ರಪಾಣಿ, ಬಂಡೀಪುರದ ಪಶುವೈದ್ಯಾಧಿಕಾರಿ ಡಾ.ಮಿರ್ಜಾ ವಾಸಿಂ, ಎನ್‌ಟಿಸಿಎ ಪ್ರತಿನಿಧಿ ಮಲ್ಲೇಶಪ್ಪ, ಸಿಡಬ್ಲ್ಯುಎಲ್ ಡಬ್ಲ್ಯೂ ಪ್ರತಿನಿಧಿ ಟಿ.ಜಾನ್ ಪೀಟರ್, ಹನೂರು ಸರ್ಕಾರಿ ಪಶು ಆಸ್ಪತ್ರೆಯ ಪಶುವೈದ್ಯಾಧಿಕಾರಿ ಡಾ.ಸಿದ್ದರಾಜು ಮರಣೋತ್ತರ ಪರೀಕ್ಷೆ ವೇಳೆ ಹಾಜರಿದ್ದರು.

ಅಂತ್ಯಕ್ರಿಯೆ: ಹುಲಿಗಳ ಮರಣೋತ್ತರ ಪರೀಕ್ಷೆ ಬಳಿಕ ಎಲ್ಲಾ ಹುಲಿಗಳ ಕಳೇಬರವನ್ನು ನಿಯಮಾನುಸಾರ ಸುಡಲಾಯಿತು. ಹುಲಿಗಳ ಕಳೇಬರ ಸಿಕ್ಕಿದ ಸ್ಥಳ, ಸುತ್ತಮುತ್ತ ಸ್ಥಳದಲ್ಲಿ ಪರಿಶೀಲಿಸಲಾಗಿದ್ದು, ಜಾನುವಾರುವಿನ ಕಳೇಬರವೊಂದು ಪತ್ತೆಯಾಗಿದೆ ಎಂದು ಡಿಸಿಎಫ್ ಚಕ್ರಪಾಣಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಸೆಪ್ಟೆಂಬರ್ ಕಳೀಲಿ...

ಗದ್ದಲ ಹೆಚ್ಚಿರುತ್ತದೆ. ಆ ಹಿನ್ನೆಲೆಯಲ್ಲಿ ನಾನಾ ಜಂಜಾಟಗಳ ನಡುವೆ ಸಿದ್ದರಾಮಯ್ಯ ಪರಿಸ್ಥಿತಿಗೆ ತಕ್ಕಂತೆ ಸರ್ಕಾರ, ಪಕ್ಷವನ್ನು ನಿರ್ವಹಿಸಬೇಕಾಗುತ್ತದೆ ಎಂದು ಹೇಳಿದರು. 2013–18ರಲ್ಲಿದ್ದ ಸಿದ್ದರಾಮಯ್ಯ ಈಗ ಇಲ್ಲ ಅಂತಾ ಹೇಳಬಹುದು. ಇದು ಹೆಚ್ಚು–ಕಡಿಮೆ ಜನರ ಅಭಿಪ್ರಾಯವೂ ಆಗಿದೆ. ಅದಕ್ಕೆ ಅನೇಕ ಶಕ್ತಿ ಕೇಂದ್ರಗಳೇ ಕಾರಣಗಳಾಗಿವೆ ಎಂದು ಪ್ರತಿಕ್ರಿಯಿಸಿದರು. ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎನ್.ರಾಜಣ್ಣ, ಕಾಂಗ್ರೆಸ್‌ನಲ್ಲಿ ಪವರ್ ಸೆಂಟರ್‌ಗಳು ಜಾಸ್ತಿಯಾಗಿವೆ. ಇವು ಜಾಸ್ತಿಯಾದಷ್ಟೂ ನಮ್ಮ ಸಂಘಟನೆಗೆ ಒಳಿತಾಗಬಹುದೇನೋ ಎಂದು ವ್ಯಂಗ್ಯವಾಡಿದರು.

ರಾಜ್ಯ ಮಟ್ಟದಲ್ಲಿ ಏನೇ ನಿರ್ಧಾರ ಕೈಗೊಂಡರೂ ದೆಹಲಿಯ ಹಸಿರು ನಿಶಾನೆ ಬೇಕು. ಅದನ್ನು ಬಿಟ್ಟು ನಾವು ಇಲ್ಲಿ ಏನೂ ಮಾಡಲಾಗದು ಎಂದಿದ್ದಾರೆ. ಸಿದ್ದರಾಮಯ್ಯ ಬದಲಾವಣೆ–ಗಿದಲಾವಣೆ ಎನ್ನುವುದೆಲ್ಲಾ ಮಾಧ್ಯಮದ ಸುದ್ದಿ. ನಾನಂತೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷನಾಗಲು ಸಿದ್ಧನಿದ್ದೇನೆ. ಅದಕ್ಕಾಗಿ ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧ. ಪರಿಶಿಷ್ಟ ಪಂಗಡಕ್ಕೆ ಸೇರಿದ ನನಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವಂತೆ ವರಿಷ್ಠರಲ್ಲಿ ಮನವಿ ಮಾಡಿದ್ದೇನೆ. ಆದರೆ, ಎಲ್ಲವೂ ನಮ್ಮ ಪವರ್ ಸೆಂಟರ್‌ನಿಂದಲೇ ಆಗಬೇಕು.

ಸಿದ್ದರಾಮಯ್ಯ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಪವರ್ ಸೆಂಟರ್ ಒಂದೇ ಆಗಿತ್ತು. ಆಗ, ಡಾ. ಜಿ.ಪರಮೇಶ್ವರ್ ಹಾಗೂ ದಿನೇಶ್ ಗುಂಡೂರಾವ್ ರಾಜ್ಯಾಧ್ಯಕ್ಷರಾಗಿದ್ದರು. ಹೊಂದಾಣಿಕೆಯಿಂದ ಹೋಗುತ್ತಿದ್ದೆವು ಎನ್ನುವ ಮೂಲಕ ಈಗ ಡಿ.ಕೆ.ಶಿವಕುಮಾರ್ ಪ್ರತ್ಯೇಕ ಪವರ್ ಸೆಂಟರ್ ಮಾಡಿಕೊಂಡಿದ್ದಾರೆ ಎಂದು ಪರೋಕ್ಷವಾಗಿ ಅಭಿಪ್ರಾಯಪಟ್ಟರು.

ಏನೋ..., ಮುಂದೆ ದೆಹಲಿಯಲ್ಲಿ ನಮ್ಮನ್ನೆಲ್ಲಾ ಸರಿದಾರಿಗೆ ಕರೆದುಕೊಂಡು ಹೋಗುವ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸ ನನಗಿದೆ. ಈಗ ಏನೇ ಮಾಡಿದರೂ ಏಕಪಕ್ಷೀಯ ನಿರ್ಧಾರ ಮಾಡಲು ಸಾಧ್ಯವಾಗದು. ಇದರಿಂದ ಮಹತ್ವದ ವಿಚಾರಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಕಷ್ಟವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅಧಿಕಾರ ಹಂಚಿಕೆ ಒಪ್ಪಂದದ ಹಿನ್ನೆಲೆಯಲ್ಲಿ ಈ ವರ್ಷಾಂತ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ರಾಜಕೀಯ ವಲಯದಲ್ಲಿ ಅದರಲ್ಲೂ ವಿಶೇಷವಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಈಗಾಗಲೇ ಸಾಕಷ್ಟು ಊಹಾ–ಪೋಹಗಳಿವೆ. ಆದರೆ ಪಕ್ಷದ ಹೈಕಮಾಂಡ್ ಖಡಕ್ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಇತ್ತೀಚೆಗೆ ಬಹಿರಂಗ ಹೇಳಿಕೆಗಳು ಸಂಪೂರ್ಣ ಸ್ತಬ್ಧಗೊಂಡಿದ್ದವು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ 2 ದಿನಗಳ ದೆಹಲಿ ಭೇಟಿ ನಂತರ ರಾಜ್ಯಕ್ಕೆ ವಾಪಸ್ಸಾಗುತ್ತಿದ್ದಂತೆ ಮತ್ತೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಅಸಮಾಧಾನದ ನಡುವೆ ಸಚಿವರ ಹೇಳಿಕೆಗಳು ಕೇಳಿಬಂದಿದ್ದು, ಕೆಲವು ಶಾಸಕರು ತಮ್ಮದೇ ಪಕ್ಷದ ಸರ್ಕಾರದ ಕಾರ್ಯವೈಖರಿ ಬಗ್ಗೆ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕುತ್ತಿದ್ದಾರೆ.

ಜಂಗಲ್ ಮಂಗಲ್

ಟೈಟಲ್ ಕೊಟ್ಟಿದ್ದು ಯೋಗರಾಜ ಭಟ್ರು



ಜಂಗಲ್‌ಮಂಗಲ್ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು, ಈ ಸಂದರ್ಭದಲ್ಲಿ ನಿರ್ದೇಶಕ ರಕ್ಷಿತ್‌ಕುಮಾರ್ ಮಾತನಾಡುತ್ತಾ, ನಮ್ಮ ಚಿತ್ರದ ಟ್ರೈಲರ್ ನೋಡಿದ ಯೋಗರಾಜ್ ಭಟ್ಟರು ಈ ಚಿತ್ರಕ್ಕೆ ಜಂಗಲ್ ಮಂಗಲ್ ಹೆಸರಿಡಿ ಎಂದರು. ಚಿತ್ರ ಮೆಚ್ಚಿದ ಮತ್ತೊಬ್ಬ ನಿರ್ದೇಶಕ ಸಿಂಪಲ್‌ಸುನಿ ತಮ್ಮ ಸುನಿ ಸಿನಿಮಾಸ್ ಬ್ಯಾನರ್ ಮೂಲಕ ಚಿತ್ರವನ್ನು ಅರ್ಪಿಸಲು ಹೇಳಿದರು. ಒಂದಷ್ಟು ಜನ ಸ್ನೇಹಿತರೇ ಸೇರಿ ಈ ಚಿತ್ರ ನಿರ್ಮಿಸಿದ್ದೇವೆ. ಹತ್ತು ವರ್ಷಗಳಿಂದ ಕನ್ನಡ ಹಾಗೂ ತುಳು ಚಿತ್ರರಂಗದಲ್ಲಿ ಕೆಲಸ ಮಾಡಿದ ನಾನು ಈ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶಕನಾಗಿದ್ದೇನೆ. ಇದು ಅರೆಮಲೆನಾಡಿನಲ್ಲಿ ನಡೆಯುವ ಕಥೆಯಾದರೂ, ಯೂನಿವರ್ಸಲ್ ಸಬ್ಜೆಕ್ಟ್ ಎನ್ನಬಹುದು. ಇಂಥ ಘಟನೆ ಎಲ್ಲಾ ಪ್ರಾಂತ್ಯದಲ್ಲೂ ನಡೆಯುತ್ತದೆ. ಸಹ್ಯಾದ್ರಿ ಸ್ಟುಡಿಯೋಸ್ ಮೂಲಕ ಪ್ರಜೀತ್ ಹೆಗಡೆ, ಸಂಕಲನಕಾರ ಮನು ಶೇಡ್ಗಾರ್ ಸೇರಿ ಬಂಡವಾಳ ಹಾಕಿದ್ದಾರೆ. ಯಶ್ ಶೆಟ್ಟಿ, ಹರ್ಷಿತ ರಾಮಚಂದ್ರ ನಾಯಕ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ, ಉಳಿದಂತೆ ಉಗ್ರಂ ಮಂಜು, ಬಲರಾಜವಾಡಿ ನಟಿಸಿದ್ದಾರೆ. ಜುಲೈ 4ರಂದು ಚಿತ್ರ ತೆರೆಗೆ ಬರಲಿದೆ ಎಂದರು.

ನಾಯಕ ಯಶ್ ಶೆಟ್ಟಿ ಮಾತನಾಡುತ್ತಾ, ನನಗೆ ನಾಯಕನಾಗಿಯೇ ನಟಿಸಬೇಕೆಂಬ ಆಸೆ ಇಲ್ಲ ಒಬ್ಬ ನಟನಾಗಿ ಗುರುತಿಸಿಕೊಳ್ಳಬೇಕಷ್ಟೆ. ಆದರೆ ನಾನು ಮೊದಲು ನಾಯಕನಾಗಿ ನಟಿಸಿದ್ದು "ಸೂಜಿದಾರ" ಚಿತ್ರದಲ್ಲಿ. ನಿಜ ಹೇಳಬೇಕೆಂದರೆ ಈ ಚಿತ್ರಕ್ಕೆ ಕಥೆಯೇ ನಿಜವಾದ ನಾಯಕ. ಇನ್ನು ನಮ್ಮ ಚಿತ್ರಕ್ಕೆ ನಿರ್ಮಾಪಕ ಪ್ರಜೀತ್ ಹೆಗಡೆ ಅವರ ಸಹಕಾರ ಅಪಾರ ಎಂದರು.

ನಾಯಕಿ ಹರ್ಷಿತ ರಾಮಚಂದ್ರ ಮಾತನಾಡುತ್ತಾ, ಈ ಚಿತ್ರದಲ್ಲಿ ನಾನು ದಿವ್ಯ ಎಂಬ ಮಧ್ಯಮ ವರ್ಗದ ಜವಾಬ್ದಾರಿಯುತ ಕರಾವಳಿ ಹೆಣ್ಣುಮಗಳಾಗಿ ಕಾಣಿಸಿಕೊಂಡಿದ್ದೇನೆ. ಅಂಗನವಾಡಿ ಶಿಕ್ಷಕಿ ಎಂದು ತಮ್ಮ ಪಾತ್ರದ ಕುರಿತಂತೆ ಹೇಳಿದರು.

ಉಗ್ರಂ ಮಂಜು ಮಾತನಾಡುತ್ತಾ, ನಿರ್ದೇಶಕ ರಕ್ಷಿತ್ ಒಂದೊಳ್ಳೆ ಕಥೆ ಮಾಡಿಕೊಂಡಿದ್ದಾರೆ. ನಾನು ಈ ಚಿತ್ರದಲ್ಲಿ ಖಳನಾಯಕ. ಈ ಹಿಂದೆ ಮಾಡಿರುವ ಎಲ್ಲಾ ಪಾತ್ರಗಳಿಗಿಂತ ಇದು ವಿಭಿನ್ನವಾಗಿದೆ ಎಂದರು.

ಅಪ್ಪು ಕಪ್ ಶಟಲ್ ಬ್ಯಾಡ್ಮಿಂಟನ್ ಟೂರ್ನಿ


ಟೀಂಗಳ ಹರಾಜು ಪ್ರಕ್ರಿಯೆಗೆ ಅಶ್ವಿನಿ ಪುನೀತ್ ರಾಜಕುಮಾರ್ ಚಾಲನೆ



ನಟ, ಪುನೀತ್ ರಾಜ್‌ಕುಮಾರ್ ಅವರ ಸವಿನೆನಪಿಗಾಗಿ ಆಯೋಜಿಸುತ್ತ ಬಂದಿರುವ ಅಪ್ಪುಕಪ್(ಶಟಲ್ ಬ್ಯಾಡ್ಮಿಂಟನ್ ಟೂರ್ನಿ)ನ ಎರಡು ಸೀಸನ್‌ಗಳು ಈಗಾಗಲೇ ಯಶಸ್ವಿಯಾಗಿ ನಡೆದಿದ್ದು, ಇದೀಗ ಅಪ್ಪುಕಪ್ ಸೀಸನ್ 3 ಲೀಗ್ ಪಂದ್ಯಗಳನ್ನು ಜುಲೈ ತಿಂಗಳಲ್ಲಿ ಆಯೋಜಿಸಲಾಗಿದೆ. ಇತ್ತೀಚೆಗೆ ಸ್ಟೆಲ್ಲರ್ ಸ್ಟುಡಿಯೋ ಹಾಗೂ ಪಿಆರ್‌ಕೆ ಆಡಿಯೋ ಸಹಯೋಗದಲ್ಲಿ ನಡೆಯಲಿರುವ ಅಪ್ಪು ಕಪ್ ಮೂರನೇ ಸೀಸನ್‌ನ ಉದ್ಘಾಟನಾ ಸಮಾರಂಭ ಹಾಗೂ ಟೀಂಗಳ ಹರಾಜು ಪ್ರಕ್ರಿಯೆ ನಡೆಯಿತು. ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್, ನಿರ್ಮಾಪಕ ಸಾ.ರಾ. ಗೋವಿಂದು, ವಿಧಾನಪರಿಷತ್ ಸದಸ್ಯ ಸರವಣ ಹಾಗೂ ಶಾಸಕ ರಾಜುಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಲಾವಿದರಾದ ರಾಜವರ್ಧನ್, ಅನಿರುದ್ಧ, ಪ್ರಿಯಾಂಕ ಉಪೇಂದ್ರ, ಸೃಜನ್ ಲೋಕೇಶ್ ಹಾಗೂ ರಾಗಿಣಿ ದ್ವಿವೇದಿ ಸೇರಿದಂತೆ ಅನೇಕ ಕಲಾವಿದರು ಇಲ್ಲಿ ಉಪಸ್ಥಿತರಿದ್ದರು.

ಆಯೋಜಕ ಚೇತನ್ ಸೂರ್ಯ ಮಾತನಾಡುತ್ತಾ, ಕಳೆದೆರಡು ಸೀಸನ್‌ಗಳಿಂದಲೂ ಅಶ್ವಿನಿ ಪುನೀತ್ ರಾಜಕುಮಾರ್ ಅವರು ನಮ್ಮ ಜೊತೆಗಿದ್ದಾರೆ. ಆಗಸ್ಟ್ 16 ಮತ್ತು 17ರಂದು ಗೋವಾದಲ್ಲಿ ಅಪ್ಪು ಕಪ್‌ನ ಫೈನಲ್ ಪಂದ್ಯಗಳು ನಡೆಯಲಿವೆ. ಈ ಪಂದ್ಯಾವಳಿಯಲ್ಲಿ ಒಟ್ಟು ಹತ್ತು ತಂಡಗಳಿದ್ದು, ಅದರಲ್ಲಿ ನಾಲ್ಕು ತಂಡಗಳು ಫೈನಲ್ ಪ್ರವೇಶಿಸಲಿದೆ ಎಂದು ಹೇಳಿದರು. ನಂತರ ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್, ಸರವಣ ಮಾತನಾಡಿ, ಅಪ್ಪು ಕಪ್ ಸೀಜನ್ 3 ಯಶಸ್ವಿಯಾಗಲೆಂದು ಶುಭ ಹಾರೈಸಿದರು.

ಸಿನಿಪದಬಂಧ-582



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.	ಶ್ರೀನಾಥ್ ಅಭಿನಯದಲ್ಲಿ ಬಂದ ಹತ್ತರೊಳಗಿನ ಸಂಖ್ಯೆಗಳು	7
3.	_ _ ಇದ್ದೋನೇ ಬಾಸು	2
6.	ಕಲ್ಪನಾಳ ಬಿರುದು	5
8.	ಚೇತನ್ ಚಂದ್ರ – ಅಮೂಲ್ಯ ಅಭಿನಯದ ಪ್ರೇಮ ಕಾವ್ಯ	3
9.	ಆರ್. ಎಂ. ವೀರಭದ್ರಯ್ಯ ನಿರ್ದೇಶನದಿಂದ ಬಂದ ಅಪ್ಸರೆ	4
11.	" _ _ _ _ ಮೇಘವೇ ಹೋಗಿ ಬಾ..... ",	4
13.	ವಿಶುಕುಮಾರ್‌ನ ತೀರಪ್ರದೇಶ	4
14.	ವಿಷ್ಣುವರ್ಧನ್ ಅಭಿನಯದ ದೇವಪರ್ವತ	5
15.	ಡಾ. ರಾಜ್‌ಕುಮಾರ್ – ಲಕ್ಷ್ಮಿಯ ಅನುರಾಗದಲ್ಲಿ ಸಿಕ್ಕ ಜಯ	6
17.	ಜಯಮಾಲ ಬೆಟ್ಟದ ಹೆಣ್ಣು	4
19.	ನಿರ್ದೇಶಕ ಕಟ್ಟೆ ರಾಮಚಂದ್ರ ಅವರಿಗಿರುವ ತಿಳುವಳಿಕೆ	3
20.	ಅನಂತ್‌ನಾಗ್ ಕಾಲಕ್ಕೆ ತಕ್ಕಂತೆ ಹೇಳಿದ ಹುಚಿ	7

ಮೇಲಿನಿಂದ ಕೆಳಕ್ಕೆ

1.	ಈ ಮಾಸದಲ್ಲಿ ಬೂಟಾಟಿಕೆಯವನಿದ್ದಾನೆ	5
2.	ವಿಷ್ಣುವರ್ಧನ್ ಬೀರಿದ ನೇರ ದೃಷ್ಟಿ	4
4.	ಹನ್ನೆರಡು ಸೂತ್ರಗಳನ್ನೊಳಗೊಂಡ ಕುಟುಂಬ	5
5.	ರವಿಚಂದ್ರನ್ – ರಂಭಾ ಅಭಿನಯದ ಚಿತ್ರ	4
7.	ಮಾಲಾಶ್ರೀಯ ಪತಿಯನ್ನು ಶಾಸ್ತ್ರೋಕ್ತವಾಗಿ ಲಗ್ನವಾಗಿಲ್ಲ	6
10.	ಪ್ರಜ್ವಲ್ ದೇವರಾಜ್ – ಐಂದ್ರಿತಾ ರೈ ನಡೆಸಿದ ಉತ್ಸವ	5
12.	ಚಳಿಗಾಲದಲ್ಲಿ ಕಂಡ ಸ್ವಪ್ನ	6
16.	ದೇಶಿಯ ಕ್ರೀಡೆಯೊಂದು ಚಿತ್ರವೂ ಆಗಿದೆ	3
18.	_ _ ಎಲ್ಲಿದೆ?	2

ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಸಿನಿ ಪದಬಂಧ 581ರ ಉತ್ತರ

ಅ	ಭಿ	ನ	ಯ	ಭಾ	ರ್ಗ	ವ			ಚಿ	
ನು			ಮ			ಜ್ರ		ಕ	ನ್ನ	ಡ
ಭ		ರಾ	ಕಿಂ	ಗ್		ಕಾ			ದ	
ವ	ಜ್ರ		ಕ		ಬ	ಯ	ಲು	ದೀ	ಪ	
			ರ		ಯ				ದ	
ಶ್ರೀ	ಮಾ	ನ್		ಒ	ಲು	ಮೆ		ಸು	ಕ	ನ್ಯ
	ದ				ದಾ		ಅ			
	ಕ	ನ	ಕಾಂ	ಬ	ರಿ		ಜ್ಞಾ		ಕಾ	ಶಿ
	ವ್ಯ			ಲ		ಅಂ	ತ	ರ		ವ
ಆ	ಸ	ರೆ		ರಾ			ವಾ			ಮ
	ನಿ			ಮ	ರ	ಳು	ಸ	ರ	ಪ	ಣಿ

ವಿಜೇತರು: ಎಂ.ಎಸ್.ವೀಣಾ, ನಂ.2618/1ಇ/10ಎ, ಮೂರನೇ ಕ್ರಾಸ್, ವಾಲ್ಮೀಕಿ ರಸ್ತೆ, ಹಳೆ ಒಂಟಿಕೊಪ್ಪಲ್, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಪೈನಾ ಮಗುವಿನ ಸುತ್ತ ನಡೆಯೋ ಹಾರರ್ ಕಥೆ



ಸಾವಿರಾರು ಚಿತ್ರಗಳಿಗೆ ಸಾಹಸ ಸಂಯೋಜಕರಾಗಿ ಕೆಲಸ ಮಾಡಿರುವ ಕೌರವ ವೆಂಕಟೇಶ್ ಈ ಹಿಂದೆ 'ನೋ ಕೋಕೇನ್' ಎಂಬ ಚಿತ್ರಕ್ಕೆ ಆಕ್ಷನ್ ಕಟ್ ಹೇಳುವ ಮೂಲಕ ನಿರ್ದೇಶನಕ್ಕಿಳಿದಿದ್ದರು. ಈಗ ಮತ್ತೊಂದು ಚಿತ್ರದ ನಿರ್ದೇಶನಕ್ಕೆ ಮುಂದಾಗಿದ್ದಾರೆ. ಆ ಚಿತ್ರದ ಹೆಸರು ಪೈನಾ. ಈ ಚಿತ್ರಕ್ಕೆ ಕೌರವ ವೆಂಕಟೇಶ್ ಅವರೇ ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈ ಮೂಲಕ ಎರಡನೇ ಬಾರಿಗೆ ನಿರ್ದೇಶನದ ಜವಬ್ದಾರಿ ಹೊತ್ತುಕೊಂಡಿದ್ದಾರೆ. ಕಾನಿಷ್ಕ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಆರ್. ಕನಿಷ್ಕ ಮತ್ತು ಆರ್.ವೇದಿಶ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಕೌರವ ವೆಂಕಟೇಶ್ ಅವರ ಶಿಷ್ಯರಾದ ಡಿ.ಎಸ್.ಎಸ್. ಗೋವಿಂದರಾಜು ದೇವನಹಳ್ಳಿ ಹಾಗೂ ಲಾಫಿಂಗ್ ಪೀಕಾಕ್ ಪ್ರೊಡಕ್ಷನ್ಸ್ ಚಿತ್ರದ ಸಹನಿರ್ಮಾಪಕರಾಗಿ ಕೈಜೋಡಿಸಿದ್ದಾರೆ. ಇತ್ತೀಚೆಗೆ ಸಾಣೆಗುರುವನಹಳ್ಳಿಯ ಶ್ರೀಗಣೇಶ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ಸಮಾರಂಭ ನೆರವೇರಿತು. ನಟಿ ಪ್ರಿಯಾಹಾಸನ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಡಾ.ಲೀಲಾ ಮೋಹನ್, ಚಿರಾಗ್ ಚಾಲುಕ್ಯ ಚಿತ್ರದ



ನಾಯಕರಾಗಿದ್ದು, ಮಧುಶ್ರೀ ಹಾಗೂ ತೃಪ್ತಿ ಚಿತ್ರದ ನಾಯಕಿಯರಾಗಿ ಬಣ್ಣ ಹಚ್ಚಲಿದ್ದಾರೆ. ನಿರ್ದೇಶಕ ಯೋಗರಾಜ ಭಟ್ಟರು ಒಬ್ಬ ಮುಸ್ಲಿಂ ವ್ಯಕ್ತಿಯಾಗಿ ಹಾಗೂ ರಂಗಾಯಣ ರಘು ವಾಸ್ತುತಜ್ಞನಾಗಿ ಅಲ್ಲದೆ ವಿಶೇಷ ಪಾತ್ರದಲ್ಲಿ ಸಾಧುಕೋಕಿಲ ನಟಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಕೌರವ ವೆಂಕಟೇಶ್ 'ಪೈನಾ' ಒಂದು ಮಗುವಿನ ಹೆಸರು. ಈ ಮಗುವಿನಿಂದಲೇ ಚಿತ್ರ ಶುರುವಾಗುತ್ತದೆ, ಇದು ಹಾರರ್ ಚಿತ್ರವಾದ್ದರಿಂದ ಕಥೆಯನ್ನು ಗೌಪ್ಯವಾಗಿಡಲಾಗಿದೆ. ಕೊನೆಯವರೆಗೂ ಕುತೂಹಲ ಕಾಯ್ದುಕೊಂಡು ಹೋಗುವಂಥ ಚಿತ್ರಕಥೆ ನಮ್ಮ ಚಿತ್ರದಲ್ಲಿದೆ. ಹಾರರ್ ಜತೆಗೆ ಥ್ರಿಲ್ಲರ್ ಕೂಡ ಚಿತ್ರದಲ್ಲಿದ್ದು ಮುಂದೇನಾಗುತ್ತದೆ ಎಂಬ ಕ್ಯೂರಿಯಾಸಿಟಿ ಹುಟ್ಟಿಸುತ್ತಾ ಸಾಗುತ್ತದೆ. ಚಿಕ್ಕಮಗಳೂರು, ಬೆಂಗಳೂರು ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ವಿಶೇಷವಾಗಿ ಈ ಚಿತ್ರದಲ್ಲಿ ಐದು ವಿಶೇಷ ಆಕ್ಷನ್ ಸೀನ್‌ಗಳಿದ್ದು ಕೌರವ ವೆಂಕಟೇಶ್ ಅವರೇ ಕಂಪೋಜ್ ಮಾಡುತ್ತಿದ್ದಾರೆ, ಪೈನಾ ಚಿತ್ರದ ಎರಡು ಹಾಡುಗಳಿಗೆ ಕಲ್ಕಿ ಅಭಿಷೇಕ್ ಅವರ ಸಂಗೀತ ಸಂಯೋಜನೆಯಿದೆ. ಇದು ಹಾರರ್ ಚಿತ್ರವಾಗಿರುವುದರಿಂದ ಅರ್ಧಕ್ಕಿಂತ ಹೆಚ್ಚು ಭಾಗದಲ್ಲಿ ಗ್ರಾಫಿಕ್ಸ್ ಬಳಸಲಾಗುತ್ತದೆ ಎಂದು ಹೇಳಿದರು. ವಿ.ರವಿಚಂದ್ರನ್ ಅವರ ಕಥೆ, ಮುಂಜಾನೆ ಮಂಜು ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಭರವಸೆಯೇ ಬದುಕಿನ ಹೊಸಬೆಳಕು




ಮುತ್ತು ಗಂಗೂರ ಅವರ ನಿರ್ದೇಶನದ ಭರವಸೆ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ವಕೀಲರು, ಸರ್ಕಾರಿ ಅಧಿಕಾರಿಗಳು, ರಾಜಕೀಯ ಧುರೀಣರು ಆಗಮಿಸಿ ಟ್ರೇಲರ್ ಬಿಡುಗಡೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರೀತ್ಸೋ ಹೃದಯಕ್ಕೆ ಎಂಬ ಅಡಿಬರಹ ಇರುವ ಭರವಸೆ ಚಿತ್ರವನ್ನು ಆರ್.ಆರ್. ಮೂವೀ ಮೇಕರ್ಸ್ ಅಡಿಯಲ್ಲಿ ಉದ್ಯಮಿ ನಾಗರಾಜ್ ಅವರ ಪತ್ನಿ ಲಕ್ಷ್ಮೀ ನಾಗರಾಜ್ ನಿರ್ಮಾಣ ಮಾಡಿದ್ದಾರೆ. ಮುತ್ತು ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿಯನ್ನೂ ನಿಭಾಯಿಸಿದ್ದಾರೆ.

ವೇದಿಕೆಯಲ್ಲಿ ಮಾತನಾಡಿದ ನಿರ್ದೇಶಕರು, ಅನಿವಾರ್ಯ ಕಾರಣದಿಂದ ಚಿತ್ರದ ಬಿಡುಗಡೆ ಸ್ವಲ್ಪ ತಡವಾಗಿದೆ. ಆದರೂ ಅಂದುಕೊಂಡಂತೆ ನಮ್ಮ ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ. ಇದು ಲವ್, ಕ್ರೈಮ್ ಜಾನರ್ ಚಿತ್ರವಾದರೂ ಅಪ್ಪ-ಅಮ್ಮನ ಪ್ರೀತಿ ಪ್ರೇಮ, ಗೆಳತನದ ಭಾವನಾತ್ಮಕ ಸನ್ನಿವೇಶಗಳು ಚಿತ್ರದಲ್ಲಿದ್ದು ನೋಡುಗರನ್ನು ಸೆಳೆಯುತ್ತವೆ. ಪ್ರತಿಯೊಬ್ಬ ವ್ಯಕ್ತಿಯು ಬದುಕಿನಲ್ಲಿ ಒಂದೊಂದು ಭರವಸೆ ಇಟ್ಟುಕೊಂಡಿರುತ್ತಾನೆ. ಒಮ್ಮೊಮ್ಮೆ ಸೋತವನೂ ಸಹ ಗೆಲ್ಲುತ್ತಾನೆ. ಅಲ್ಲದೆ ಗೆದ್ದವನು ತಾನು ಇನ್ನೇನನ್ನೋ ಸಾಧಿಸಬೇಕೆಂದು ಹಪಹಪಿಸುತ್ತಾನೆ. ಅದೇ ರೀತಿ ತಾನು ಜೀವನದಲ್ಲಿ ಗೆದ್ದೇ ಗೆಲ್ಲುವೆ ಎಂಬ ಭರವಸೆ ಇಟ್ಟುಕೊಂಡಿದ್ದ ಹುಡುಗನೊಬ್ಬ ಆ ಹಾದಿಯಲ್ಲಿ ಏನೇನೆಲ್ಲ ಎದುರಿಸಿದ, ಅಂತಿಮವಾಗಿ ಅದೆಲ್ಲವನ್ನೂ ಭೇದಿಸಿ ಹೇಗೆ ಜೀವನದಲ್ಲಿ ಗೆಲುವು ಸಾಧಿಸುತ್ತಾನೆ ಎಂಬುದನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ ಎಂದು ಹೇಳಿದರು.

ನಿರ್ಮಾಪಕ ನಾಗರಾಜ್ ಮಾತನಾಡಿ ಬಸವಣ್ಣನವರ ನುಡಿ 'ಕಾಯಕವೇ ಕೈಲಾಸ' ನಮ್ಮ ಚಿತ್ರಕ್ಕೆ ಅನ್ವಯಿಸುತ್ತದೆ. ಚಿತ್ರಕ್ಕೆ ಹಣ ಹಾಕಲು ಬಂದವನಿಗೆ ನಿರ್ದೇಶಕರು ಸಣ್ಣ ಪಾತ್ರ ನೀಡಿ ಬಣ್ಣ ಹಚ್ಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಕ್ಕಳ ಕಥೆ ಇರುವ 'ಪಾಠಶಾಲೆ' ಎಂಬ ಚಿತ್ರವನ್ನು ಗೆಳೆಯ ಸುರೇಶ್ ಜತೆ ಸೇರಿ ನಿರ್ಮಿಸುತ್ತಿದ್ದೇನೆ. ಚಿತ್ರ ಗೆಲ್ಲುತ್ತೆ ಎಂಬ ಭರವಸೆ ನನಗಿದೆ ಎಂದರು.

ಬೆಂಗಳೂರು, ಶಿವಮೊಗ್ಗ, ಮಂಗಳೂರು ಹಾಗೂ ಉಡುಪಿಯ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಪ್ರಮುಖ ತಾರಾಗಣದಲ್ಲಿ ವಿನಯರಾಜ್, ಅಹಲ್ಯ ಸುರೇಶ್, ಹೊನ್ನವಳ್ಳಿ ಕೃಷ್ಣ, ಶೋಭ ರಾಜ್, ಮನಮೋಹನ ರೈ, ಕಿಲ್ಲರ್ ವೆಂಕಟೇಶ, ಕೆಂಪೇಗೌಡ ಸೇರಿ ಹಲವಾರು ಕಲಾವಿದರು ನಟಿಸಿದ್ದಾರೆ. ರಾಜೇಶ್ ಕೃಷ್ಣನ್, ವಿಜಯಪ್ರಕಾಶ್, ಶಮಿತಾ ಮಲ್ನಾಡ್, ಅನುರಾಧ ಭಟ್, ಸುಪ್ರಿಯಾ ಲೋಹಿತ್ ಚಿತ್ರದ ಹಾಡುಗಳಿಗೆ ದನಿಯಾಗಿದ್ದು, ಶ್ರೀಹರ್ಷ ಕಾಗೋಡ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವೀನಸ್ ಮೂರ್ತಿ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಬರುವ ಆಗಸ್ಟ್ ತಿಂಗಳಲ್ಲಿ ಭರವಸೆ ರಾಜ್ಯಾದ್ಯಂತ ತೆರೆಕಾಣಲಿದೆ.

ರಾಜಾಸಾಬ್ ಚಿತ್ರಕ್ಕೆ ಬೃಹತ್ ಬಂಗಲೆಯ ಸೆಟ್!



ಪ್ರಭಾಸ್ ಅಭಿನಯದ ದಿ ರಾಜಾಸಾಬ್ ಚಿತ್ರವನ್ನು ಕನ್ನಡ, ತೆಲುಗು ಸೇರಿದಂತೆ 5 ಭಾಷೆಗಳಲ್ಲಿ ಪೀಪಲ್ ಮೀಡಿಯಾ ಫ್ಯಾಕ್ಟರಿ ಮೂಲಕ ಟಿ.ಜಿ.ವಿಶ್ವಪ್ರಸಾದ್ ಅವರು ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿದ್ದಾರೆ. ಮಾರುತಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ, ಇದು ಹಾರರ್ ಫ್ಯಾಂಟಸಿ ಚಿತ್ರವಾಗಿದ್ದು, ಇದಕ್ಕಾಗಿಯೇ ಹೈದರಾಬಾದ್‌ನಲ್ಲಿ ಬೃಹತ್ ಸೆಟ್ ಹಾಕಲಾಗಿದೆ. ಪ್ರಸಾದ್ ಸಿನಿಮಾಸ್‌ನಲ್ಲಿ ಈ ಚಿತ್ರದ ಟೀಸರ್ ಬಿಡುಗಡೆ ಮಾಡಿದ ನಂತರ ಸೆಟ್ ವೀಕ್ಷಣೆಗೆಂದೇ ಪತ್ರಕರ್ತರನ್ನು ಆಹ್ವಾನಿಸಲಾಗಿತ್ತು.

ಹೈದರಾಬಾದ್‌ನಿಂದ ಹತ್ತು ಕಿಲೋಮೀಟರ್ ದೂರದಲ್ಲಿರುವ ಪೀಪಲ್ ಮೀಡಿಯಾ ಫ್ಯಾಕ್ಟರಿ ಸ್ಟುಡಿಯೋದಲ್ಲಿ ಈ ಬಂಗಲೆಯ ಸೆಟ್ಟನ್ನು ಹತ್ತು ಕೋಟಿ ವೆಚ್ಚದಲ್ಲಿ ವಿಶೇಷವಾಗಿ ನಿರ್ಮಿಸಲಾಗಿದೆ. ಈ ಬೃಹತ್ ಸೆಟ್‌ನಲ್ಲೇ ಚಿತ್ರದ ಬಹುತೇಕ ಭಾಗದ ಚಿತ್ರೀಕರಣ ನಡೆಸಲಾಗಿದೆ. ಇದರಲ್ಲಿ ಆಗಿನ ಕಾಲದ ರಾಜರ ಭವ್ಯ ಅರಮನೆ, ವಿಲಾಸೀಗೃಹ, ಭವ್ಯವಾದ ರಾಜಸಭಾಂಗಣ, ಅಡುಗೆ ಮನೆ, ಗ್ರಂಥಾಲಯ, ಟಾರ್ಚರ್ ಕ್ಯಾಬಿನ್ ಜೊತೆಗೆ ಮಾಟ-ಮಂತ್ರ ಮಾಡುವ, ಬಲಿ ಕೊಡುವ ಜಾಗ, ಹೀಗೆ ನೋಡುತ್ತ ಹೋದಂತೆ ಭಯಹುಟ್ಟಿಸುವ ಅನೇಕ ಚಿತ್ರವಿಚಿತ್ರ ಆಕೃತಿಗಳು, ಇದೆಲ್ಲವನ್ನೂ ನೋಡುವಾಗ ಬೇರೊಂದು ಲೋಕಕ್ಕೇ ಹೋದ ಅನುಭವ ಪತ್ರಕರ್ತರಿಗಾಯ್ತು.

ನಿರ್ದೇಶಕ ಮಾರುತಿ ಮಾತನಾಡುತ್ತಾ, ಇದು ವಾಲ್ಟ್‌ಡಿಸ್ನಿ ಸಿನಿಮಾ ಶೈಲಿಯಲ್ಲಿ ನಿರ್ಮಿಸಿದ ಹಾರರ್ ಫ್ಯಾಂಟಸಿ ಚಿತ್ರ. ಅಂತಹ ಚಿತ್ರಗಳನ್ನು ನಾವು ಇಲ್ಲೂ ಸಹ ಮಾಡಬಹುದು ಎಂದು ತೋರಿಸಿದ್ದೇವೆ. ಪ್ರಭಾಸ್ ನಿರ್ದೇಶಕರ ನಟ. ಅವರು ಒಂದು ಕಥೆ ಒಪ್ಪಿಕೊಂಡರೆ, ತಮ್ಮನ್ನು ನಿರ್ದೇಶಕರಿಗೆ ಒಪ್ಪಿಸಿಕೊಳ್ಳುತ್ತಾರೆ. ನಾವು ಏನು ಬರೆದಿರುತ್ತೇವೋ, ಅದಕ್ಕೆ ಪೂರಕವಾಗಿ ನಟಿಸುತ್ತಾರೆ. ಒಬ್ಬ ಅಭಿಮಾನಿ ತನ್ನ ಮೆಚ್ಚಿನ ನಟನನ್ನು ಹೇಗೆ ತೋರಿಸುತ್ತಾನೋ, ಅದೇ ರೀತಿ ಈ ಚಿತ್ರ ಇರುತ್ತದೆ. ಹಾರರ್, ಕಾಮಿಡಿ ಚಿತ್ರಗಳು ವಾರಕ್ಕೊಂದು ಬರುತ್ತಿವೆ. ಅದನ್ನೆಲ್ಲಾ ಮೀರಿ, ಪ್ರಭಾಸ್ ಲೆವೆಲ್‌ಗೆ ಏನು ಮಾಡಬಹುದೆಂದು ಯೋಚಿಸಿ ಈ ಚಿತ್ರ ನಿರೂಪಿಸಿದ್ದೇನೆ. ಬಾಲಿವುಡ್ ನಟ ಸಂಜಯ್‌ದತ್ ಅವರು ಖಳನಾಯಕನಾಗಿ ನಟಿಸಿದ್ದಾರೆ ಎಂದರು.

ನಿರ್ಮಾಪಕ ಟಿ.ಜಿ.ವಿಶ್ವಪ್ರಸಾದ್ ಮಾತನಾಡುತ್ತಾ, ಈ ಸೆಟ್ ನಿರ್ಮಾಣಕ್ಕೆ ಎರಡು ತಿಂಗಳವರೆಗೆ ನೂರಾರು ಕಾರ್ಮಿಕರು ಕೆಲಸ ಮಾಡಿದ್ದಾರೆ, ಸುಮಾರು 120 ದಿನಗಳ ಕಾಲ ಚಿತ್ರದ ಕ್ಲೈಮ್ಯಾಕ್ಸ್ ಭಾಗವನ್ನು ಇಲ್ಲೇ ಶೂಟ್ ಮಾಡಿದ್ದೇವೆ. 40 ನಿಮಿಷಗಳ ಗ್ರಾಫಿಕ್ಸ್ ಚಿತ್ರದ ಹೈಲೈಟ್. ಅದಕ್ಕೆ 300 ದಿನಗಳವರೆಗೆ ವರ್ಕ್ ಮಾಡಿದ್ದೇವೆ ಎಂದರು. ಪ್ರಭಾಸ್ ಜೊತೆ ನಾಯಕಿಯರಾಗಿ ನಿಧಿ ಅಗರವಾಲ್, ಮಾಳವಿಕಾ ಮೋಹನ್ ಜತೆಗೆ ರಿದ್ಧಿಕುಮಾರ್, ಯೋಗಿಬಾಬು ಕೂಡ ನಟಿಸಿದ್ದಾರೆ.

ಹೈದರ್ ಅಲಿ ರಸ್ತೆ ಮೀಡಿಯನ್‌ನಲ್ಲಿ 100 ಗಿಡ ನೆಡುವ ಭರವಸೆ

ಅಗಲೀಕರಣ ಕಾಮಗಾರಿಗೆ ಅವಕಾಶ ಕೊಟ್ಟ ಪರಿಸರ ಪ್ರೇಮಿಗಳು



ಮೈಸೂರು, ಜೂ.26(ಆರ್‌ಕೆ)– ಮೈಸೂರಿನ ನಜರ್‌ಬಾದ್‌ನ ಹೈದರ್ ಅಲಿ ರಸ್ತೆಯಲ್ಲಿ 100 ಹಾಗೂ ಬೇರೆ ಕಡೆ 300 ಸೇರಿದಂತೆ ಒಟ್ಟು 400 ಗಿಡಗಳನ್ನು ನೆಟ್ಟು ಬೆಳೆಸುತ್ತೇವೆ ಎಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಲಿಖಿತ ಭರವಸೆ ನೀಡಿದ ಹಿನ್ನೆಲೆಯಲ್ಲಿ 'ಪರಿಸರಕ್ಕಾಗಿ ನಾವು' ಧ್ಯೇಯದ ಪರಿಸರ ಕ್ರಿಯಾ ಸಮಿತಿ ಸದಸ್ಯರು ಸದರಿ ರಸ್ತೆ ಅಗಲೀಕರಣ ಕಾಮಗಾರಿಗೆ ಅವಕಾಶ ನೀಡಿದ್ದಾರೆ.

ನಜರ್‌ಬಾದಿನ ಕೆಪಿಎ ಬಳಿ ಎಸ್ಪಿ ಕಚೇರಿ ಸರ್ಕಲ್‌ವರೆಗೆ ಹೈದರ್ ಅಲಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗಾಗಿ ಇಕ್ಕೆಲಗಳಲ್ಲಿದ್ದ 40 ಮರಗಳನ್ನು ರಾತ್ರೋರಾತ್ರಿ ಕಡಿದುರುಳಿಸಿದ್ದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಪರಿಸರವಾದಿಗಳು, ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದರು.

ಒಂದು ಮರಕ್ಕೆ 10 ಸಸಿಯಂತೆ 40 ಮರಕ್ಕೆ 400 ಗಿಡ ನೆಟ್ಟು ಬೆಳೆಸಬೇಕೆಂಬ ಕಾನೂನಿನನ್ವಯ ಮೈಸೂರು ಮಹಾನಗರ ಪಾಲಿಕೆಯು 400 ಗಿಡ ನೆಡಲು ಬೇಕಾದ ಹಣವನ್ನು ಅರಣ್ಯ ಇಲಾಖೆಗೆ ಪಾವತಿಸಿ ಇಂದಿನಿಂದ ರಸ್ತೆ ಅಗಲೀಕರಣ ಕಾಮಗಾರಿ ಆರಂಭಿಸಿದ್ದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ), ಪರಿಸರಕ್ಕಾಗಿ ನಾವು, ಕ್ಲೀನ್ ಮೈಸೂರು ಫೌಂಡೇಷನ್, ಪರಿಸರ ಕ್ರಿಯಾ ಸಮಿತಿ ಸದಸ್ಯರು, ರಸ್ತೆಯ ಲ್ಲಿದ್ದ ಮರಗಳನ್ನು ನಿರ್ದಯವಾಗಿ ಕಡಿದಿರುವುದಲ್ಲದೇ ಗಿಡಗಳನ್ನು ನೆಟ್ಟು ಬೆಳೆಸದೇ ಕಾಮಗಾರಿ ಆರಂಭಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ವಾಹನ ದಟ್ಟಣೆ ಇರುವ, ಅಪಘಾತಗಳು ಸಂಭವಿಸುವ ರಸ್ತೆಗಳು ಮೈಸೂರಲ್ಲಿದ್ದರೂ, ಅಲ್ಲಿ ಅಭಿವೃದ್ಧಿ ಮಾಡದೇ ಸರಾಗವಾಗಿ ವಾಹನಗಳು ಸಂಚರಿಸುತ್ತಿರುವ ಹೈದರ್ ಅಲಿ ರಸ್ತೆಯಲ್ಲಿದ್ದ ಮರಗಳನ್ನು ವಿಸ್ತರಣೆ ನೆಪದಲ್ಲಿ ಕಡಿದುರುಳಿಸಿರುವುದು ಅಮಾನವೀಯ ಮತ್ತು ಅವೈಜ್ಞಾನಿಕ ಕ್ರಮ ಎಂದು ಅವರು ಆರೋಪಿಸಿದರು.

ಮೊದಲು 1:10ರಂತೆ ಗಿಡ ನೆಟ್ಟು ನಂತರ ರಸ್ತೆ ಅಗಲೀಕರಣ ಆರಂಭಿಸಿ ಎಂದು ಪಟ್ಟು ಹಿಡಿದ ಪರಿಸರ ಪ್ರೇಮಿಗಳು, ಕೆಲಸ ಮಾಡುತ್ತಿದ್ದ ಜೆಸಿಬಿ ಮುಂದೆ ನಿಂತು ಪ್ರತಿಭಟನೆ ನಡೆಸಿ ಕಾಮಗಾರಿಗೆ ತಡೆಯೊಡ್ಡಿದ್ದರು. ಈ ಸಂದರ್ಭ ಮೈಸೂರು ಮಹಾನಗರ ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆರ್.ಜೆ.ರಾಜೀವ್‌ನಾಥ್ ಅವರು ಪ್ರತಿಭಟನಾಕಾರರಿಗೆ ಸಮಜಾಯಿಷಿ ಹೇಳಲು ಪ್ರಯತ್ನಿಸಿದರಾದರೂ, 'ನೀವು ಗಿಡ ನೆಡುವವರೆಗೂ, ಕೆಲಸ ಮಾಡಿಸಬಾರದು' ಎಂದು ತಾಕೀತು ಮಾಡಿದರು.

ಪರಿಸ್ಥಿತಿ ಬಿಗಡಾಯಿಸುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ, ಪರಿಸರವಾದಿಗಳ ಅಣತಿಯಂತೆ ಹೈದರ್ ಅಲಿ ರಸ್ತೆಯ ಮೀಡಿಯನ್‌ನಲ್ಲಿ 100 ಗಿಡಗಳು ಹಾಗೂ ಬೇರೆ ಬೇರೆ ಕಡೆ ಉಳಿದ 300 ಗಿಡಗಳನ್ನು ನೆಟ್ಟು ಬೆಳೆಸುತ್ತೇವೆ ಎಂದು ಲಿಖಿತ ರೂಪದ ಭರವಸೆ ನೀಡಿದರು. ತದ ನಂತರ ಪ್ರತಿಭಟನೆ ಕೈಬಿಟ್ಟ ಪರಿಸರವಾದಿಗಳು, ರಸ್ತೆ ಕಾಮಗಾರಿ ನಡೆಸಲು ಅನುವು ಮಾಡಿಕೊಟ್ಟರು.

ಪರಿಸರ ಕ್ರಿಯಾ ಸಮಿತಿ ರಾಜ್ಯಾಧ್ಯಕ್ಷ ಎ.ಟಿ.ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಪಿಯುಸಿಎಲ್ ಜಿಲ್ಲಾ ಘಟಕದ ಅಧ್ಯಕ್ಷ ಕಮಲ್ ಗೋಪಿನಾಥ್, ಕ್ಲೀನ್ ಮೈಸೂರು ಫೌಂಡೇಷನ್ ಸದಸ್ಯರಾದ ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಮೈಸೂರು ಗ್ರಾಹಕರ ಪರಿಷತ್ತಿನ ಭಾಮಿ ವಿ.ಶೆಣೈ, ಭಾನು ಪ್ರಕಾಶ್, ಮನ್ಸೂರ್ ಅಹಮದ್, ಪರಿಸರ ಬಳಗದ ಸದಸ್ಯರಾದ ಭಾಗ್ಯ ಶಂಕರ್, ಇಂದಿರಾ, ಸುಶೀಲಾ, ಸುಗುಣ, ಗಾಯಿತ್ರಿ, ಅರುಣ್, ಗುರುಸ್ವಾಮಿ, ಸಿಂಧುವಳ್ಳಿ ಅಕ್ಬರ್, ಪ್ರಸನ್ನ ಹಾಗೂ ಇತರರು ಈ ಸಂದರ್ಭ ಪಾಲ್ಗೊಂಡಿದ್ದರು.

ಕುಕ್ಕರಹಳ್ಳಿ ಕೆರೆಗೆ ಕಲುಷಿತ ನೀರು ; ತಡೆಗಟ್ಟಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಾಲಿಕೆ ಆಯುಕ್ತರಿಗೆ ಮತ್ತೆ ಪತ್ರ


ಮೈಸೂರು,ಜೂ.26(ಪಿಎಂ)– ನಗರದ ಕುಕ್ಕರಹಳ್ಳಿ ಕೆರೆಗೆ ಕಲುಷಿತ ನೀರು ಸೇರುತ್ತಿರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೈಸೂರು ವಲಯ ಕಚೇರಿ ಪರಿಸರ ಅಧಿಕಾರಿಗಳು ಪತ್ರ ಬರೆದಿದ್ದಾರೆ.

ಮೈಸೂರು ಗ್ರಾಹಕರ ಪರಿಷತ್‌ನವರು ಏ.15ರಂದು ದೂರವಾಣಿ ಕರೆ ಮೂಲಕ ಕುಕ್ಕರಹಳ್ಳಿ ಕೆರೆಗೆ ಕಲುಷಿತ ನೀರು ಸೇರುತ್ತಿದ್ದು, ಇದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಂಡಳಿಗೆ ತಿಳಿಸಿದ್ದರು. ಅದರನ್ವಯ ಮಂಡಳಿ ಅಧಿಕಾರಿಗಳು ಏ.16ರಂದು ಕೆರೆಯ ಪರಿಶೀಲನೆ ನಡೆಸಿದ್ದು, ಏ.19ರಂದು ಕುಕ್ಕರಹಳ್ಳಿ ಕೆರೆಯ ನೀರಿನ ಮಾದರಿಯನ್ನು ಮಂಡಳಿ ಅಧಿಕಾರಿಗಳು ಸಂಗ್ರಹಿಸಿದ್ದರು. ಬಳಿಕ ಏ.23 ಹಾಗೂ ಜೂ.3ರಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಮಂಡಳಿಯಿಂದ ಪತ್ರ ಮುಖೇನ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿತ್ತು.



ಜೂ.17ರಂದು ಮೈಸೂರು ಗ್ರಾಹಕರ ಪರಿಷತ್ ಸದಸ್ಯರೊಂದಿಗೆ ನಡೆದ ಚರ್ಚೆ ವೇಳೆಯೂ ಕುಕ್ಕರಹಳ್ಳಿ ಕೆರೆಗೆ ಕಲುಷಿತ ನೀರು ಸೇರದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಕೇಳಿ ಬಂದಿತ್ತು. ಹಾಗಾಗಿ ಕಲುಷಿತ ನೀರು ಕುಕ್ಕರಹಳ್ಳಿ ಕೆರೆಗೆ ಸೇರದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪತ್ರದಲ್ಲಿ ಪಾಲಿಕೆ ಆಯುಕ್ತರನ್ನು ಕೋರಲಾಗಿದೆ.


ನಾಡಪ್ರಭು ಕೆಂಪೇಗೌಡರ
516ನೇ ಜಯಂತೋತ್ಸವದ ಶುಭಾಶಯಗಳು
ದಿನಾಂಕ 27-06-2025 ಬೆಳಗ್ಗೆ 9 ಗಂಟೆಗೆ
ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಬೃಹತ್
ಮೆರವಣಿಗೆಯೊಂದಿಗೆ ಹೊರಟು ಮಧ್ಯಾಹ್ನ ಕಲಾಮಂದಿರದಲ್ಲಿ
ಸಭಾ ಕಾರ್ಯಕ್ರಮ
ನೀವೂ ಬನ್ನಿ, ನಿಮ್ಮವರನ್ನು ಕರೆತನ್ನಿ
ಕೆ.ವಿ ಶ್ರೀಧರ್
ಸಿ.ಜಿ ಗಂಗಾಧರ್
ಎಂ.ಬಿ ಮಂಜೇಗೌಡ
ಪಿ ಪ್ರಶಾಂತ್ ಗೌಡ
ಅಧ್ಯಕ್ಷರು, 516ನೇ ಕೆಂಪೇಗೌಡ ಜಯಂತೋತ್ಸವ ಸಮಿತಿ
ಅಲತ್ತೂರು ಜಯರಾಮ್ ಗೌರವ ಅಧ್ಯಕ್ಷರು
ಮರಿಸ್ವಾಮಿ.ಸಿ ಅಧ್ಯಕ್ಷರು
ರವಿಕುಮಾರ್.ಆರ್ ಉಪಾಧ್ಯಕ್ಷರು
ಬಿ.ಸಿ. ಮಹೇಶ್ ಉಪಾಧ್ಯಕ್ಷರು
ಚೇತನ್.ಎಂ.ಈ ಪ್ರಧಾನ ಕಾರ್ಯದರ್ಶಿ
ಲೋಕೇಶ್.ಆರ್ ಖಜಾಂಚಿ
ಜಿ ಮಂಜು
ಎಂ ಶಿವಕುಮಾರ್
ಎನ್ ಪ್ರಕಾಶ್
ಒಂಟಿಕೊಪ್ಪಲ್ ಗುರುರಾಜ್
ಪ್ರಸನ್ನ ಎನ್ ಲಕ್ಷ್ಮಣ್
ಜಿ ಕುಮಾರ್‌ಗೌಡ
ಸುಶೀಲಾ ನಂಜಪ್ಪ
ಎ ರವಿ
ಬಿ.ಇ ಗಿರೀಶ್ ಗೌಡ
ಬಿ.ಪಿ ಬೋರೆಗೌಡ
ಎಸ್ ಉಮೇಶ
ಕೆ.ಪಿ ನಾಗಣ್ಣ
ಗೋಪಾಲ್
ಮಿರ್ಲೆ ಶ್ರೀನಿವಾಸಗೌಡ ಎಂ.ಕೆ
ಹೆಚ್.ಎನ್ ಸುಧೀರ್
ಹೆಚ್.ಕೆ ನಾಗಣ್ಣ
ಪಿ.ಹೆಚ್ ರಾಜು
ಎ ಕುಮಾರ್
ಟಿ.ಎನ್ ಸಂತೋಷ್ ಕುಮಾರ್
9663725000, 0821-4054824
ಶುಭಕೋರುವವರು:ಒಕ್ಕಲಿಗರ ಸಂಘ (ರಿ)ಮೈಸೂರು ಜಿಲ್ಲೆ (ಚಾಮರಾಜನಗರ ಜಿಲ್ಲೆ ಒಳಗೊಂಡಂತೆ) ಹಾಗೂ ರಾಜ್ಯ ಒಕ್ಕಲಿಗರ ಸಂಘ


516ನೇ ನಾಡಪ್ರಭು ಕೆಂಪೇಗೌಡರ ಜಯಂತೋತ್ಸವ ಆಚರಣೆ ಸಮಿತಿ, ಮೈಸೂರು
ನಾಡಪ್ರಭು
ಶ್ರೀ ಕೆಂಪೇಗೌಡರ
516ನೇ ಜಯಂತೋತ್ಸವ ಕಾರ್ಯಕ್ರಮ 2025
ದಿನಾಂಕ :
27-06-2025ನೇ
ಶುಕ್ರವಾರ
ಬೆಳಗ್ಗೆ 9-00 ಗಂಟೆಗೆ
ಸ್ಥಳ : ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಪ್ರಾರಂಭ
ವೇದಿಕೆ ಕಾರ್ಯಕ್ರಮ ಕಲಾಮಂದಿರ 12:00 ಗಂಟೆ
ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ
ನೀವು ಬನ್ನಿ ನಿಮ್ಮವರನ್ನು ಕರೆತನ್ನಿ
ಶುಭ ಕೋರುವವರು :
ಶ್ರೀ ಪಿ. ಪ್ರಶಾಂತ್ ಗೌಡ
ಅಧ್ಯಕ್ಷರು :
ನಾಡಪ್ರಭು ಕೆಂಪೇಗೌಡ
ಜಯಂತೋತ್ಸವ ಆಚರಣೆ ಸಮಿತಿ ಮೈಸೂರು


ನಾಡಪ್ರಭು
ಶ್ರೀ ಕೆಂಪೇಗೌಡರ
516ನೇ ಜಯಂತ್ಯೋತ್ಸವ
27ನೇ ಜೂನ್ ಶುಕ್ರವಾರ, ಮೆರವಣಿಗೆ (ಚಾಲನೆ): ಬೆಳಗ್ಗೆ 9.30 ಗಂಟೆಗೆ, ಕೋಟೆ ಆಂಜನೇಯಸ್ವಾಮಿ ದೇವಸ್ಥಾನ
ಸರ್ವರಿಗೂ ಸುಸ್ವಾಗತ
ಕವೀಶ್‌ಗೌಡ
ಬಿ.ಜೆ.ಪಿ. ಮುಖಂಡರು
ಬೀಡನಹಳ್ಳಿ ಸತೀಶ್‌ಗೌಡ
ಅಧ್ಯಕ್ಷರು
ನಮ್ಮೂರು-ನಮ್ಮೋರು ಸಮಾಜ ಸೇವಾ ಟ್ರಸ್ಟ್
ಚೇತನ್ ಎಂ.ಇ.
ಪ್ರಧಾನ ಕಾರ್ಯದರ್ಶಿ
ಮೈಸೂರು-ಚಾಮರಾಜನಗರ ಒಕ್ಕಲಿಗರ ಸಂಘ (ರಿ.)
ಚೇತನ್‌ಗೌಡ
ಹರ್ಷಗೌಡ
@bhi design: 97407 97701

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಜೂನ್ 27 ಶುಕ್ರವಾರ 2025

ಇರಾನ್-ಇಸ್ರೇಲ್ ಯುದ್ಧದಿಂದ ಭಾರತದ ಡ್ರೈ ಫ್ರೂಟ್ಸ್ ಮಾರುಕಟ್ಟೆಯಲ್ಲಿ ಏರು-ಪೇರು

ಇರಾನ್‌ನಿಂದ ಆಮದಾಗುವ ಡ್ರೈ ಫ್ರೂಟ್ಸ್ ಬೆಲೆಯಲ್ಲಿ ಭಾರಿ ಹೆಚ್ಚಳ

● ಬಾಪುಲಿಂಗರಾಜ್ ಅರಸ್

ಮೈಸೂರು, ಜೂ.26-ಇಸ್ರೇಲ್ ಮತ್ತು ಇರಾನ್ ಯುದ್ಧದಿಂದ ಪೆಟ್ರೋಲ್, ಡೀಸೆಲ್ ಹಾಗೂ ಡ್ರೈಫ್ರೂಟ್ಸ್‌ಗಳ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಇನ್ನೂ ಹೆಚ್ಚಳವಾಗಿಲ್ಲ. ಆದರೆ ಇರಾನ್‌ನಿಂದ ಭಾರತಕ್ಕೆ ಬರುತ್ತಿದ್ದ ಡ್ರೈ ಫ್ರೂಟ್ಸ್‌ನಲ್ಲಿ ವ್ಯತ್ಯಯವಾಗಿ ದರ ಏರಿಕೆಯಾಗಿದ್ದು, ಮೈಸೂರಿನಲ್ಲಿ ಶೇಕಡ 30ರಷ್ಟು ಬೆಲೆ ಹೆಚ್ಚಳವಾಗಿದೆ. ಸ್ವೀಟ್ಸ್‌ಗಳಲ್ಲಿ ಡ್ರೈ ಫ್ರೂಟ್ಸ್ ಇದ್ದರೆ ಬಲು ರುಚಿ ಸ್ವಾದಿಷ್ಟವೂ ಹೌದು. ಆದರೆ ಈಗ ಡ್ರೈಫ್ರೂಟ್ಸ್ ಬೆಲೆ ದುಬಾರಿಯಾಗಿರುವ ಕಾರಣ ಸಿಹಿ ತಿಂಡಿಗಳ ಬೆಲೆಯೂ ಹೆಚ್ಚಳವಾಗುವ ಸಾಧ್ಯತೆ ಇದೆ.

ಇಸ್ರೇಲ್ ಮತ್ತು ಇರಾನ್ ಪರಸ್ಪರ ಪ್ರಮುಖ ನಗರಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ದಾಳಿಗಿಳಿದಿದ್ದವು. ಈಗ ತಾತ್ಕಾಲಿಕವಾಗಿ ಯುದ್ಧ ವಿರಾಮ ಘೋಷಣೆಯಾಗಿದ್ದರೂ ಅಲ್ಲಿನ ಸ್ಥಿತಿ-ಗತಿ ಸುಧಾರಿಸಲು ಬಹಳ ದಿನಗಳೇ ಬೇಕಿದೆ. ಹಾಗಾಗಿ ಡ್ರೈ ಫ್ರೂಟ್ಸ್‌ಗಳು ಭಾರತಕ್ಕೆ ಸಮರ್ಪಕವಾಗಿ ಸರಬರಾಜಾಗುವುದು ತಡವಾಗಬಹುದು.

ವಿಶ್ವದ ದೊಡ್ಡಣ್ಣ ಅಮೇರಿಕಾ, ಇರಾನ್‌ನ ಪರಮಾಣು ಸ್ಥಾವರಗಳನ್ನು ನಾಶಪಡಿಸಿದೆ. ಇದಕ್ಕೆ ಪ್ರತಿಯಾಗಿ ಅಮೇರಿಕಾದ ವಿರುದ್ಧ ಸೇಡು ತೀರಿಸಿಕೊಳ್ಳುತ್ತಿರುವ ಇರಾನ್, ಕತಾರ್‌ನಲ್ಲಿರುವ ಅಮೇರಿಕಾದ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಮಿಸೈಲ್ ದಾಳಿ ಮಾಡಿದೆ. ಕಳೆದ ಎರಡು ದಿನಗಳಿಂದ ಇರಾನ್, ಅಮೇರಿಕಾ ವಾಯುನೆಲೆಗಳ ಮೇಲೆ ದಾಳಿ ಮಾಡಿತ್ತು.

ಇದರಿಂದ ಇರಾನ್ ಜನರು ವ್ಯಾಪಾರ ವಹಿವಾಟು ಇರಲಿ, ತಮ್ಮ ಪ್ರಾಣ ಉಳಿಸಿಕೊಳ್ಳಲು ಪರಿತಪಿಸುತ್ತಿದ್ದಾರೆ. ರಾತ್ರಿ ವೇಳೆ ಇಸ್ರೇಲ್ ನಡೆಸುವ ಕ್ಷಿಪಣಿ ದಾಳಿಯಿಂದ ಪಾರಾಗಲು ಇರಾನ್ ಜನರು ಬಂಕರ್ ಹಾಗೂ ಸುರಂಗದಲ್ಲಿರುವ ಮೆಟ್ರೋ ಸ್ಟೇಷನ್‌ನಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಯುದ್ಧ ಕಾರಣದಿಂದ ಇರಾನ್‌ನಲ್ಲಿ ಆಮದು ಮತ್ತು ರಫ್ತು ಸಂಪೂರ್ಣ ಸ್ಥಗಿತವಾಗಿದೆ. ಇದರ ದೂರಗಾಮಿ ಪರಿಣಾಮ ಅರಿತಿರುವ ಭಾರತ ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಂಡು ಸ್ಟಾಕ್ ಮಾಡಿಕೊಳ್ಳುತ್ತಿದೆ. ಇರಾನ್‌ನಿಂದ ತೈಲ ಬರದಿದ್ದರೆ ಪರ್ಯಾಯವಾಗಿ ಬೇರೆ ದೇಶದಿಂದ ತೈಲ ಆಮದು ಮಾಡಿಕೊಳ್ಳಬಹುದು. ಆದರೆ ಡ್ರೈಫ್ರೂಟ್ಸ್ ಆಮದು ಮಾಡಿಕೊಳ್ಳಲು ಪರ್ಯಾಯ ದೇಶವಿಲ್ಲ. ಇದ್ದರೂ ಅದರ ಸಂಖ್ಯೆ ವಿರಳ.

ಇದರಿಂದ ಭಾರತದ ಡ್ರೈಫ್ರೂಟ್ಸ್ ಮಾರುಕಟ್ಟೆ ಮೇಲೆ ಇರಾನ್ ಮತ್ತು ಇಸ್ರೇಲ್ ಯುದ್ಧ ಭಾರಿ ಪರಿಣಾಮ ಬೀರಿದೆ. ಯುದ್ಧ ಆರಂಭದಲ್ಲೇ ಇರಾನ್‌ನಿಂದ ಬರುತ್ತಿದ್ದ ಡ್ರೈಫ್ರೂಟ್ಸ್ ಬೆಲೆ ಭಾರಿ ಏರಿಕೆಯಾಗಿದ್ದು, ಮುಂದಿನ ದಿನದಲ್ಲಿ ಇದು ದುಪ್ಪಟ್ಟು ಆಗುವ ಸಾಧ್ಯತೆಯೂ ಇದೆ.

ಇರಾನ್‌ನಿಂದ ಗುಣಮಟ್ಟದ ಪಿಸ್ತಾ, ಮಾರ್ಮಾ ಬಾದಾಮ್, ಕಪ್ಪು ಖರ್ಜೂರ ಆಮದಾಗುತ್ತದೆ. ಈಗ ಇವುಗಳ ಬೆಲೆ ದುಪ್ಪಟ್ಟಾಗಿದೆ. ಸಫಾಬಿ ಕಪ್ಪು ಖರ್ಜೂರ ಕೆ.ಜಿ.ಗೆ 400ರಿಂದ 600 ರೂಪಾಯಿಗೆ ಹೆಚ್ಚಳವಾಗಿದ್ದರೆ, ಮೆಟ್ ಜೋಲ್ ಕಪ್ಪು ಖರ್ಜೂರ 800 ರಿಂದ 1,200 ರೂಪಾಯಿಗೆ ಏರಿಕೆಯಾಗಿದೆ. ಕಿಮಿಯಾ 200ರಿಂದ 280 ರೂ.ಗೆ ಹೆಚ್ಚಳ ಕಂಡಿದೆ. ಇರಾನ್‌ನಿಂದ ಬರುವ ಪಿಸ್ತಾ ಸಾಲ್ಟ್ 800ರಿಂದ 1,100 ರೂಪಾಯಿಗೆ ಏರಿಕೆಯಾದರೆ, ಪ್ಲೈನ್ ಪಿಸ್ತಾ 1,300 ರಿಂದ 1,600, ಮಾರ್ಮಾ ಬಾದಾಮ್ 2,100ರಿಂದ 2,800 ರೂಪಾಯಿಗೆ ಜಂಪ್ ಆಗಿದೆ.

ಈ ಮೊದಲು ಅಪ್ಘಾನಿಸ್ತಾನದಿಂದ ಅಂಜೂರ, ಕಪ್ಪು ದ್ರಾಕ್ಷಿ, ಒಣ ದ್ರಾಕ್ಷಿ, ಖರ್ಜೂರ ಸೇರಿದಂತೆ ಹಲವು ವಸ್ತುಗಳು ಪಾಕಿಸ್ತಾನದ ವಾಘಾ ಗಡಿ ಮೂಲಕ ಭಾರತಕ್ಕೆ ಬರುತ್ತಿತ್ತು. ಆದರೆ ಭಾರತ ಮತ್ತು ಪಾಕಿಸ್ತಾನದ ಯುದ್ಧದ ನಂತರ ಅಪ್ಘಾನಿಸ್ತಾನದಿಂದ ಭಾರತಕ್ಕೆ ಬರುತ್ತಿದ್ದ ಆಮದು ಮತ್ತು ರಫ್ತು ಸ್ಥಗಿತವಾಯಿತು.

ಹಾಗೆಂದ ಮಾತ್ರಕ್ಕೆ ವ್ಯಾಪಾರ ವಹಿವಾಟು ಸ್ಥಗಿತ ಮಾಡಲು ಸಾಧ್ಯವಾಗುವುದಿಲ್ಲ. ಆದ ಕಾರಣ ಅಪ್ಘಾನಿಸ್ತಾನ ಇರಾನ್‌ನ ಚಾಬಹಾರ್ ಬಂದರು ಮೂಲಕ ಭಾರತಕ್ಕೆ ಡ್ರೈಫ್ರೂಟ್ಸ್ ಸೇರಿದಂತೆ ಇತರೆ ವಸ್ತುಗಳನ್ನು ಆಮದು ಮತ್ತು ರಫ್ತು ಮಾಡುತ್ತಿತ್ತು. ಸಾಗಾಣಿಕೆ ವೆಚ್ಚ ಹೆಚ್ಚಾದ ಕಾರಣ ಅಪ್ಘಾನಿಸ್ತಾನದಿಂದ ಬರುತ್ತಿದ್ದ ಡ್ರೈಫ್ರೂಟ್ಸ್ ಬೆಲೆ ಶೇಕಡ 20ರಷ್ಟು ಹೆಚ್ಚಳವಾಯಿತು. ಆದರೆ ಈಗ ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಪರಿಣಾಮ ಅಪ್ಘಾನಿಸ್ತಾನದ ಡ್ರೈಫ್ರೂಟ್ಸ್ ಬೆಲೆ ಈಗ ಮತ್ತೆ ಶೇಕಡ 5ರಿಂದ 10ರಷ್ಟು ಏರಿಕೆಯಾಗಿದೆ.

ಅಪ್ಘಾನಿಸ್ತಾನದಿಂದ ಬರುವ ಅಂಜೂರ ಕೆ.ಜಿ.ಗೆ 900 ರಿಂದ 1,400 ರೂಪಾಯಿಗೆ ಹೆಚ್ಚಳವಾಗಿದೆ. ಕಪ್ಪು ದ್ರಾಕ್ಷಿ 350 ರಿಂದ 500 ರೂಪಾಯಿಗೆ, ಒಣ ಖರ್ಜೂರ 160ರಿಂದ 240 ರೂಪಾಯಿಗೆ ಏರಿಕೆ ಕಂಡಿದೆ.



- ಮೈಸೂರಲ್ಲಿ ಡ್ರೈಫ್ರೂಟ್ಸ್ ಬೆಲೆ ಶೇ.30ರಷ್ಟು ಏರಿಕೆ
- ಯುದ್ಧ ಮುಂದುವರೆದರೆ ಮತ್ತಷ್ಟು ದುಬಾರಿ
- ಇರಾನ್ ಚಾಬಹಾರ್ ಬಂದರಿನಿಂದ ಅಫ್ಘಾನಿಸ್ತಾನದಿಂದ ರಫ್ತು-ಆಮದು ಸ್ಥಗಿತ
- ಅಫ್ಘಾನಿಸ್ತಾನದ ಡ್ರೈಫ್ರೂಟ್ಸ್ ಬೆಲೆ ದುಬಾರಿ

ಯುದ್ಧ ಮುಂದುವರೆದರೆ ಹೋಟೆಲ್ ಸಿಹಿ ತಿಂಡಿ, ಸ್ವೀಟ್ಸ್ ಕೂಡ ದುಬಾರಿ



"ಹೋಟೆಲ್, ಸ್ವೀಟ್ಸ್ ಅಂಗಡಿ, ಕ್ಯಾಟರಿಂಗ್ ಮಾಲೀಕರು ಡ್ರೈ ಫ್ರೂಟ್ಸ್‌ನ್ನು ಸ್ಟಾಕ್ ಇಟ್ಟುಕೊಂಡಿದ್ದಾರೆ. ಇದರಿಂದ ಅವರಿಗೆ ಅಷ್ಟಾಗಿ ಬೆಲೆಯ ಬಿಸಿ ತಟ್ಟಿಲ್ಲ. ಇರುವ ಸ್ಟಾಕ್ ಖಾಲಿಯಾದರೆ ಮಾರುಕಟ್ಟೆಯಲ್ಲಿ ಖರೀದಿ ಮಾಡಬೇಕಾಗುತ್ತದೆ. ಆಗ ದುಬಾರಿಯಾಗಿರುವ ಡ್ರೈ ಫ್ರೂಟ್ಸ್ ಖರೀದಿ ಮಾಡಿದರೆ ಸಹಜವಾಗಿಯೇ ಹೋಟೆಲ್‌ನಲ್ಲಿ ತಯಾರಿಸುವ ಸಿಹಿ ಆಹಾರ, ಸ್ವೀಟ್ಸ್ ಅಂಗಡಿಗಳ ಸಿಹಿ ತಿಂಡಿಗಳ ಬೆಲೆ ಹೆಚ್ಚಳವಾಗಲಿದೆ. ಮದುವೆ ಸೇರಿದಂತೆ ಹಲವು ಸಮಾರಂಭಗಳಿಗೆ ಕ್ಯಾಟರಿಂಗ್ ಮಾಡುವವರು ಕೂಡ ಬೆಲೆ ಹೆಚ್ಚಳ ಮಾಡುತ್ತಾರೆ. ಇರಾನ್ ಮತ್ತು ಇಸ್ರೇಲ್ ಯುದ್ಧದಿಂದ ಕಚ್ಚಾ ತೈಲದ ಬೆಲೆ ದುಬಾರಿಯಾದರೆ ಹೋಟೆಲ್ ತಿಂಡಿ ತಿನಿಸು ಸೇರಿದಂತೆ ಎಲ್ಲಾ ರೀತಿಯ ಬೆಲೆ ಭಾರಿ ಏರಿಕೆಯಾಗುತ್ತದೆ. ಇದು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಮೇಲೆ ಭಾರಿ ಹೊಡೆತ ನೀಡಲಿದೆ. ಇದರ ಪರಿಣಾಮ ಗ್ರಾಹಕರಿಗೆ ಹೊರೆಯಾಗಲಿದ್ದು, ಜನ ಸಾಮಾನ್ಯರ ಜೀವನ ದುಸ್ತರವಾಗಲಿದೆ. **-ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ**

ಇರಾನ್-ಇಸ್ರೇಲ್ ಯುದ್ಧದಿಂದ ವಿಶ್ವದಲ್ಲಿ ಭಾರತದ ಒಣ ದ್ರಾಕ್ಷಿಗೆ ಭಾರಿ ಬೇಡಿಕೆ

ಇರಾನ್ ಮತ್ತು ಇಸ್ರೇಲ್ ಯುದ್ಧದ ಪರಿಣಾಮ ಭಾರತದ ಒಣ ದ್ರಾಕ್ಷಿ ಬೆಳೆಗಾರರಿಗೆ ಬಂಪರ್ ಲಾಭವಾಗಿದೆ. ಕರ್ನಾಟಕದ ಬಿಜಾಪುರ ಮತ್ತು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಅತೀ ಹೆಚ್ಚಾಗಿ ಒಳ ದ್ರಾಕ್ಷಿ ಬೆಳೆಯಲಾಗುತ್ತದೆ. ಈಗ ಇರಾನ್‌ನಿಂದ ವಿಶ್ವದ ಹಲವು ರಾಷ್ಟ್ರಗಳಿಗೆ ಡ್ರೈ ಫ್ರೂಟ್ಸ್ ರಫ್ತು ಸ್ಥಗಿತವಾಗಿರುವ ಕಾರಣ ಭಾರತದ ಒಣ ದ್ರಾಕ್ಷಿಗೆ ಭಾರಿ ಬೇಡಿಕೆ ಬಂದಿದೆ. ಭಾರತದಲ್ಲಿ ಯಾವುದೇ ವಿವಾದ ಇಲ್ಲದ ಕಾರಣ ಬೇರೆ ರಾಷ್ಟ್ರಗಳಿಗೆ ಸುಲಭವಾಗಿ ರಫ್ತು ಮಾಡಬಹುದು. ಇದರಿಂದ ಇಲ್ಲಿನ ಒಣ ದ್ರಾಕ್ಷಿಗೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಬಾರೀ ಬೇಡಿಕೆ ಬಂದಿದೆ. ಬೇಡಿಕೆ ಹೆಚ್ಚಾದಂತೆ ಬೆಲೆ ದುಬಾರಿಯಾಗಲಿದ್ದು, ಭಾರತದ ಒಣ ದ್ರಾಕ್ಷಿ ಬೆಲೆ ಈ ಮೊದಲು ಕೆ.ಜಿ.ಗೆ 160 ರೂಪಾಯಿ ಇರುವುದು ಈಗ 400 ರೂಪಾಯಿಗೆ ಹೆಚ್ಚಳವಾಗಿದೆ. ಇದು ಭಾರತದ ಬೆಲೆಯಾದರೆ, ಇದನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಇದರ ಬೆಲೆ ಮತ್ತಷ್ಟು ಹೆಚ್ಚಾಗುತ್ತದೆ.

"ಡ್ರೈಫ್ರೂಟ್ಸ್ ಬೆಲೆ ದುಬಾರಿಯಾಗಿದ್ದು, ಸ್ವೀಟ್ಸ್‌ಗಳ ಬೆಲೆಯನ್ನು ಹೆಚ್ಚಳ ಮಾಡುವ ಅನಿವಾರ್ಯತೆ ಇದೆ. ಆದರೆ ಗ್ರಾಹಕರಿಗೆ ಹೊರೆಯಾಗಬಾರದೆಂಬ ಕಾರಣಕ್ಕೆ ಸದ್ಯಕ್ಕೆ ಬೆಲೆ ಹೆಚ್ಚಳ ಮಾಡುತ್ತಿಲ್ಲ. **-ಶಿವಕುಮಾರ್, ಮಾಲೀಕರು ಮಹಾಲಕ್ಷ್ಮಿ ಸ್ವೀಟ್ಸ್**

ಮೈಸೂರಿನ ಡ್ರೈಫ್ರೂಟ್ಸ್ ಮಾರುಕಟ್ಟೆಯಲ್ಲಿ ತಿಂಗಳಿಗೆ 60 ಲಕ್ಷ ವಹಿವಾಟು



"ಮೈಸೂರಿನ ಡ್ರೈಫ್ರೂಟ್ಸ್ ಮಾರುಕಟ್ಟೆಯಲ್ಲಿ ತಿಂಗಳಿಗೆ ಸುಮಾರು 60 ಲಕ್ಷ ರೂಪಾಯಿ ವಹಿವಾಟು ನಡೆಯಲಿದೆ. ಇರಾನ್‌ನಿಂದ ಡ್ರೈಫ್ರೂಟ್ಸ್ ಆಮದು ನಿಂತ ನಂತರ ಈಗಾಗಲೇ ಸ್ಟಾಕ್ ಆಗಿರುವುದನ್ನು ಮಾರಾಟ ಮಾಡಲಾಗುತ್ತಿದೆ. ಸ್ಟಾಕ್ ಕಡಿಮೆ ಆಗುತ್ತಿದ್ದಂತೆ ಬೆಲೆ ಕೂಡ ಮೇಲ್ಮುಖವಾಗಿ ಏರಿಕೆಯಾಗುತ್ತಾ ಹೋಗುತ್ತದೆ. ಮೈಸೂರಿನಲ್ಲಿ ಡ್ರೈಫ್ರೂಟ್ಸ್ ಅನ್ನು ಮಾತ್ರ ಮಾರಾಟ ಮಾಡುವ 30 ಅಂಗಡಿಗಳಿದ್ದು, ಇರಾನ್ ಮತ್ತು ಇಸ್ರೇಲ್ ಯುದ್ಧ ಇವರ ವ್ಯಾಪಾರ ವಹಿವಾಟಿನ ಮೇಲೆ ನೇರ ಪರಿಣಾಮ ಬೀರಿದೆ. ಡ್ರೈಫ್ರೂಟ್ಸ್ ಬೆಲೆ ದುಬಾರಿಯಾಗಿರುವ ಹಿನ್ನೆಲೆ ಗ್ರಾಹಕರು ಖರೀದಿಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದ್ದಾರೆ. 1 ಕೆ.ಜಿ. ಖರೀದಿ ಮಾಡುವವರು ಅರ್ಧ ಕೆ.ಜಿ.ಗೆ, ಕಾಲು ಕೆ.ಜಿ. ಖರೀದಿಸುವವರು ನೂರು ಗ್ರಾಂ ಖರೀದಿ ಮಾಡುತ್ತಿದ್ದಾರೆ. ಇದರಿಂದ ಮೈಸೂರಿನಲ್ಲಿ ಡ್ರೈಫ್ರೂಟ್ಸ್ ಖರೀದಿ ಶೇ.25ರಷ್ಟು ಕಡಿಮೆಯಾಗಿದೆ. ಡ್ರೈಫ್ರೂಟ್ಸ್ ಬೆಲೆ ದುಬಾರಿಯಾದರೆ ಇದರಿಂದ ತಯಾರಿಸುವ ಸಿಹಿ ತಿಂಡಿಗಳ ಬೆಲೆ ಕೂಡ ಏರಿಕೆಯಾಗಲಿದೆ. **-ಪಾಂಡುರಂಗ ಸತೀಶ್, ಮಾಲೀಕರು, ನಿಮಿಷಾಂಬ ಡ್ರೈ ಫ್ರೂಟ್ಸ್**

"ಡ್ರೈಫ್ರೂಟ್ಸ್ ಬೆಲೆ ಬಹಳ ಹೆಚ್ಚಳವಾಗಿದೆ. ಮುಂದೆ ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಡ್ರೈಫ್ರೂಟ್ಸ್‌ನಿಂದ ಮಾಡುವ ಸ್ವೀಟ್ಸ್‌ಗಳ ಬೆಲೆ ಹೆಚ್ಚಳ ಮಾಡುವುದು ಅನಿವಾರ್ಯವಾಗಲಿದೆ. ಆದರೆ ಈ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. **-ನೀರಜ್‌ಕುಮಾರ್, ಮಾಲೀಕರು ಬಾಂಬೆ ಟಿಫಾನಿಸ್.**

ಮೈಸೂರು ಕೇಂದ್ರ ಕಾರಾಗೃಹದಲ್ಲಿ ಪೊಲೀಸರಿಂದ ತಪಾಸಣೆ



ಮೈಸೂರು ಕೇಂದ್ರ ಕಾರಾಗೃಹದಲ್ಲಿ ನಗರ ಪೊಲೀಸರು ತಪಾಸಣೆ ನಡೆಸಿದರು.

ಮೈಸೂರು,ಜೂ.26(ಪಿಎಂ)- ಮೈಸೂರು ನಗರ ಪೊಲೀಸರಿಂದ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಬುಧವಾರ ಅನಿರೀಕ್ಷಿತ ತಪಾಸಣಾ ಕಾರ್ಯಾಚರಣೆ ನಡೆಯಿತು.

ನಗರದ ಪೊಲೀಸ್ ಆಯುಕ್ತರ ಸೂಚನೆ ಮೇರೆಗೆ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್, ಅಪರಾಧ- ಸಂಚಾರ ಡಿಸಿಪಿ ಸುಂದರ್‌ರಾಜ್ ನೇತೃತ್ವದಲ್ಲಿ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಅನಿರೀಕ್ಷಿತ ತಪಾಸಣೆ ನಡೆಸಲಾಯಿತು.

ಮೈಸೂರು ನಗರ ಕಮಾಂಡೊ ಪಡೆ, ಶ್ವಾನ ದಳ, ವಿಧ್ವಂಸಕ ಕೃತ್ಯ ತಪಾಸಣಾ ತಂಡ (ಎಎಸ್‌ಸಿ ಟೀಮ್), ಮಹಿಳಾ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸೇರಿದಂತೆ ನರಸಿಂಹರಾಜ ವಿಭಾಗದ ಎಸಿಪಿ ಮತ್ತು ಪೊಲೀಸ್ ನಿರೀಕ್ಷಕರು, ಸಿಸಿಬಿ ಘಟಕದ ಎಸಿಪಿ ಮತ್ತು ಪೊಲೀಸ್ ನಿರೀಕ್ಷಕರು ಮತ್ತು ಇತರೇ ಪೊಲೀಸ್ ಅಧಿಕಾರಿ, ಸಿಬ್ಬಂದಿ ತಪಾಸಣಾ ಕಾರ್ಯಾಚರಣೆ ನಡೆಸಿದರು.

ಮಾದಕ ವಸ್ತು ಮಾರಾಟ; ತೃತೀಯಲಿಂಗಿ ಬಂಧನ

ಮೈಸೂರು,ಜೂ.26(ಪಿಎಂ)- ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ತೃತೀಯಲಿಂಗಿಯನ್ನು ಬಂಧಿಸಿರುವ ಸಿಸಿಬಿ ಪೊಲೀಸರು, 4 ಗ್ರಾಂ 15 ಮಿಲಿ ತೂಕದ ಎಂಡಿಎಂಎ ಎಂಬ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ.

ಶಾಂತಿನಗರದ ಸೈಯ್ಯದ್ ನೂರುಲ್ಲಾ ಅಲಿಯಾಸ್ ಇಮ್ರಾನ್ ಅಲಿಯಾಸ್ ಲಕ್ಷ್ಮೀ (30) ಬಂಧಿತ ತೃತೀಯಲಿಂಗಿ. ಜೂ.22ರಂದು ಖಚಿತ ಮಾಹಿತಿ ಮೇರೆಗೆ ಶಾಂತಿನಗರದ 1ನೇ ಮೇನ್‌ನಲ್ಲಿ ಸದರಿ ತೃತೀಯಲಿಂಗಿ ವಾಸವಿದ್ದ ಮನೆ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ ಆರೋಪಿ ಧರಿಸಿದ್ದ ಚೂಡಿದಾರ್ ಟಾಪ್ ಬಲ ಎದೆಯ ಬಳಿ ಅಡಗಿಸಿಟ್ಟುಕೊಂಡಿದ್ದ ಮಾದಕ ವಸ್ತು ಪತ್ತೆಯಾಗಿದೆ. ಆರೋಪಿಗೆ ಸದರಿ ಮಾದಕ ವಸ್ತು ಪೂರೈಕೆ ಸಂಬಂಧ ತನಿಖೆ ಮುಂದುವರೆದಿದ್ದು, ಸಿಸಿಬಿ ಪೊಲೀಸರ ದೂರಿನ ಮೇರೆಗೆ ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜೂ.26- ಜೂನ್ 27ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯದ ನಿಮಿತ್ತ ಜನತಾನಗರ, ಬೋಗಾದಿ 2ನೇ ಹಂತ North & South, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯ ನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ. ಆರ್.ಐ ಲೇಔಟ್, ಯೂನಿವರ್ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.


ಅಂಬೇಡ್ಕರ್ ಬೃಹತ್ ಪ್ರತಿಮೆ ಸ್ಥಾಪನೆಗೆ ಸಂತಸ

ಮೈಸೂರು, ಜೂ.26(ಜಿಎ)-ಆಂಧ್ರ ಮತ್ತು ತೆಲಂಗಾಣ ರಾಜ್ಯಗಳ ಮಾದರಿಯಲ್ಲಿಯೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಬೃಹತ್ ಪ್ರತಿಮೆ ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿರುವುದಕ್ಕೆ ಕರ್ನಾಟಕ ಭೀಮ್ ಸೇನೆಯ ರಾಜ್ಯ ಸಂಘಟನೆ ಸಂತಸ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್ ಈ ವಿಷಯ ತಿಳಿಸಿ, ಡಾ.ಅಂಬೇಡ್ಕರ್ ಅವರ ಬೃಹತ್ ಪ್ರತಿಮೆ ಸ್ಥಾಪಿಸುವ ಮೂಲಕ ಕಾಂಗ್ರೆಸ್ ಸರ್ಕಾರವು ನುಡಿದಂತೆ ನಡೆಯುವ ಸರ್ಕಾರ ಎಂಬ ಜನಾಭಿಪ್ರಾಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದರು.

ಪ್ರತಿಮೆಯನ್ನು ಬೆಂಗಳೂರಿನ ಜ್ಞಾನ ಭಾರತಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಆದಷ್ಟು ಬೇಗ ಪ್ರತಿಮೆ ನಿರ್ಮಾಣ ಕಾರ್ಯಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಜು.1ರಿಂದ ಹೊಸ ವಿದ್ಯುತ್ ಸಂಪರ್ಕಕ್ಕೆ ಸ್ಮಾರ್ಟ್ ಮೀಟರ್ ಕಡ್ಡಾಯ



ಮೈಸೂರು, ಜೂ. 26(ಆರ್‌ಕೆ)- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ವ್ಯಾಪ್ತಿಯಲ್ಲಿ ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರು 2025ರ ಜುಲೈ 1ರಿಂದ ಸ್ಮಾರ್ಟ್ ಮೀಟರ್ ಅಳವಡಿಸುವುದನ್ನು (HT ಹೊರತುಪಡಿಸಿ) ಕಡ್ಡಾಯಗೊಳಿಸಲಾಗಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸೆಸ್ಕ್‌ನ ಐಟಿ ಅಂಡ್ ಎಂಐಎಸ್ ವಿಭಾಗದ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ದ ಆದೇಶದಂತೆ ಜುಲೈ 1ರಿಂದ ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರು ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರಿನ ಒಂಟಿಕೊಪ್ಪಲಿನ ಮಾತೃಮಂಡಳಿ ಸರ್ಕಲ್‌ನಲ್ಲಿರುವ ಸೆಸ್ಕ್ ವಿವಿ ಮೊಹಲ್ಲಾ ಉಪ ವಿಭಾಗದ ಕಚೇರಿ, ಲಷ್ಕರ್ ಮೊಹಲ್ಲಾದ ಅಪೇರಾ ಟಾಕೀಸ್ ಬಳಿಯ ಎಂಪಿಎಲ್ ಕಚೇರಿ ಸೇರಿದಂತೆ ವಿವಿಧ ಸ್ಥಳಗಳ ರೀಟೇಲ್ ಔಟ್‌ಲೆಟ್‌ಗಳಲ್ಲಿ ಸೆಸ್ಕ್ ನಿಗದಿಪಡಿಸಿರುವ ದರದಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಖರೀದಿಸಿ ವಿದ್ಯುತ್ ಸಂಪರ್ಕ ಪಡೆಯಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಗ್ರಾಹಕರಿಗೆ ಅರಿವು ಮೂಡಿಸಲು ಜೂನ್ 27ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ 2ನೇ ಹಂತದ ನಿಗಮದ ಕಚೇರಿ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿದ್ದು, ಆಸಕ್ತ ವಿದ್ಯುತ್ ಗ್ರಾಹಕರು ಆಗಮಿಸಿ ಸ್ಮಾರ್ಟ್ ಮೀಟರ್ ಅನುಷ್ಠಾನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸೆಸ್ಕ್ ವ್ಯವಸಾಪಕ ನಿರ್ದೇಶಕ ಮುನಿಗೋಪಾಲ ರಾಜು, ಕೆಇಆರ್‌ಸಿ ನಿರ್ದೇಶನದನ್ವಯ ರಾಜ್ಯದಾದ್ಯಂತ ಎಲ್ಲಾ ವಿದ್ಯುತ್ ಸರಬರಾಜು ನಿಗಮಗಳ ವ್ಯಾಪ್ತಿಗಳಲ್ಲೂ ಹೊಸ ಸಂಪರ್ಕ ಪಡೆಯುವ ಗ್ರಾಹಕರಿಗೆ ಸ್ಮಾರ್ಟ್ ಮೀಟರ್ ಅಳವಡಿಸುವುದನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ ಎಂದರು.

ಕೇಂದ್ರ ವಿದ್ಯುತ್ ಪ್ರಾಧಿಕಾರ (ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ)ವು ದೇಶಾದ್ಯಂತ ಎಲ್ಲಾ ವಿದ್ಯುತ್ ಗ್ರಾಹಕರಿಗೂ (ಹಳೆಯ ಮತ್ತು ಹೊಸ ಸಂಪರ್ಕ) ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂಬ ನಿರ್ದೇಶನ ನೀಡಿದೆ. ಅದರನ್ವಯ ಪ್ರತಿಯೊಂದು ವಿದ್ಯುತ್ ಸಂಪರ್ಕಕ್ಕೂ ಸ್ಮಾರ್ಟ್ ಮೀಟರ್ ಅಳವಡಿಸುವುದನ್ನು ಕಡ್ಡಾಯಗೊಳಿಸಿ ಅನುಷ್ಠಾನ ಮಾಡಬೇಕಾಗುತ್ತದೆ ಎಂದು ಅವರು ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಜಯಲಕ್ಷ್ಮಿ ಎಂಬುವರು ಸಿಂಗಲ್ ಫೇಸ್‌ನಿಂದ 3 ಫೇಸ್ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಪಡೆಯಲು ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸಿದ್ದಾರೆಂಬ ಆರೋಪ ಮಾಡಿ ಬೆಸ್ಕಾಂ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರಿಂದ ನ್ಯಾಯಾಲಯವು ಜಯಲಕ್ಷ್ಮಿ ಅವರ ವಿದ್ಯುತ್ ಸಂಪರ್ಕಕ್ಕೆ ಸ್ಮಾರ್ಟ್ ಮೀಟರ್ ಅಳವಡಿಸುವ ಸಂಬಂಧ ಮಾತ್ರ ನ್ಯಾಯಾಲಯ ತಡೆ ನೀಡಿದೆಯೇ ಹೊರತು, ಅದು ಇತರರಿಗೆ ಅನ್ವಯಿಸುವುದಿಲ್ಲ ಎಂದು ಮುನಿಗೋಪಾಲರಾಜು ತಿಳಿಸಿದ್ದಾರೆ.

ಭಾರತದಲ್ಲೀಗ ಗಾಂಧೀಜಿ ಹೆಸರೇಳುವವರೇ ಇಲ್ಲದಂತಾಗುತ್ತಿದೆ

ಹಿರಿಯ ಗಾಂಧಿವಾದಿ ಸರೋಜ ತುಳಸೀದಾಸ್ ತೀವ್ರ ಬೇಸರದ ನುಡಿ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ 'ಶಾಂತಿ ಸದ್ಭಾವಗಳ ರಾಷ್ಟ್ರೀಯ ಕಾರ್ಯಕ್ರಮ'ದ ಅಭಿಯಾನದ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಮೈಸೂರು, ಜೂ.26(ಎಸ್‌ಪಿಎನ್)- ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಾಗ ಎಲ್ಲವೂ ಗಾಂಧಿಮಯವಾಗಿತ್ತು. ಇದೀಗ ಭಾರತದಲ್ಲಿ ಅವರ ಹೆಸರನ್ನು ಹೇಳುವವರೇ ಇಲ್ಲದಂತಾಗಿದೆ ಎಂದು ಹಿರಿಯ ಗಾಂಧಿವಾದಿ ಸರೋಜ ತುಳಸೀದಾಸ್ ತೀವ್ರ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ 'ಶಾಂತಿ ಸದ್ಭಾವಗಳ ರಾಷ್ಟ್ರೀಯ ಕಾರ್ಯಕ್ರಮ'ದ ಅಭಿಯಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಮಹಾತ್ಮ ಗಾಂಧೀಜಿ ಅವರ ಸಾಧನೆ, ಈ ದೇಶದ ಸ್ವಾತಂತ್ರ್ಯಕ್ಕಾಗಿ ರೂಪಿಸಿದ ಬೃಹತ್ ಹೋರಾಟವನ್ನೇ ಮರೆತಿದ್ದಾರೆ. ಅವರ ಸಾಧನೆ-ಹೋರಾಟದ ಬದುಕನ್ನು ನೆನಪಿಸುವ ಕಾರ್ಯ ಶಾಲಾ-ಕಾಲೇಜುಗಳಲ್ಲಿ ಆಗಬೇಕು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಇಡೀ ಭಾರತ ಗಾಂಧಿಮಯವಾಗಿತ್ತು. ಈಗ ಸಮಾಜದಲ್ಲಿ ಅಂತೋವಂತು ವಾತಾವರಣ ನಿರ್ಮಾಣವಾಗುತ್ತಿದೆ ಎಂದರು.

ಗಾಂಧೀಜಿ ಹೋರಾಟದಿಂದ ಪ್ರೇರಣೆಗೊಂಡ ಅನೇಕ ಗಾಂಧಿವಾದಿಗಳು ಅವರವರ ಊರುಗಳಲ್ಲಿ ಗಾಂಧೀಜಿ ಹೆಸರಿನಲ್ಲಿ, ಅವರ ಪತ್ನಿ ಕಸ್ತೂರ ಬಾ ಹೆಸರಿನಲ್ಲಿ ಸಂಘ-ಸಂಸ್ಥೆಗಳು ಸ್ಥಾಪನೆಗೊಂಡು ಹಳ್ಳಿ-ಹಳ್ಳಿಯ ವೃತ್ತ-ರಸ್ತೆಗಳಿಗೆ ಗಾಂಧೀಜಿ ಹೆಸರಿಡಲು ಪೈಪೋಟಿಯಿತ್ತು. ಇಂದು ಆ ಧಾವಂತ ಯುವಕರಲ್ಲಿ ಕಾಣುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧೀ ತತ್ವಕ್ಕೆ ಮಾರುಹೋಗಿದ್ದ ಯಶೋಧರ ದಾಸಪ್ಪ ದಂಪತಿ, ರಾಜಕಾರಣದ ಜೊತೆಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಸಮಾಜದಲ್ಲಿ ನೊಂದ ಮಹಿಳೆಯರಿಗಾಗಿ ಅರಸೀಕರೆಯಲ್ಲಿ 82 ಎಕರೆ ಭೂಮಿ ಖರೀದಿಸಿ, ಗೋ ಶಾಲೆ, ಮಹಿಳಾ ಶಿಕ್ಷಕ ತರಬೇತಿ ಹಾಗೂ ವೃತ್ತಿ ತರಬೇತಿ ಕೇಂದ್ರ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವಸತಿ ನಿಲಯ ಸೇರಿದಂತೆ ಇತರೆ ಸೇವಾ ಚಟುವಟಿಕೆಗಳನ್ನು ಆರಂಭಿಸಿದ್ದ ಪ್ರಸಂಗವನ್ನು ವಿವರಿಸಿದರು.

ಮಹಾತ್ಮ ಗಾಂಧೀಜಿಯವರ ಜೀವನದ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಇಂದು ದೇಶ-ವಿದೇಶಗಳಲ್ಲಿ ನಡೆಯುತ್ತಿರುವ ಹಿಂಸಾಚಾರಗಳನ್ನು ಕೊನೆಗಾಣಿಸಬಹುದು. ಅಲ್ಲದೆ, ದೇಶದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾಚಾರಗಳನ್ನು ಕೊನೆಗಾಣಿಸಬಹುದು. ಜನ ಮಾನಸದಿಂದ ಕಣ್ಮರೆಯಾಗುತ್ತಿರುವ ಗಾಂಧೀಜಿ ತತ್ವ, ಅಹಿಂಸಾ ಹೋರಾಟ, ಮಹಿಳಾ ಸಬಲೀಕರಣ, ಸಾಮಾಜಿಕ ಮೌಲ್ಯಗಳನ್ನು ಮರುಸ್ಥಾಪಿಸುವ ಅಗತ್ಯತೆಯಿದೆ ಎಂದರು.

ಬಹುಭಾಷಾ ನಟ ಪ್ರಕಾಶ್ ರಾಜ್ ಮಾತನಾಡಿ, ದೇಶದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಜಗಳ, ರಾಷ್ಟ್ರ-ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧಗಳು ಕೊನೆಗಾಣಬೇಕು. ಯುವ ಸಮುದಾಯಕ್ಕೆ ಹೊಸ ಸಾಂಸ್ಕೃತಿಕ ಜಗತ್ತು ಪರಿಚಯವಾಗಬೇಕು. ಯುದ್ಧದ ನೆಲದಲ್ಲಿ ಶಾಂತಿ ಮರು ಸ್ಥಾಪನೆಯಾಗಬೇಕು. ಇದಕ್ಕೆ ಗಾಂಧೀಜಿ ಅವರ ಆದರ್ಶಗಳನ್ನು ಯುವ ಸಮೂಹದಲ್ಲಿ ಜಾಗೃತಿ ಮೂಡಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

"ಹಿರಿಯ ರಂಗಕರ್ಮಿ ಪ್ರಸನ್ನ ಅವರ ನೇತೃತ್ವದಲ್ಲಿ ಗಾಂಧೀಜಿ ತತ್ವ, ಆದರ್ಶಗಳನ್ನು ಸಮಾಜದಲ್ಲಿ ಪುನರ್‌ಸ್ಥಾಪಿಸುವ ಕೆಲಸವನ್ನು ಸದ್ಭಾವ ಕಾರ್ಯಕ್ರಮ ಮಾಡುತ್ತಿದೆ. ಎಲ್ಲಾ ಸಮುದಾಯ ಮತ್ತು ಭಾಷೆಗಳನ್ನು ಒಗ್ಗೂಡಿಸಿ ಹೊಸ ರಾಷ್ಟ್ರೀಯ ಮನೋಭಾವವನ್ನು ಸಮಾಜದಲ್ಲಿ ಬೆಳೆಸಲು ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ. **-ಪಿ.ಜಿ.ಆರ್.ಸಿಂಧ್ಯಾ ರಾಜ್ಯಾಧ್ಯಕ್ಷರು, ಸ್ಕೌಟ್ಸ್ & ಗೈಡ್ಸ್ ರಾಜ್ಯ ಘಟಕ**

ಇದೇ ವೇಳೆ ಉರ್ದು ಭಾಷೆಯ ಸದ್ಭಾವ ಭಿತ್ತಿಚಿತ್ರವನ್ನು ಲೇಖಕಿ ಸಬಿಹಾ ಭೂಮಿಗೌಡ ಬಿಡುಗಡೆಗೊಳಿಸಿದರು.

ಇಪ್ಟಾ ರಾಷ್ಟ್ರೀಯ ಕಾರ್ಯಾಧ್ಯಕ್ಷ ರಾಕೇಶ್ ವೇದ ಅವರು ಇಂಗ್ಲಿಷ್ ಸದ್ಭಾವ ಭಿತ್ತಿ ಚಿತ್ರ ಬಿಡುಗಡೆಗೊಳಿಸಿದರು.

ರಂಗ ನಿರ್ದೇಶಕ ಪ್ರಸನ್ನ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗಾಯಕಿ ಶಾಲೋಮ್ ಸನ್ನುತಾ ಮತ್ತು ಗಿಟಾರ್ ವಾದನದ ಜೊತೆಗೆ 'ಸದ್ಭಾವ' ಗೀತೆಯನ್ನು ಪ್ರಸ್ತುತಪಡಿಸಿದರು.

ಇಪ್ಟಾ ರಾಷ್ಟ್ರೀಯ ಉಪಾಧ್ಯಕ್ಷ ಬಾಲನ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ತಂಡದಿಂದ ಪ್ರಸನ್ನ ನಿರ್ದೇಶನದಲ್ಲಿ 'ಪಿಪ್ಪಿಗೊಂದು ಪಪ್ಪಿ' ನಾಟಕ ಪ್ರದರ್ಶನಗೊಂಡಿತು.

ದಲಿತ ಮಹಿಳೆಯ ಬಿಸಿಯೂಟ ವಿರೋಧಿಸಿದ ಪೋಷಕರು, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಜೂ.26(ಬಿಎಲ್‌ಯು)– ಚಾಮರಾಜನಗರ ತಾಲೂಕು ಆಲೂರು ಹೊಮ್ಮ ಗ್ರಾಮದ ಶಾಲೆಯಲ್ಲಿ ದಲಿತ ಮಹಿಳೆ ಬಿಸಿಯೂಟ ತಯಾರಿಸಿದ್ದಾರೆಂದು ಶಾಲೆ ಬಿಟ್ಟ ಪ್ರಕರಣದಲ್ಲಿ ಪೋಷಕರು ಹಾಗೂ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಆಗ್ರಹಿಸಿದ್ದಾರೆ.



ಚಾಮರಾಜನಗರದ ಆಲೂರು ಹೊಮ್ಮ ಗ್ರಾಮದ ಶಾಲೆಯಲ್ಲಿ ದಲಿತ ಮಹಿಳೆ ಬಿಸಿಯೂಟ ತಯಾರಿಸಿದ್ದಾರೆಂಬ ಕಾರಣಕ್ಕೆ ಶಾಲೆಯ ವಿದ್ಯಾರ್ಥಿಗಳು ಶಾಲೆ ಬಿಟ್ಟ ಪ್ರಕರಣದಲ್ಲಿ ಅಧಿಕಾರಿಗಳು ಹಾಗೂ ಮಕ್ಕಳ ಪೋಷಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಹಾಗೂ ಮೈಸೂರು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡತಲೆ ಮಂಜುನಾಥ್ ಅವರು ಚಾಮರಾಜನಗರ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.

ಸಮಾನತೆಯ ಪಾಠ ಕಲಿಯಬೇಕಾದ ಶಾಲೆಗಳಲ್ಲಿಯೇ ಜಾತಿ ತಾರತಮ್ಯ ವರದಿಯಾಗಿರುವುದು ಆತಂಕಕಾರಿ ಸಂಗತಿಯಾಗಿದೆ. ಇದು ಶಿಕ್ಷಣ ವ್ಯವಸ್ಥೆಯ ವಿರೋಧಿ ನಡೆಯಾಗಿದೆ ಎಂದು ಹೇಳಿದ್ದಾರೆ.

ಜಾತಿ ತಾರತಮ್ಯದಂತಹ ಸೂಕ್ಷ್ಮ ವಿಚಾರವನ್ನು ಜಿಲ್ಲಾಡಳಿತದ ಗಮನಕ್ಕೆ ತರದೆ 21 ಮಕ್ಕಳಿಗೆ ವರ್ಗಾವಣೆ ಪತ್ರ ನೀಡಿರುವ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ತಾಲೂಕು ಶಿಕ್ಷಣಾಧಿಕಾರಿಗಳು ಹಾಗೂ ಪೋಷಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ವರ್ಗಾವಣೆ ಪತ್ರ ಪಡೆದಿರುವ ಮಕ್ಕಳಿಗೆ ಬೇರೆ ಯಾವುದೇ ಶಾಲೆಯಲ್ಲಿ ದಾಖಲಾತಿ ನೀಡಬಾರದು ಎಂದು ಹೇಳಿದ್ದಾರೆ.

ಕಳೆದ 20 ವರ್ಷಗಳಿಂದ ಬಿಸಿಯೂಟ ತಯಾರಿಸುತ್ತಿರುವ ನಂಜಮ್ಮ ಅವರು ನಿವೃತ್ತಿಯಾಗುವ ತನಕ ಅದೇ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲು ಜಿಲ್ಲಾಡಳಿತ ಅವಕಾಶ ನೀಡಬೇಕೆಂದು ಭಾಸ್ಕರ್ ಆಗ್ರಹ ಮಾಡಿದ್ದಾರೆ.

ಮಾದಕ ವಸ್ತು ಬಳಕೆ ವಿರುದ್ಧ ಮೈಸೂರಲ್ಲಿ ಪೊಲೀಸರಿಂದ ಜಾಗೃತಿ ಜಾಥಾ

ಮೈಸೂರು,ಜೂ.26(ಆರ್‌ಕೆ)– ಮಾದಕ ವಸ್ತು ಬಳಕೆ ಮತ್ತು ಸಾಗಣೆ ವಿರುದ್ಧ ಮೈಸೂರಲ್ಲಿ ಇಂದು ಪೊಲೀಸರು ಜನ ಜಾಗೃತಿ ಜಾಥಾ ನಡೆಸಿದರು.

ನಗರ ಪೊಲೀಸ್ ಘಟಕದಿಂದ ಅಂತಾರಾಷ್ಟ್ರೀಯ ಮಾದಕ ವಸ್ತು ಬಳಕೆ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ ಮೈಸೂರು ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಆರಂಭವಾದ ಜಾಥಾಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮಾನಸಿಕ ರೋಗ ವಿಭಾಗದ ಪ್ರಾಧ್ಯಾಪಕಿ ಡಾ.ಮಾಲಿನಿ ಹಾಗೂ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.



ಮಾದಕ ವಸ್ತು ಬಳಕೆ ಮತ್ತು ಸಾಗಣೆ ವಿರುದ್ಧ ಮೈಸೂರಲ್ಲಿ ಪೊಲೀಸರು ಜಾಗೃತಿ ಜಾಥಾಗೆ ಚಾಲನೆ ನೀಡಿದರು.

'ಮಾದಕ ವಸ್ತು ಬಳಕೆಯಿಂದ ಜೀವನ ನಾಶ', ಡ್ರಗ್ಸ್ ಬೇಡ' ಎಂಬಿತ್ಯಾದಿ ಘೋಷಣಾ ಫಲಕಗಳನ್ನಿಡಿದು ಆರಂಭವಾದ ಜಾಥಾವು ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸಂಸ್ಕೃತ ಪಾಠಶಾಲೆ, ಗನ್ ಹೌಸ್ ಸರ್ಕಲ್, ಹಾರ್ಡಿಂಗ್ ಸರ್ಕಲ್ ಮೂಲಕ ಸಾಗಿ ಮರಳಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಅಂತ್ಯಗೊಂಡಿತು.

ಜಾಥಾ ಉದ್ಘಾಟಿಸಿ ಮಾತನಾಡಿದ ಡಾ.ಮಾಲಿನಿ, ಮಾದಕ ವಸ್ತು ಸೇವನೆಯಿಂದ ಮನುಷ್ಯನ ಜೀವನವಷ್ಟೇ ಅಲ್ಲದೆ ಇಡೀ ಕುಟುಂಬ ನಾಶವಾಗುತ್ತದೆ. ಹಾಗೂ ಸಮಾಜಕ್ಕೂ ಮಾರಕವಾಗಲಿದೆ. ಅದರಿಂದ ಮಾರಣಾಂತಿಕ ರೋಗಕ್ಕೂ ತುತ್ತಾಗಿ ಹಲವರು ಮಾನಸಿಕ ರೋಗಿಗಳಾಗಿರುವ ಹಲವು ನಿದರ್ಶನಗಳಿವೆ ಎಂದರು.

ಯುವಕರು ಮಾದಕ ದ್ರವ್ಯ ಚಟಕ್ಕೆ ಬಲಿಯಾಗುತ್ತಿರುವುದರಿಂದ ಶಾಲಾ–ಕಾಲೇಜು ಹಂತದಲ್ಲೇ ಅರಿವು ಮೂಡಿಸಬೇಕಾಗಿದೆ ಎಂದ ಅವರು, ಕಾನೂನು ಕಟ್ಟಳೆಗಳಿಂದ ಈ ಹವ್ಯಾಸಕ್ಕೆ ಬ್ರೇಕ್ ಹಾಕಲು ಸಾಧ್ಯವಿಲ್ಲ. ಬದಲಾಗಿ ನಮ್ಮ ಯೋಚನೆಗಳು ಪರಿವರ್ತನೆಯಾಗಬೇಕು ಎಂದು ಹೇಳಿದರು.

ಈ ಸಂದರ್ಭ ಮಾತನಾಡಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮಾದಕವ ಸಾಗಣೆ, ದಾಸ್ತಾನು ಮತ್ತು ಮಾರಾಟದ ಮೂಲ ತಿಳಿದು ಕಾನೂನಿನನ್ವಯ ಕಾರ್ಯಾಚರಣೆ ನಡೆಸಿ, ಪ್ರಕರಣ ದಾಖಲಿಸಿ, ಕಾನೂನು ರೀತಿಯ ಕ್ರಮ ಕೈಗೊಂಡರೂ ಪೊಲೀಸರ ಕಣ್ತಪ್ಪಿಸಿ ದುಶ್ಚಟಕ್ಕೆ ದಾಸರಾಗಿ ಯುವಕರು ತಮ್ಮ ಜೀವನವನ್ನು ಸರ್ವನಾಶ ಮಾಡಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಡಿಸಿಪಿಗಳಾದ ಎಂ.ಮುತ್ತುರಾಜ್, ಸುಂದರ್‌ರಾಜ್, ಸಿಎಆರ್ ಡಿಸಿಪಿ ಸಿದ್ದನಗೌಡ ಪ್ಯಾಟೀಲ್, ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್, ಬಿಜಿಎಸ್ ನರ್ಸಿಂಗ್ ಕಾಲೇಜು, ಕಾವೇರಿ ನರ್ಸಿಂಗ್ ಸಂಸ್ಥೆ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸೇರಿದಂತೆ ಹಲವು ಕಾಲೇಜುಗಳ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಮುಲಾಜಿಲ್ಲದೆ ಅತಿಕ್ರಮ ತೆರವು: ಶಾಸಕ ಎಆರ್‌ಕೆ ಖಡಕ್ ಹೇಳಿಕೆ



ಕೊಳ್ಳೇಗಾಲದ ಬೀರೇಶ್ವರ ಸಮುದಾಯ ಭವನದ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ, ಜೂ.26–ಹುಟ್ಟುಹಬ್ಬದಲ್ಲಿ ಕೇಕ್ ಕತ್ತರಿಸಿದಂತೆ ಪಟ್ಟಣದಲ್ಲಿನ ರಾಜ್‌ಕುಮಾರ್ ಮತ್ತು ಅಂಬೇಡ್ಕರ್ ರಸ್ತೆ ಅತಿಕ್ರಮಣವನ್ನು ತೆರವು ಗೊಳಿಸುವ ಮೂಲಕ ಮುಲಾಜಿಲ್ಲದೆ ಸರ್ಕಾರಿ ಜಾಗ ಉಳಿಸುವ ಧ್ಯೇಯ ನನ್ನದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದ್ದಾರೆ.

ಪಟ್ಟಣದ ಬೀರೇಶ್ವರ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ 50ಲ ಅನುಧಾನದಡಿ ಚಾಲನೆ ನೀಡಿದ ಅವರು, ರಾಜ್‌ಕುಮಾರ್, ಅಂಬೇಡ್ಕರ್ ರಸ್ತೆ ಅಗಲೀಕರಣ ವಿಚಾರದಲ್ಲಿ ನನ್ನ ತೀರ್ಮಾನಕ್ಕೆ ಬಹುತೇಕ ನಗರಸಭೆ ಸದಸ್ಯರು ಚುನಾವಣೆ ಭಯದಿಂದ ನಗರ ಸಭೆಯಲ್ಲಿ ಅನುಮೋದನೆ ನೀಡಲಿಲ್ಲ, ಹಾಗೆಯೇ ಅಧಿಕಾರಿಗಳು ಸಹಾ ಅಳತೆ ಹಾಗೂ ಇನ್ನಿತರೆ ಮಾಹಿತಿ, ದಾಖಲೆ ನೀಡುವ ವಿಚಾರದಲ್ಲೂ ಸಕಾಲದಲ್ಲಿ ಸ್ಪಂದಿಸಲಿಲ್ಲ ಎಂದು ಕಿಡಿಕಾರಿದ ಎಆರ್‌ಕೆ, ಆದರೆ ಲೋಕೋಪಯೋಗಿ ಅಧಿಕಾರಿಗಳು ಸಕಾಲದಲ್ಲಿ ತಮ್ಮ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈಗಾಗಲೇ ನದಿ ಪಾತ್ರಗಳಲ್ಲಿ ಪ್ರವಾಹದ ಸಂದರ್ಭದಲ್ಲಿನ ಹಾನಿ, ಸಮಸ್ಯೆಗಳ ಕುರಿತು ಸಹಾ ಸಮಸ್ಯೆ ಸರ್ಕಾರದ ಗಮನಕ್ಕೆ ತಂದಿದ್ದೆ ಎಂದರಲ್ಲದೆ, ಶೀಘ್ರದಲ್ಲೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸಿಎಂ 50 ಕೋಟಿ ಅನುದಾನ ನೀಡಲಿದ್ದಾರೆ ಎಂದರು.

ನಗರಸಭೆ ಅಧ್ಯಕ್ಷೆ ರೇಖಾ, ವಾರ್ಡ್ ಸದಸ್ಯೆ ಮಾನಸ ಪ್ರಭುಸ್ವಾಮಿ, ರಾಘವೇಂದ್ರ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧ್ಯಕ್ಷ ಹೊಂಗನೂರು ಚಂದ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ಕುರುಬರ ಸಂಘದ ಜಿಲ್ಲಾಧ್ಯಕ್ಷ ನಂಜೇಗೌಡ, ತಾಲೂಕು ನಿರ್ದೇಶಕ ಶಶಿಕುಮಾರ್, ಯಜಮಾನ ಮಹದೇವ, ದೊಳ್ಳೇಗೌಡ, ಸುರೇಶ್, ಪುಟ್ಟಮಾದು, ಶಿವಮಲ್ಲು ಇನ್ನಿತರಿದ್ದರು.

ತುರ್ತು ಪರಿಸ್ಥಿತಿಯ ಕರಾಳತೆಯ ಜನರಿಗೆ ತಿಳಿಸಲು ಇಂದಿನಿಂದ ತಿಂಗಳ ಅಭಿಯಾನ

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮಾಹಿತಿ



ಮೈಸೂರು, ಜೂ.26(ಬಿಎಲ್‌ಯು)– ಇಂದಿರಾ ಗಾಂಧಿ ಅವರು ದೇಶದಲ್ಲಿ ಜಾರಿಗೊಳಿಸಿದ್ದ ತುರ್ತು ಪರಿಸ್ಥಿತಿಯ ಕರಾಳ ದಿನವನ್ನು ಜನರಿಗೆ ಮನವರಿಕೆ ಮಾಡಿಕೊಡಲು ಮೈಸೂರಿನಲ್ಲಿ ಜೂನ್ 27ರಿಂದ ಒಂದು ತಿಂಗಳ ಕಾಲ ಅಭಿಯಾನ ಆಯೋಜಿಸಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ತಿಳಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 27ರಂದು ಬೆಳಗ್ಗೆ 11 ಗಂಟೆಗೆ ವರುಣ ಗ್ರಾಮದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಮಾಜಿ ಸಚಿವ ಎನ್.ಮಹೇಶ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ಬಿಜೆಪಿ ನಾಯಕರು ಹಾಗೂ ನೂರಾರು ಸಂಖ್ಯೆಯ ಬಿಜೆಪಿ ಕಾರ್ಯಕರ್ತರು ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸುಬ್ಬಣ್ಣ ತಿಳಿಸಿದರು.

ವರುಣ ಗ್ರಾಮದ 18 ಗ್ರಾಮಗಳಲ್ಲಿ ಸಭೆ ನಡೆಸಿ ತುರ್ತು ಪರಿಸ್ಥಿತಿಯ ಕರಾಳ ದಿನವನ್ನು ಜನರಿಗೆ ಮನವರಿಕೆ ಮಾಡಿಕೊಡಲಾಗುವುದು. ತರ್ತು ಪರಿಸ್ಥಿತಿ ಸಂದರ್ಭದಲ್ಲಿ ಜನರ ಅಭಿವ್ಯಕ್ತ ಸ್ವಾತಂತ್ರ್ಯವನ್ನು ಕಸಿದುಕೊಂಡು ಯಾವ ರೀತಿ ದಬ್ಬಾಳಿಕೆ ನಡೆಸಲಾಯಿತು ಎಂದು ಜನರಿಗೆ ಮನದಟ್ಟು ಮಾಡಲಾಗುವುದು ಎಂದು ಹೇಳಿದರು.

ದೇಶದಲ್ಲಿ ಕಳೆದ 11 ವರ್ಷಗಳಿಂದ ಅಘೋಷಿತ ತುರ್ತು ಪರಿಸ್ಥಿತಿ ಇದೆ ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸುಬ್ಬಣ್ಣ, ಕಾಂಗ್ರೆಸ್ ನಾಯಕರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಪ್ರಧಾನಿ ನರೇಂದ್ರ ಮೋದಿ ಅವರು ಉತ್ತಮ ಆಡಳಿತ ನಡೆಸುತ್ತಿದ್ದು, ಭಾರತ ವಿಶ್ವದಲ್ಲೆ ಹಲವು ಕ್ರಾಂತಿಕಾರ ಹೆಜ್ಜೆ ಇಟ್ಟಿದೆ. ಈ ಮೂಲಕ ವಿಶ್ವವನ್ನೆ ನಿಬ್ಬೆರಗಾಗಿಸುವಂತಹ ಬಹಳಷ್ಟು ವಿಶಿಷ್ಟ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಸುಬ್ಬಣ್ಣ ತಿಳಿಸಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಮಹೇಶ್ ಮಡುವಾಡಿ, ಬಾಲಚಂದ್ರು, ಪಾಪಣ್ಣ, ವಿನಯ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಎಸ್‌ಬಿಎಂ ಮಂಜುಗೆ ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಚುನಾಯಿತರಾದ ಎಸ್‌ಬಿಎಂ ಮಂಜು ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಾಸನಕೊಪ್ಪಲು ರಾಜಣ್ಣ, ನಗರಪಾಲಿಕೆ ಮಾಜಿ ಸದಸ್ಯ ಎಲ್.ಬಿ.ಜಗದೀಶ್, ಅನುಜ್ ಆತ್ಮೀಯವಾಗಿ ಅಭಿನಂದಿಸಿದರು.

ಲಿಟಲ್ ಫ್ಲವರ್ ಶಾಲೆಯಲ್ಲಿ ವಿದ್ಯಾರ್ಥಿಗಳ ಶಾಲಾ ಸಂಸತ್ ರಚನೆ



ಶಾಲಾ ಸಂಸತ್‌ಗಾಗಿ ಲಿಟಲ್ ಫ್ಲವರ್ ಶಾಲೆ ವಿದ್ಯಾರ್ಥಿಗಳು ಮತ ಚಲಾಯಿಸಿರುವುದು.

ಗುಂಡ್ಲುಪೇಟೆ, ಜೂ.26–ತಾಲೂಕಿನ ಬೇಗೂರು ಗ್ರಾಮದ ಲಿಟಲ್ ಫ್ಲವರ್ ಶಾಲೆಯಲ್ಲಿ ವಿದ್ಯಾರ್ಥಿಗಳ ಶಾಲಾ ಸಂಸತ್ ರಚನೆಗಾಗಿ ಮತದಾನದ ಮೂಲಕ ಚುನಾವಣಾ ಪ್ರಕ್ರಿಯೆ ನೆರವೇರಿಸಲಾಯಿತು.

ಚುನಾವಣಾ ಪೂರ್ವ ತಯಾರಿಯಾಗಿ ವಾರ ಮುಂಚಿತವಾಗಿ ಅಧಿಸೂಚನೆ ಪ್ರಕಟಿಸಲಾಗಿತ್ತು. ಬಳಿಕ ನಾಮಪತ್ರ ಸಲ್ಲಿಕೆ ಮತ್ತು ಹಿಂಪಡೆಯುವ ದಿನಾಂಕಗಳನ್ನು ಪ್ರಕಟಿಸಿ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಕಲ್ಪಿಸಲಾಯಿತು.

25 ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರಿಗೆ ನಾಮಪತ್ರ ಸಲ್ಲಿಸಿದ್ದು, ಅವರಲ್ಲಿ ಮೂವರು ನಾಮಪತ್ರ ವಾಪಸ್ ಪಡೆದಿದ್ದಾರೆ. ಸ್ಪರ್ಧಾರ್ಥಿಗಳಿಗೆ ಕ್ರಮ ಸಂಖ್ಯೆ ನೀಡಿ ಮಾದರಿ ಮತಪತ್ರದೊಂದಿಗೆ ಪ್ರಚಾರಕ್ಕೂ ಅವಕಾಶ ನೀಡಲಾಯಿತು. ನಂತರ ಚುನಾವಣಾ ಅಧಿಕಾರಿಗಳಾದ ಮಂಜುಕುಮಾರ್ ಎಸ್‌ಬಿಬಿ ಬಿಜು, ಯೋಗಿತ ಮತ್ತು ಪ್ರತೀಷ ಉಪಸ್ಥಿತಿಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ರಿವರೆಂಟ್ ಫಾದರ್ ಜೋಜಿ ಮ್ಯಾಥಿವ್ ಮತದಾನ ಮಾಡುವ ಮೂಲಕ ಪ್ರಾರಂಭವಾಗಿ ಮತ್ತೆ ಶಾಲೆಯ ವಿದ್ಯಾರ್ಥಿಗಳಿಂದ ಮತದಾನ ನಡೆಯಿತು. ಶಿಕ್ಷಕ ವೃಂದ ಸೇರಿ ಒಟ್ಟು 250 ಮತದಾರರ ಪೈಕಿ 220 ಮಂದಿ ಮತದಾನ ಮಾಡಿದ್ದಾರೆ. ನಂತರ ಮತದಾನದ ಎಣಿಕೆ ಪ್ರಕ್ರಿಯು ವಿದ್ಯಾರ್ಥಿಗಳ ಸಮ್ಮುಖದಲ್ಲಿಯೇ ನಡೆಯಿತು.

ಕ್ರೀಡಾ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಿ

ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಿಗೆ ಎಡಿಸಿ ಡಾ. ಪಿ. ಶಿವರಾಜು ಸೂಚನೆ



ಮೈಸೂರಿನ ನಜರ್‌ಬಾದ್‌ನಲ್ಲಿರುವ ಕ್ರೀಡಾ ಹಾಸ್ಟೆಲ್‌ಗೆ ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಜೂ. 26(ಆರ್‌ಕೆ)– ಕ್ರೀಡಾ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೀಡುವ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್‌ನಾಯಕ ಅವರಿಗೆ ಸೂಚನೆ ನೀಡಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದ ಮೇರೆಗೆ ಮೈಸೂರು ತಾಲೂಕು ಉಸ್ತುವಾರಿ ಅಧಿಕಾರಿಯೂ ಆಗಿರುವ ಅವರು, ಇಂದು ಬೆಳಗ್ಗೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿರುವ ಕ್ರೀಡಾ ಹಾಸ್ಟೆಲ್‌ಗೆ ಭೇಟಿ ನೀಡಿ, ಪರಿಶೀಲಿಸಿದರು. ಅಡುಗೆ ಮನೆ, ಕುಡಿಯುವ ನೀರು ಸರಬರಾಜು, ಸ್ವಚ್ಛತೆ, ಆಹಾರ ತಯಾರಿಕೆ ವಿಧಾನ, ಕ್ರೀಡಾ ವಿದ್ಯಾರ್ಥಿಗಳ ಕೊಠಡಿಗಳ ನಿರ್ವಹಣೆ ಕುರಿತಂತೆ ಖುದ್ದು ಪರಿಶೀಲನೆ ನಡೆಸಿದ ಶಿವರಾಜು, ಸರ್ಕಾರ ಒದಗಿಸುತ್ತಿರುವ ಮೂಲ ಸೌಲಭ್ಯಗಳನ್ನು ಪರಿಶೀಲಿಸಿದರು.

ಕ್ರೀಡಾ ಸಲಕರಣೆ, ಸುರಕ್ಷತೆ, ಸಮವಸ್ತ್ರ, ಶೂ, ಆಹಾರ ತಯಾರಿಸಲು ಬಳಸುತ್ತಿರುವ ಪದಾರ್ಥ ಮತ್ತಿತರ ಸೌಲಭ್ಯಗಳನ್ನು ಕ್ರಮಬದ್ಧವಾಗಿ ವಿದ್ಯಾರ್ಥಿಗಳಿಗೆ ವಿತರಿಸಬೇಕು, ಯಾವುದೇ ಕುಂದು–ಕೊರತೆ ಇಲ್ಲದಂತೆ ಸೌಕರ್ಯ ಒದಗಿಸುವಂತೆಯೂ ಅವರು ಸೂಚನೆ ನೀಡಿದರು.

ಅದೇ ವೇಳೆ ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ಕ್ರೀಡಾ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಎಡಿಸಿ, ಕ್ರೀಡೆಯಲ್ಲಿ ಹೆಚ್ಚು ಶ್ರಮ ವಹಿಸಿ ಸಾಧನೆ ಮಾಡುವ ಮೂಲಕ ಮೈಸೂರು ಜಿಲ್ಲೆಗೆ ಕೀರ್ತಿ ತರುವಂತೆ ಸಲಹೆ ನೀಡಿದರು. ಕ್ರೀಡೆಯಲ್ಲಿ ಆಸಕ್ತಿ ಇರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ನೆರವು ನೀಡಿ ಪ್ರೋತ್ಸಾಹಿಸುವಂತೆಯೂ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್‌ನಾಯಕ ಅವರಿಗೆ ಡಾ.ಶಿವರಾಜು ಸಲಹೆ ನೀಡಿದರು.

ಕ್ರೀಡಾ ಹಾಸ್ಟೆಲ್ ನಿಲಯ ಪಾಲಕರು ಹಾಗೂ ಕ್ರೀಡಾ ತರಬೇತುದಾರರು ಈ ಸಂದರ್ಭ ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿಯ ಕರಾಳಮುಖ ರಾಜ್ಯ ಆಡಳಿತದಲ್ಲೂ ಪತ್ತೆ



ಮಡಿಕೇರಿ, ಜೂ.26–ಮಾಜಿ ಪ್ರಧಾನಿ ದಿ.ಇಂದಿರಾ ಗಾಂಧಿ ದೇಶದಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯ ಕರಾಳ ಮುಖಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರದ ಆಡಳಿತದಲ್ಲೂ ಕಂಡು ಬರುತ್ತಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ ಟೀಕಿಸಿದ್ದಾರೆ.

ಜಿಲ್ಲಾ ಬಿಜೆಪಿಯಿಂದ ನಗರದಲ್ಲಿ ಆಯೋಜಿಸಿದ್ದ 'ತುರ್ತು ಪರಿಸ್ಥಿತಿ–ಕಾಂಗ್ರೆಸ್ ಕರಾಳ ಇತಿಹಾಸಕ್ಕೆ 50 ವರ್ಷಗಳು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಸರಕಾರ ಉಳಿಸಿಕೊಳ್ಳುವ ಸಲುವಾಗಿ 1975ರ ಜೂ.25ರಂದು ಸಂವಿಧಾನಕ್ಕೆ 5 ತಿದ್ದುಪಡಿಗಳನ್ನು ತರುವ ಮೂಲಕ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರು. ಇದನ್ನು ವಿರೋಧಿಸಿದ ಜನಸಂಘ, ಸಂಘ ಪರಿವಾರದ ಹಲವಾರು ಮುಖಂಡರ ಸಹಿತ ಲಕ್ಷಾಂತರ ಮಂದಿ ಹೋರಾಟಗಾರರನ್ನು ಯಾವುದೇ ಕಾರಣಗಳಿಲ್ಲದೇ ಜೈಲಿಗೆ ಅಟ್ಟುವ ಮೂಲಕ ಸಂವಿಧಾನವನ್ನೇ ಇಂದಿರಾ ಗಾಂಧಿ ತಮ್ಮ ಮುಷ್ಟಿಯಲ್ಲಿಡಲು ಪ್ರಯತ್ನಿಸಿದ್ದರು ಎಂದು ಆರೋಪಿಸಿದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, 1970ರ ದಶಕದಲ್ಲಿ ಕೇಂದ್ರದಲ್ಲಿ ಅಸ್ತಿತ್ವದಲ್ಲಿದ್ದ ಇಂದಿರಾ ಗಾಂಧಿ ನೇತೃತ್ವದ ಕೇಂದ್ರ ಸರಕಾರದ ವಿರುದ್ದ ನಡೆಯುತ್ತಿದ್ದ ಹೋರಾಟಗಳನ್ನು ಹತ್ತಿಕ್ಕಲು ಅಂದು ದೇಶದಲ್ಲಿ 19 ತಿಂಗಳು ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು. ಜಿಲ್ಲೆಯಲ್ಲೂ 15ಕ್ಕೂ ಅಧಿಕ ಮಂದಿ ಮುಂಚೂಣಿ ಮುಖಂಡರನ್ನು ಬಂಧಿಸಿ ಅಂದು ಜೈಲಿಗೆ ಅಟ್ಟಲಾಗಿತ್ತು. ಒಂದು ರೀತಿಯಲ್ಲಿ ಇಂದಿರಾ ಗಾಂಧಿ ಆಡಳಿತದ ಅವಧಿಯಲ್ಲಿ ಅಂದಾ ದರ್ಬಾರ್ ನಡೆದಿತ್ತು ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ನಗರಸಭಾ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪಕ್ಷ ಪ್ರಮುಖರಾದ ರೀನಾ ಪ್ರಕಾಶ್, ನೆಲ್ಲಿರ ಚಲನ್, ಅರುಣ್ ಭೀಮಯ್ಯ, ಪಟ್ರಪಂಡ ರಘು ನಾಣಯ್ಯ, ಕಾಂಗೀರ ಸತೀಶ್, ಕಿಲನ್ ಗಣಪತಿ, ತಳೂರು ಕಿಶೋರ್ ಕುಮಾರ್, ನಾಗೇಶ್ ಕುಂದಲ್ಪಾಡಿ, ಬಿ.ಕೆ.ಅರುಣ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪೌರಕಾರ್ಮಿಕರಿಂದ ಸಿಎಂ ಸಿದ್ದರಾಮಯ್ಯಗೆ ಕೃತಜ್ಞತೆ



ಮೈಸೂರು, ಜೂ.26(ಜಿಎ)– ಮೈಸೂರು ಮಹಾ ನಗರಪಾಲಿಕೆಯಲ್ಲಿ ನೇರ ಪಾವತಿ ವ್ಯವಸ್ಥೆ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 252 ಮಂದಿ ಪೌರ ಕಾರ್ಮಿಕರಿಗೆ ಖಾಯಂ ನೇಮಕಾತಿ ಪತ್ರ ವಿತರಿಸಿದ್ದಕ್ಕೆ ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆದಾರ ಪೌರಕಾರ್ಮಿಕರ ಮಹಾ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಶಾಸಕ ತನ್ವೀರ್ ಸೇಠ್ ಅವರಿಗೆ ಕೃತಜ್ಞತೆ ಸಲ್ಲಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್. ಮಾರ ಈ ವಿಷಯ ತಿಳಿಸಿ, ಈಗಾಗಲೇ ನೇರ ಪಾವತಿ ಅಡಿಯಲ್ಲಿ ಕೆಲಸ ನಿರ್ವಹಿಸಿ ಮೃತಪಟ್ಟ ಸುಮಾರು 89 ಮಂದಿ ಪೌರಕಾರ್ಮಿಕರ ಕುಟುಂಬದ ಒಬ್ಬರಿಗೆ ಪಾಲಿಕೆಯಿಂದ ಕೆಲಸ ನೀಡಬೇಕು. ಹತ್ತು ಲಕ್ಷ ಪರಿಹಾರ ನೀಡಬೇಕು. ಪಾಲಿಕೆಯಲ್ಲಿ ಖಾಯಂ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ 158 ಮಂದಿಗೆ ಕೆಸರೆಯಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ. ಅದನ್ನು ಕೂಡಲೇ ಉದ್ಘಾಟನೆಗೊಳಿಸಿ ಹಂಚಿಕೆ ಮಾಡಬೇಕು ಎಂದು ಸಿಎಂ ಹಾಗೂ ಇನ್ನಿತರರ ಸಚಿವರು, ಜಿಲ್ಲಾಡಳಿತಕ್ಕೆ ಮನವಿ ಮಾಡುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ನರಸಿಂಹ, ಮಾದೇವ, ಶ್ರೀನಿವಾಸ್, ಎಂ.ವಡಿವೇಲು, ಜಿ.ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಜೂ.29, ಜೆಕೆ ಟೈರ್ಸ್ ವಿರುದ್ಧ ಪತ್ರ ಚಳುವಳಿ

ಮೈಸೂರು, ಜೂ.26(ಜಿಎ)–ಮೈಸೂರಿನ ಜೆ.ಕೆ.ಟೈರ್ಸ್ ಆಡಳಿತ ಮಂಡಳಿಯು ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ, ಬದಲಿ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ವಜಾಗೊಳಿಸುತ್ತಿರುವುದನ್ನು ಖಂಡಿಸಿ ಜೂ.29ರಂದು ಪತ್ರ ಚಳುವಳಿ ನಡೆಸಲಾಗುತ್ತದೆ ಎಂದು ಬದಲಿ ಮತ್ತು ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್.ಚಂದ್ರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಗಾಂಧಿ ಚೌಕದಲ್ಲಿ ಪ್ರತಿಭಟನೆ ಮಾಡಿ ನಂತರ ಅಶೋಕ ರಸ್ತೆಯಲ್ಲಿರುವ ಪ್ರಧಾನ ಅಂಚೆ ಕಚೇರಿ ಮುಂಭಾಗವಿರುವ ಅಂಚೆ ಪೆಟ್ಟಿಗೆಯಲ್ಲಿ ಕಾರ್ಮಿಕ ಸಚಿವರಿಗೆ ಪತ್ರ ಕಳುಹಿಸುವ ಮೂಲಕ ಪತ್ರ ಚಳುವಳಿ ಮಾಡಲಾಗುತ್ತದೆ ಎಂದರು.

ಕಂಪನಿಯು ಬದಲಿ ಕಾರ್ಮಿಕರನ್ನು ಏಕಾಏಕಿ ವಜಾಗೊಳಿಸಿರುವುದನ್ನು, ತರಬೇತಿ ನೀಡದೇ ಅಪಾಯಕಾರಿ ಕೆಲಸಗಳಿಗೆ ನಿಯೋಜಿಸುವುದನ್ನು ವಿರೋಧಿಸಿ ಈ ಪ್ರತಿಭಟನೆ ಮಾಡಲಾಗುತ್ತದೆ. ಈ ವಿಷಯ ಕುರಿತು ರಾಜ್ಯ ಕಾರ್ಮಿಕ ಸಚಿವರು ಮಧ್ಯ ಪ್ರವೇಶಿಸಬೇಕೆಂದು ಕೋರಿ ಅವರಿಗೆ ಅಂಚೆ ಪತ್ರಗಳನ್ನು ಕಳುಹಿಸುತ್ತಿದ್ದೇವೆ. ಅಂದು ಸುಮಾರು 150 ಮಂದಿ ಬದಲಿ ಕಾರ್ಮಿಕರು ಚಳುವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಎ.ಎಸ್.ಶಿಲ್ಪಾಗೆ ಪಿಎಚ್.ಡಿ ಪದವಿ



ಮೈಸೂರು, ಜೂ. 26– ಡಾ. ಸತೀಶ್‌ಕುಮಾರ್ ಮುರಾರಿ ಅವರ ಮಾರ್ಗದರ್ಶನದಲ್ಲಿ ಎ.ಎಸ್.ಶಿಲ್ಪಾ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಿಜೆಎಸ್‌ನಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಭಾರತೀಯ ಜೈನ ಸಂಘಟನೆ, ಮೈಸೂರು ಚಾಪ್ಟರ್ ವತಿಯಿಂದ ಮೈಸೂರಿನ ಚಿಲ್ಡ್ರನ್ಸ್ ಪಾರ್ಕ್‌ನಲ್ಲಿ ಯೋಗ ತರಬೇತುದಾರರಾದ ಶ್ರೀಮತಿ ರಚನಾ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಬಿಜೆಎಸ್ ಮೈಸೂರು ಚಾಪ್ಟರ್ ಅಧ್ಯಕ್ಷ ರಾಜನ್ ಬಾಗ್‌ಮಾರ್, ಖಜಾಂಚಿ ಮನೋಹರ್ ಸಂಕ್ಲಾ, ಉಪಾಧ್ಯಕ್ಷ ಅಮಿತ್ ಚೌಹಾಣ್ ಮತ್ತು ಕುಶಾಲ್ ಪಾಲರೇಚಾ, ಕಾರ್ಯದರ್ಶಿಗಳಾದ ರಾಜೇಂದ್ರ ದೇಸರಾಲ, ಸುನೀಲ್ ಪಟ್ವಾ ಮತ್ತು ನವರತನ್ ಪಿಟಾಲಿಯಾ, ಪ್ರಾದೇಶಿಕ ಕಾರ್ಯದರ್ಶಿ ಸುಖ್‌ರಾಜ್ ವಿನಾಯಕಿಯಾ, ಮಹಿಳಾ ಘಟಕದ ಅಧ್ಯಕ್ಷ ಮತ್ತು ಪ್ರಾಜೆಕ್ಟ್ ಡೈರೆಕ್ಟರ್ ಶರ್ಮಿಳಾ ದೋಕಾ, ಕಾರ್ಯದರ್ಶಿ ಸೀಮಾ ಬೋಹ್ರಾ ಮತ್ತು ಅಂಚಲ್ ದೇಸರಾಲ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು.

ಜೂ.29ರಿಂದ ಹವ್ಯಾಸಿ ತಂಡಗಳಿಂದ ನಾಟಕ ಪ್ರದರ್ಶನ

ಮೈಸೂರು,ಜೂ.26(ಎಂಟಿವೈ)– ಮೈಸೂರಿನ ರಂಗಾಯಣದಲ್ಲಿ ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ 2025ದ ಅಂಗವಾಗಿ ಜೂ.29ರಿಂದ ಆ.10ರವರೆಗೆ ಪ್ರತಿ ಭಾನುವಾರ ಹವ್ಯಾಸಿ ತಂಡಗಳಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ರಂಗಾಯಣವು ಹವ್ಯಾಸಿ ರಂಗತಂಡಗಳಿಂದ ನಾಟಕ ಆಹ್ವಾನಿಸಿ, ಸಿಜಿಕೆ ಸ್ಮರಣಾರ್ಥ ಗ್ರೀಷ್ಮ ರಂಗೋತ್ಸವ ನಡೆಸಲಾಗುತ್ತಿದೆ. ಈ ಬಾರಿ 7 ನಾಟಕ ಪ್ರದರ್ಶನಗೊಳ್ಳಲಿದೆ. ಜೂ.19ರಂದು 6 ಗಂಟೆಗೆ ಭೂಮಿಗೀತಾ ಸಭಾಂಗಣದಲ್ಲಿ ಹಿರಿಯ ರಂಗಕರ್ಮಿ ಹೆಚ್.ಜನಾರ್ಧನ್(ಜನ್ನಿ) ರಂಗೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ರಂಗ ಸಮಾಜದ ಸದಸ್ಯ ಹೆಚ್.ಎಸ್.ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜೂ. 29ರಂದು ಸಭಾ ಕಾರ್ಯಕ್ರಮದ ನಂತರ ಸಂಜೆ 6.30ಕ್ಕೆ ರಾಷ್ಟ್ರಕವಿ ಕುವೆಂಪು ರಚನೆಯ 'ಸ್ಮಶಾನ ಕುರುಕ್ಷೇತ್ರ' ನಾಟಕವನ್ನು ಮಂಜುನಾಥ್ ಭ್ಯಾಟೆ ನಿರ್ದೇಶನದಲ್ಲಿ ಮೈಸೂರಿನ ನೇಪಥ್ಯ ರಂಗತಂಡ ಅಭಿನಯಿಸಲಿದೆ. ಜು.6ರಂದು ಸಂಜೆ 6.30ಕ್ಕೆ ಆಂಟನ್ ಚೆಕಾವ್ (ಕನ್ನಡಕ್ಕೆ ಡಿ.ಆರ್. ನಾಗರಾಜ್) ವಾರ್ಡ್ ನಂ.6 ನಾಟಕವನ್ನು ಮೈಮ್ ನಿರ್ದೇಶನದಲ್ಲಿ ಮೈಸೂರಿನ ಜಿಪಿಐಇಆರ್ ತಂಡ ಪ್ರದರ್ಶಿಸಲಿದೆ. ಜು.13ರಂದು ಹೆನ್ರಿಕ್ ಇಬ್ಸನ್ (ಅನು: ಎಸ್.ಸುರೇಂದ್ರನಾಥ್) ಅಹಲ್ಯ ಬಿ.ಡಿ ನಾಟಕವನ್ನು ಯತೀಶ್ ಎನ್.ಕೊಳ್ಳೇಗಾಲ ನಿರ್ದೇಶನದಲ್ಲಿ ವರ್ಕ್‌ಶಾಪ್ ಇನ್ ಮೈಸೂರು ಫಾರ್ ಥಿಯೇಟರ್ ತಂಡ ಅಭಿನಯಿಸಲಿದೆ. ಜು.20ರಂದು ಶ್ರೀನಿವಾಸ ಪ್ರಭು ರಚನೆಯ ಪರಮೇಶಿ ಪ್ರೇಮ ಪ್ರಸಂಗ ನಾಟಕವನ್ನು ರವಿಪ್ರಸಾದ್ ನಿರ್ದೇಶನದಲ್ಲಿ ರಂಗ ವಲ್ಲಿ ತಂಡ ಅಭಿನಯಿಸಲಿದೆ. ಜು.27ರಂದು ಅನಿಕೇತ ಬೋಲೆ (ಕನ್ನಡಕ್ಕೆ ಪ್ರಕಾಶ ಪರ್ವತೀಕರ) ಕಳಸೂತ್ರ ನಾಟಕವನ್ನು ಹೆಚ್.ಎಸ್. ಸುರೇಶಬಾಬು ನಿರ್ದೇಶನದಲ್ಲಿ ಅಭಿಯಂತರರು ತಂಡ ಪ್ರದರ್ಶಿಸಲಿದೆ.

ಆ.3ರಂದು ಡಾ.ರಾಜಪ್ಪ ದಳವಾಯಿ ರಚನೆಯ ನಿತ್ಯ ಸಚಿವ ನಾಟಕವನ್ನು ಪ್ರಮೋದ್ ಶಿಗ್ಗಾಂವ್ ವಿನ್ಯಾಸ, ನಿರ್ದೇಶನದಲ್ಲಿ ಮಂಡ್ಯದ ಕರ್ನಾಟಕ ಸಂಘ ಅಭಿನಯಿಸಲಿದೆ. ಆ.10ರಂದು ಅರುಣ್‌ಲಾಲ್ ರಚನೆ, ನಿರ್ದೇಶನದ ಕುಹೂ ನಾಟಕವನ್ನು ಕೇರಳದ ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್ ತಂಡ ಪ್ರದರ್ಶನ ನೀಡಲಿದೆ. ಪ್ರತಿ ಭಾನುವಾರ ಸಂಜೆ 6.30ಕ್ಕೆ ಭೂಮಿಗೀತದಲ್ಲಿ ನಾಟಕಗಳು ಪ್ರದರ್ಶನಗೊಳ್ಳಲಿವೆ. ಟಿಕೆಟ್ ದರ 100 ರೂ. ಹವ್ಯಾಸಿ ಕಲಾತಂಡಗಳಿಗೆ ಎಲ್ಲ ಸೌಕರ್ಯ ಕಲ್ಪಿಸುತ್ತೇವೆ. ಟಿಕೆಟ್ ಹಣ ನೀಡುತ್ತೇವೆ ಎಂದರು. ಗೋಷ್ಠಿಯಲ್ಲಿ ರಂಗ ಸಮಾಜದ ಸದಸ್ಯ ಹೆಚ್.ಎಸ್.ಸುರೇಶ್‌ಬಾಬು, ರಂಗೋತ್ಸವ ಸಂಚಾಲಕ ಅರಸೀಕೆರೆ ಯೋಗಾನಂದ ಇದ್ದರು.

ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ



ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಸದಸ್ಯರು ಕುವೆಂಪುನಗರದ ಕಾರ್ಮಿಕ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.26(ಜಿಎ)–ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಸದಸ್ಯರು ಕುವೆಂಪುನಗರದ ಕಾರ್ಮಿಕ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರವು ಕಾರ್ಪೊರೇಟ್ ಬಂಡವಾಳಶಾಹಿ ಪರವಾಗಿ ನಿಯಮಗಳನ್ನು ಬದಲಾಯಿಸುತ್ತಿರುವುದು ಅಪಾಯಕಾರಿ. ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಲು ಮುಂದಾಗಿರುವುದು ಕಾರ್ಮಿಕ ವಿರೋಧಿ ನಡೆ. ಇದರಿಂದ ಕಾರ್ಮಿಕರ ಮೇಲಿನ ಒತ್ತಡ ಹೆಚ್ಚುತ್ತದೆ. ಅಪಾಯಕಾರಿ ಕೆಲಸಗಳಲ್ಲಿ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅನುಕೂಲವಾಗುವ ರೀತಿಯ ಬದಲಾವಣೆ ತರಲು ಸರ್ಕಾರ ನಿರ್ಧರಿಸಿರುವುದು ಆತಂಕಕಾರಿ ಬೆಳವಣಿಗೆ. ಇದನ್ನು ಕಾರ್ಮಿಕ ಸಂಘಟನೆಗಳು ಖಂಡಿಸುತ್ತಿದ್ದು, ಕಾರ್ಮಿಕರ ಪರವಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾರ್ಪೊರೇಟ್ ವ್ಯವಸ್ಥೆಯಲ್ಲಿ ಕಾರ್ಮಿಕರನ್ನು ಕಡೆಗಣಿಸಲಾಗುತ್ತಿದೆ. ರಾಜ್ಯದಲ್ಲಿ ಈ ವ್ಯವಸ್ಥೆ ಬಂದರೆ, ಕಾರ್ಮಿಕ ಮತ್ತಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ. ಸರ್ಕಾರವು ತನ್ನ ನಿರ್ಧಾರದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಬೇಡಿಕೆ ಈಡೇರದಿದ್ದರೆ ರಾಜ್ಯಾದ್ಯಂತ ಹೋರಾಟ ಸಂಘಟಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆ ನಂತರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕಾರ್ಮಿಕ ಅಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿ ರಾವ್, ಜಿ.ಜಯರಾಂ, ಮಹದೇವ, ರಾಘವೇಂದ್ರ, ಸುಬ್ರಹ್ಮಣ್ಯ ಪಾಲ್ಗೊಂಡಿದ್ದರು.

ದೇವನಹಳ್ಳಿಯಲ್ಲಿ ರೈತರ ಬಂಧನ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ದೇವನಹಳ್ಳಿಯಲ್ಲಿ ರೈತರು, ಹೋರಾಟಗಾರರ ಬಂಧನ ಹಾಗೂ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.26(ಜಿಎ)–ದೇವನಹಳ್ಳಿಯಲ್ಲಿ ರೈತರು, ಹೋರಾಟಗಾರರ ಬಂಧನ, ರೈತರ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಳೆದ 1177 ದಿನಗಳಿಂದ ಶಾಂತಿಯುತವಾಗಿ ಬಲವಂತದ ಭೂಸ್ವಾಧೀನದ ವಿರುದ್ಧ ದೇವನಹಳ್ಳಿಯ 13 ಗ್ರಾಮಗಳ ರೈತರು ನಡೆಸಿದ ವಿವಿಧ ಮಾದರಿ ಹೋರಾಟಕ್ಕೆ ಸರಕಾರ ಕಿವಿಕೊಡದ ಕಾರಣದಿಂದಾಗಿ ಪ್ರತಿಭಟನೆ ನಡೆಸಲಾಗುತ್ತಿತ್ತು. ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಹತ್ತಾರು ಸಂಘಟನೆಗಳ ಸಾವಿರಾರು ಜನ ಸೇರಿದ್ದರು. ಸರ್ಕಾರದಿಂದ ಭೂ ಸ್ವಾಧೀನದ ಆದೇಶ ಹಿಂತೆಗೆದುಕೊಳ್ಳುವವರೆಗೂ ಪ್ರತಿಭಟನೆ ಮುಂದುವರೆಸುವ ತೀರ್ಮಾನಕ್ಕೆ ಬರಲಾಗಿತ್ತು. ಇಡೀ ದಿನ ಶಾಂತಿಯುತವಾಗಿ ನಡೆದ ಹೋರಾಟದ ವೇದಿಕೆಗೆ ಸಂಜೆಯ ವೇಳೆಗೆ ಏಕಾಏಕಿ ನುಗ್ಗಿದ ಪೊಲೀಸರು 5 ಗಂಟೆಯ ನಂತರ ಪ್ರತಿಭಟನೆಗೆ ಅವಕಾಶವಿಲ್ಲ, ಪಟ್ಟಣದಲ್ಲಿ ಪ್ರತಿಭಟನೆ ಮಾಡುವಂತಿಲ್ಲ ಎಂದು ಪ್ರತಿಭಟನಾಕಾರರನ್ನು ಎಳೆದಾಡಿ ಬಂಧಿಸಿದ ರೀತಿ ಖಂಡನೀಯ ಎಂದು ಕಿಡಿಕಾರಿದರು.

ಸರಕಾರದ ರೈತ ವಿರೋಧಿ, ಸಂವಿಧಾನದ ಹಕ್ಕುಗಳ ವಿರೋಧಿ, ಭೂಸ್ವಾಧೀನ ನೀತಿಗಳನ್ನು ಯಾವುದೇ ಕಾರಣಕ್ಕೂ ಮುಂದುವರೆಸಬಾರದು. ಫಲವತ್ತಾದ ಭೂಮಿಯಲ್ಲಿ ತಮ್ಮ ಬದುಕು ಕಂಡುಕೊಂಡ ಯಾವುದೇ ರೈತರ ತಂಟೆಗೆ ಬರಬೇಡಿ. ರೈತರ ಭೂಮಿ ರೈತರದ್ದೇ ಆಗಿ ಉಳಿಸಬೇಕು. ಬೇಷರತ್ತಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕು. ರೈತರ ಭೂಮಿಯನ್ನು ಸರ್ಕಾರದ ಯಾವುದೇ ಯೋಜನೆಗೆ ನೀಡಬಾರದು. ಕೂಡಲೇ ಕ್ಯಾಬಿನೆಟ್ ನಿರ್ಣಯ ಮಾಡಬೇಕು. ಬಂಧಿತ ಹೋರಾಟಗಾರರ ವಿರುದ್ಧ ಯಾವುದೇ ಪ್ರಕರಣ ದಾಖಲಿಸದೇ ಬೇಷರತ್ ಬಿಡುಗಡೆ ಮಾಡಬೇಕು. ವೈಯಕ್ತಿಕವಾಗಿ ಸಂಘಟನಾತ್ಮಕವಾಗಿ ಆಗಿರುವ ಅನಾಹುತವನ್ನು ಸರಕಾರವೇ ತುಂಬಿಕೊಡಬೇಕು. ಅಮಾನವೀಯವಾಗಿ ದೌರ್ಜನ್ಯ ಎಸಗಿದ ಪೊಲೀಸರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ಇನ್ನೆಂದೂ ಹೋರಾಟವನ್ನು ಮುರಿಯುವ ಅಸಾಂವಿಧಾನಿಕ ಕೆಲಸ ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಪಿ.ಮರಂಕಯ್ಯ, ಸಿದ್ದಪ್ಪ, ಹೆಜ್ಜಿಗೆ ಪ್ರಕಾಶ್, ಆನಂದೂರು ಪ್ರಭಾಕರ್, ವಿಜಯೇಂದ್ರ, ಪ್ರೇಮರಾಜ್, ಕಾರ್ಮಿಕ ಮುಖಂಡರಾದ ಬಾಲಾಜಿ ರಾವ್, ಜಿ.ಜಯರಾಂ, ರಾಜೇಂದ್ರ, ಬಸವಯ್ಯ, ಜಗನ್ನಾಥ್, ಶಾಕುಂತಲ, ಚಂದ್ರಶೇಖರ್, ಬಸವರಾಜ್, ಭೂಮಿಗೌಡ, ರತಿರಾವ್, ನೆಲೆ ಗೋಪಾಲ್, ಕರುಣಾಕರ್, ಬಾಬುರಾಜ್, ವಿದ್ಯಾರ್ಥಿ ಮುಖಂಡರಾದ ವಿಜಯ್ ಕುಮಾರ್, ಚಿರಾಗ್ ಪಾಲ್ಗೊಂಡಿದ್ದರು.

ಡಾ.ಮಹದೇವಪ್ಪ, ಡಾ.ತಿಮ್ಮಯ್ಯ ವಿರುದ್ಧ ಹೇಳಿಕೆಗೆ ಖಂಡನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಆದಿಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ನಿಂಗರಾಜ್ ಮಾತನಾಡಿದರು.

ಮೈಸೂರು, ಜೂ.26(ಜಿಎ)–ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಭಾಸ್ಕರ್‌ಪ್ರಸಾದ್ ನೀಡಿರುವ ಹೇಳಿಕೆಯನ್ನು ಖಂಡಿಸಿರುವ ರಾಜ್ಯ ಆದಿಜಾಂಬವ ಸಂಘವು ಇದನ್ನು ಮುಂದುವರೆಸಿದರೆ ಪ್ರತಿಭಟಿಸುವುದಾಗಿ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್ ಮಾತನಾಡಿ, ಸಾಮಾಜಿಕ ಹೋರಾಟ ಮಾಡುವವರಿಗೆ ಸಾಮಾನ್ಯ ತಿಳುವಳಿಕೆ, ಸುಸಂಸ್ಕೃತಿ ನಡೆ, ಒಳ್ಳೆಯ ಭಾಷೆ ಬಳಕೆ ಹಾಗೂ ಆರೋಗ್ಯಕರ ಟೀಕೆ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣ. ಆದರೆ, ಒಳ ಮೀಸಲಾತಿ ಬಗ್ಗೆ ಹೋರಾಟ ಮಾಡುವ ನೆಪದಲ್ಲಿ ನಮ್ಮ ಸಮುದಾಯದ ಏಳಿಗೆಗಾಗಿ ದುಡಿಯುತ್ತಿರುವ ಹಿರಿಯ ನಾಯಕರೂ ಆಗಿರುವ ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ ಅವರನ್ನು ಕುಲಕಂಟಕ ಎಂಬ ಅಸಂಸ್ಕೃತ ಪದ ಬಳಕೆ ಮಾಡುವ ಮೂಲಕ ಭಾಸ್ಕರ್ ಪ್ರಸಾದ್ ಅವಿವೇಕ ಪ್ರದರ್ಶಿಸಿದ್ದಾರೆ ಎಂದು ಕಿಡಿಕಾರಿದರು.

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಹಾಗೂ ತಿಮ್ಮಯ್ಯ ಅವರ ಕಣ್ಣಲ್ಲಿ ನೀರಲ್ಲ ರಕ್ತ ಬರಿಸುತ್ತೇನೆಂದು ನೀಡಿರುವ ಹೇಳಿಕೆ ಖಂಡನೀಯ. ವಿರೋಧ ಪಕ್ಷದ ಕುಮ್ಮಕ್ಕಿನಿಂದ ಭಾಸ್ಕರ್ ಪ್ರಸಾದ್ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾರೆ. ಈ ಹಿಂದೆ ಬಿಜೆಪಿ, ಜೆಡಿಎಸ್ ಸರ್ಕಾರವಿದ್ದಾಗ ಇವರು ಒಳ ಮೀಸಲಾತಿಯ ಬಗ್ಗೆ ಧ್ವನಿ ಎತ್ತಲಿಲ್ಲ. ಆದರೆ, ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳ ಮೀಸಲಾತಿ ಜಾರಿಗೊಳಿಸುತ್ತೇವೆಂದು ನ್ಯಾ.ನಾಗಮೋಹನ್ ದಾಸ್ ಏಕಸದಸ್ಯ ಆಯೋಗ ನೇಮಿಸಿ, ದತ್ತಾಂಶ ಸಂಗ್ರಹ ಪ್ರಕ್ರಿಯೆ ಆರಂಭಿಸುವಾಗ ಇದ್ದಕ್ಕಿದ್ದಂತೆ ಹೋರಾಟ ಆರಂಭಿಸುವ ಮೂಲಕ ಸಮುದಾಯದ ದಿಕ್ಕು ತಪ್ಪಿಸುತ್ತಿದ್ದಾರೆ. ಹೀಗೆ ಸಮುದಾಯದ ನಾಯಕರ ವಿರುದ್ಧ ಮಾತನಾಡಿದರೆ ಸಮುದಾಯದವರು ಒಗ್ಗೂಡಿ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್.ರಾಚಯ್ಯ, ರಾಚಪ್ಪ ಸಿ.ಜೆಟ್ಟಿಹುಂಡಿ, ಶೇಖರ್ ಮಾರ್ಬಳ್ಳಿ, ದೇವರಾಜು, ಎಂ.ಎಸ್.ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.


ಕಾಫಿ ತೋಟದಲ್ಲಿ ಹೆಣ್ಣಾನೆ ಕಳೇಬರ ಪತ್ತೆ

ಸುಂಟಿಕೊಪ್ಪ, ಜೂ.26– ಕಂಬಿಬಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅತ್ತೂರು ನಲ್ಲೂರು ಅರಣ್ಯ ಪ್ರದೇಶಕ್ಕೆ ಸೇರಿದ ತೋಟದಲ್ಲಿ ಹೆಣ್ಣಾನೆಯ ಕಳೇಬರ ಪತ್ತೆಯಾಗಿದೆ.

ಸುಮಾರು 18ರಿಂದ 20 ವರ್ಷ ಪ್ರಾಯವಾಗಿದ್ದು, ಕಾಫಿ ತೋಟದಲ್ಲಿ ಈ ಹೆಣ್ಣಾನೆ ಸತ್ತು ಬಿದ್ದಿದೆ. ಮೇಲ್ನೋಟಕ್ಕೆ ಕಾಡಾನೆಗಳ ನಡುವಿನ ಕಾದಾಟದಲ್ಲಿ ಹೆಣ್ಣಾನೆ ಮೃತಪಟ್ಟಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದ್ದರೂ ಮರಣೋತ್ತರ ಪರೀಕ್ಷೆ ಬಳಿಕ ನಿಖರ ಕಾರಣ ತಿಳಿದು ಬರಬೇಕಿದೆ. ರಾತ್ರಿ ಈ ಘಟನೆ ನಡೆದಿದ್ದು, ಆನೆಗಳು ಘೀಳಿಡುವ ಶಬ್ದ ರಾತ್ರಿಯಿಡೀ ಕೇಳಿ ಬಂದಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷವರ್ಧನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಸಾಧಕರಿಗೆ ಬಸವ ಭೂಷಣ ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಬಸವ ಭೂಷಣ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮೈಸೂರು, ಜೂ.26(ಜಿಎ)–ಬಸವೇಶ್ವರರಂತಹ ಒಬ್ಬರೇ ಒಬ್ಬ ಮಹನೀಯರು ಹೇಳಿದ ಮಾತನ್ನು ಅನುಸರಿಸಿದರೂ ಸಮಾಜ ಸುಧಾರಣೆ ಸಾಧ್ಯವಾಗುತ್ತದೆ ಎಂದು ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ನಟರಾಜ ಜೋಯ್ಸ್ ಅಭಿಪ್ರಾಯಪಟ್ಟರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಬಸವ ಜಯಂತಿ, ಗುರುವಂದನೆ ಹಾಗೂ ಬಸವ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ನಿತ್ಯ ಮಕ್ಕಳಿಗೆ ಬಸವಣ್ಣ ಅವರ ಭಾವಚಿತ್ರಗಳನ್ನು ತೋರಿಸಿ ಅವರ ಮಾತಿನ ಒಂದೇ ಸಾಲನ್ನು ಹೇಳಿದರೂ ಅವರು ದಾರಿ ತಪ್ಪುವುದಿಲ್ಲ ಎಂದು ಹೇಳಿದರು.

ಸಮಾಜ ಉದ್ಧಾರ ಆಗಬೇಕಾದಲ್ಲಿ ಶಂಕರಾಚಾರ್ಯ, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಅಂತಹವರ ನೀತಿಯನ್ನು ಮಕ್ಕಳಿಗೆ ತಿಳಿಹೇಳಬೇಕು. ಇಂದು ದೇವಸ್ಥಾನಗಳು ದುಡ್ಡಿನ ದೇವಸ್ಥಾನಗಳಾಗಿವೆ. ಎಲ್ಲರೂ ಹೋಗಿ ಹಣ ಹಾಕುತ್ತಾರೆ. ಆದರೆ ಮನೆಯೇ ದೇವಸ್ಥಾನವಾಗಬೇಕಾದ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಬಂದಿಗೆಗೌಡ(ಶಿವರಾಜು), ಪ್ರಸನ್ನ ಮೋಹನ ಮಡಿವಾಳ, ಗೋಪಾಲ್, ಆರ್.ಕೆ.ಸ್ವಾಮಿ, ಮಲ್ಲರಾಜೇ ಅರಸ್ ಅವರಿಗೆ ಬಸವ ಭೂಷಣ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಶಿವಾರ್ಚಕ ಸಂಘದ ಅಧ್ಯಕ್ಷ ಅಂಬಳೆ ಶಿವಣ್ಣ, ನಿವೃತ್ತ ಪ್ರಾಚಾರ್ಯ ಡಾ.ಸುನಂದ ಭೂಪಾಳಿ, ಗೋಲ್ಡನ್ ಟಿ.ಸುರೇಶ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.26– ಜೂನ್ 28 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಿ.ವಿ.ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಗೋಕುಲಂ



1ನೇ ಮತ್ತು 2ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿಪುರಂ, ಆಕಾಶವಾಣಿ, ಇಎಸ್ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೆ, ಆದಿಪಂಪ ರಸ್ತೆ, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗ ನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಬಾರ್ ಬೇ, ಸಿಎಸ್ಆರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನೀಟ್‌ನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿನಿಗೆ ಶಾಸಕರಿಂದ ಸನ್ಮಾನ



ಮಡಿಕೇರಿ,ಜೂ.26– ರಾಷ್ಟ್ರೀಯ ಅರ್ಹತಾ ಮತ್ತು ನೀಟ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 84ನೇ ರ್‍ಯಾಂಕ್ ಹಾಗೂ ಕರ್ನಾಟಕ ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದು ಸಾಧನೆ ಮಾಡಿದ ಸೋಮವಾರಪೇಟೆ ತಾಲೂಕಿನ ಚೌಡ್ಲು ಗ್ರಾಮದ ವಿದ್ಯಾರ್ಥಿನಿ ಕೆ.ಜಿ.ನಿಧಿ ಅವರನ್ನು ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ನಿಧಿ ಪೋಷಕರಾದ ಕೆ.ಎಚ್.ಗಣಪತಿ, ಗುಣವತಿ, ಚೌಡ್ಲು ಗ್ರಾಮ ಪಂಚಾಯಿತಿ ಸದಸ್ಯ ಎಸ್.ಐ ಚೇತನ್, ಸೋಮವಾರಪೇಟೆ ಯುವ ಕಾಂಗ್ರೆಸ್ ಅಧ್ಯಕ್ಷ ಕಿರಣ್ ಡಿ.ಯು ಉಪಸ್ಥಿತರಿದ್ದರು.

ಕಣ್ಣಿನ ತಪಾಸಣೆ ಶಿಬಿರ

ವಿರಾಜಪೇಟೆ, ಜೂ.26– ವಿರಾಜಪೇಟೆ ಕೊಡವ ಸಮಾಜ ಹಾಗೂ ಗೋಣಿಕೊಪ್ಪ ಲೋಪಾಮುದ್ರ ದೃಷ್ಟಿ ಕಣ್ಣಿನ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಕೊಡವ ಸಮಾಜದ ಆವರಣದಲ್ಲಿ 'ಕಣ್ಣಿನ ತಪಾಸಣೆ ಶಿಬಿರ'ವನ್ನು ಆಯೋಜಿಸಲಾಗಿತ್ತು. ವಿರಾಜಪೇಟೆ ಸುತ್ತಮುತ್ತಲಿನ ಗ್ರಾಮಸ್ಥರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಈ ವೇಳೆ ಕೊಡವ ಸಮಾಜದ ಅಧ್ಯಕ್ಷ ಕುಂಬೆರ ಮನುಕುಮಾರ್, ಸಹ ಕಾರ್ಯದರ್ಶಿ ಮಳೇಟಿರ ಶ್ರೀನಿವಾಸ್ ಮತ್ತು ಆಡಳಿತ ಮಂಡಳಿ ಸದಸ್ಯರು, ಲೋಪಾಮುದ್ರ ಕಣ್ಣಿನ ಆಸ್ಪತ್ರೆ ವೈದ್ಯೆ ಡಾ.ಸೌಮ್ಯ ಗಣೇಶ್ ನಾಣಯ್ಯ ನೇತೃತ್ವದಲ್ಲಿ ಎಂ.ಕೆ.ಹರ್ಶೀತ್, ರವಿಕುಮಾರ್ ಮತ್ತು ಸಿಬ್ಬಂದಿ ಹಾಜರಿದ್ದರು. ನೂರಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು.



ಮಹಿಳಾ ಪ್ರಯಾಣಿಕರಿಗೆ ಶಕ್ತಿ ಯೋಜನೆ ಅನ್ವಯ

ಮೈಸೂರು,ಜೂ.26–ಆಷಾಢ ಮಾಸದ ಶುಕ್ರವಾರ, ಶನಿವಾರ ಹಾಗೂ ಭಾನುವಾರಗಳಂದು ಭಕ್ತಾದಿಗಳು ಮೈಸೂರು ನಗರ ನಿಲ್ದಾಣದಿಂದ ಚಾಮುಂಡಿಬೆಟ್ಟಕ್ಕೆ ನಿಗಮದ ವಾಹನಗಳಲ್ಲಿ ಟಿಕೆಟ್ ಪಡೆದು ಪ್ರಯಾಣಿಸಲು ಕೋರಲಾಗಿದೆ. ಮಹಿಳಾ ಪ್ರಯಾಣಿಕರಿಗೆ ಶಕ್ತಿ ಯೋಜನೆಯು ಅನ್ವಯಿಸುತ್ತದೆ. ಆಧಾರ್ ಕಾರ್ಡ್, ಗುರುತಿನ ಚೀಟಿ ತೋರಿಸಿ ಮಹಿಳಾ ಟಿಕೆಟ್ ಪಡೆದು ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.06.2025 ಶುಕ್ರವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ, ರಾಜ್ಯ ಒಕ್ಕಲಿಗರ ಸಂಘ ಮತ್ತು ಎಲ್ಲಾ ಒಕ್ಕಲಿಗ ಸಂಘ ಸಂಸ್ಥೆಗಳು :** ನಾಡಪ್ರಭು ಕೆಂಪೇಗೌಡರ 516ನೇ ಜಯಂತ್ಯುತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ, ಸ್ಥಳ: ಕೆಂಪೇಗೌಡ ವೃತ್ತ, ಆಲನಹಳ್ಳಿ, ಬೆಳಗ್ಗೆ 9.30ಕ್ಕೆ ಕೆಂಪೇಗೌಡರ ಪ್ರತಿಮೆ ಮೆರವಣಿಗೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ, ಬೆಳಗ್ಗೆ ನವಗ್ರಹ ಮೃತ್ಯುಂಜಯ ಹೋಮ, ಶ್ರೀ ಕಾಲಭೈರವ ಹೋಮ, ಸ್ಥಳ: ಚಾರಿಟಬಲ್ ಟ್ರಸ್ಟ್ ಆವರಣ, ವಾಣಿ ವಿಲಾಸ ಮೊಹಲ್ಲಾ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30 ರಿಂದ.

■ **ಅಭಿನವ ಶಂಕರಾಲಯ, ಶಂಕರ ಮಠ :** ಆಷಾಢ ಶುಕ್ರವಾರಗಳ ವಿಶೇಷ ಪೂಜಾ ಮಹೋತ್ಸವ, ಶ್ರೀ ಗಜಲಕ್ಷ್ಮೀ ಅಲಂಕಾರ, ಬೆಳಗ್ಗೆ 10ಕ್ಕೆ ಶ್ರೀ ಮಹಾಗಣಪತಿ ಹೋಮ, ನವಗ್ರಹ, ಮೃತ್ಯುಂಜಯ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, 12.30ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ, ಸಂಜೆ 5ಕ್ಕೆ 108 ಮಾತೆಯರಿಂದ ಲಲಿತಾ ಸಹಸ್ರನಾಮ ಕುಂಕುಮಾರ್ಚನೆ, ಸಂಜೆ 6.30 ರಿಂದ ವಿದ್ವಾನ್ ಕೆ.ಪಿ. ಪ್ರಣವ್ ಮತ್ತು ವೃಂದದವರಿಂದ ವೇಣುವಾದನ, ರಾತ್ರಿ 9.30ಕ್ಕೆ ಪ್ರಾಕಾರೋತ್ಸವ, ಮಹಾಮಂಗಳಾರತಿ ಅಷ್ಟಾವಧಾನ ಸೇವೆ, ಸ್ಥಳ: ಅಭಿನವ ಶಂಕರಾಲಯ, ಶಂಕರ ಮಠ.

■ **ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ :** ಜಗನ್ನಾಥ, ಬಾಲಭದ್ರ, ದೇವಿ ಸುಭದ್ರ, ಸುದರ್ಶನ ಮತ್ತು ಚಕ್ರರಾಜ ರಥಯಾತ್ರೆ, ಶ್ರೀ ಗುಂಡಿಚಾ ಜಾತ್ರಾ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ವಿದ್ಯಾರಣ್ಯಪುರಂ ಸೆಂಟ್ರಲ್ ಲೈಬ್ರರಿ ಪಾರ್ಕ್, ಮಧ್ಯಾಹ್ನ 2 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ.ಎನ್. ಚಿಕ್ಕಮಾದು, ಪ್ರಸ್ತುತಿ: ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸಿ. ವಿಶ್ವನಾಥ್ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿವಯೋಗ ಸಂದೇಶ ಸುತ್ತೂರು ಮಹಾಸಂಸ್ಥಾನದ ಶ್ರೀ ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳಿಂದ, 8.50 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಮಕ್ಕಳ ಬೆಳವಣಿಗೆಯ ಹಂತದಲ್ಲಿ ಕಂಡುಬರುವ Nuro Developmental Disorders ಕುರಿತು ಡಾ. ಭಾಗ್ಯವತಿ ಎಚ್.ಡಿ. ಅವರೊಂದಿಗೆ ಮಾತುಕತೆ ಮತ್ತು ಗೃಹ ಆರೋಗ್ಯ ಯೋಜನೆ ಕುರಿತು ಡಾ. ಮಲ್ಲಿಕಾ ಬಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ.ವಿ. ಶಂಕರ ನಾರಾಯಣನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್.ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ಕಾರ್ತಿಕ್–ವೈಯೋಲಿನ್ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮತ್ತು ಪ್ಲೇಸ್‌ಮೆಂಟ್ ಸೆಲ್‌ಗಳ ಪ್ರಾಮುಖ್ಯತೆ ಕುರಿತು ಕಾಲೇಜು ಶಿಕ್ಷಣ ಇಲಾಖೆಯ ವೃತ್ತಿಮಾರ್ಗದರ್ಶನ ವಿಭಾಗದ ನೋಡಲ್ ಅಧಿಕಾರಿಯಾಗಿದ್ದ ಪ್ರೊಫೆಸರ್ ಎ. ನಾರಾಯಣ ಪ್ರಸಾದ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ, ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯಾರಾಗ– ಸಾವಯವ ಕೃಷಿ ನಡೆಸುತ್ತಿರುವ ಹಿರಿಯರಾದ ಎಂ.ಆರ್. ಹರೀಶ್ ಮತ್ತು ಅವರ ಪತ್ನಿ ಶ್ರೀಮತಿ ಸರೋಜಾ ಹರೀಶ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ವಿಜಯ್ ಶಿವ – ಹಾಡುಗಾರಿಕೆ, 10.00 ಜನಪದ ಸಂಗೀತ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ :** 33ನೇ ವರ್ಷದ ಜಾತ್ರಾ ಮಹೋತ್ಸವ, ಅಮ್ಮನವರ ಜೋಡಿ ಹೂವಿನ ಕರಗ ಮಹೋತ್ಸವ, ವಿಶೇಷ ಆಹ್ವಾನಿತರು : ಶ್ರೀ ವಿದ್ಯಾಶಂಕರಾನಂದ ಸರಸ್ವತಿ, ಸಂಜೆ 6 ಗಂಟೆಗೆ ಹಸಿರು ಚಪ್ಪರ, ರಾಶಿ ಪೂಜೆ, ಸಂಜೆ 7.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ, ಕೊತ್ವಾಲ್ ರಾಮಯ್ಯ ರಸ್ತೆ.

■ **ಎಚ್.ವಿ. ರಾಜೀವ್ ಸ್ನೇಹ ಬಳಗ :** ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ 1000 ಔಷಧಿ ಗಿಡಗಳನ್ನು ವಿತರಿಸುವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಡಾ. ಅನಿಲ್ ಕುಮಾರ್ ದೀಕ್ಷಿತ್, ಪೊಲೀಸ್ ನಿರೀಕ್ಷಕ ಡಿ. ಯೋಗೀಶ್ವರ್, ಎಸ್. ಬಾಲು, ಸ್ಥಳ: ಶ್ರೀ ಆದಿಶಕ್ತಿ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ, ಕುವೆಂಪುನಗರ, ಸಂಜೆ 5.45ಕ್ಕೆ

■ **ದಿ ಚಾನೆಲ್ ಥಿಯೇಟರ್ ಪಾಂಡವಪುರ :** ರಂಗಕರ್ಮಿ, ರಾಜ್ಯ ಪ್ರಶಸ್ತಿ ವಿಜೇತ ನಟಿ ಅಕ್ಷತಾ ಪಾಂಡವಪುರ ಅವರ 'ಲೀಕ್‌ಔಟ್' ನಾಟಕ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ

ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ವರುಣ ಕ್ಷೇತ್ರದ ಬಿಜೆಪಿ ಮುಖಂಡ ಸದಾನಂದ ಅವರನ್ನು ವರುಣ ಹೋಬಳಿ ಜೆಡಿಎಸ್ ಮುಖಂಡರಾದ ಬಾಬು ಪಿ.ಕುಪ್ಪೇಗಾಲ, ನಾಡನಹಳ್ಳಿ ಮಧುಸೂದನ್, ರಮೇಶ್ ಇನ್ನಿತರರು ಅಭಿನಂದಿಸಿದರು.



ಎಂಸಿಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಶಾಸಕ ಜಿ.ಡಿ. ಹರೀಶ್‌ಗೌಡ ಅವರನ್ನು ಜಯಪುರ ದೊಡ್ಡ ಪ್ರಮಾಣದ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕ ಮಾವಿನಹಳ್ಳಿ ಅಭಿಷೇಕ್ ಅಭಿನಂದಿಸಿದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಉಪಸ್ಥಿತರಿದ್ದರು.

ಕರಾಟೆಪಟುಗಳಿಗೆ ಸನ್ಮಾನ



ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದ ಶೋಟೋಕಾನ್ ಕರಾಟೆ ಶಾಲೆಯ ಕರಾಟೆಪಟುಗಳನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.26(ಜಿಎ)– ಇತ್ತೀಚೆಗೆ ಚೆನ್ನೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದ ನಗರದ ಶೋಟೋಕಾನ್ ಕರಾಟೆ ಶಾಲೆಯ ಕರಾಟೆ ಪಟುಗಳಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲಯನ್ಸ್ ಗೋಲ್ಡನ್ ಸಿಟಿ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಬಹು ಪರಿಷತ್ ಅಧ್ಯಕ್ಷ ಡಾ.ಎನ್.ಕೃಷ್ಣೇಗೌಡ, ಕರಾಟೆಪಟುಗಳಾದ ಎನ್.ಯೋಗೇಶ್, ಡಿ.ಚೆಲುವರಾಜು, ಪ್ರೀತಮ್ ಚಕ್ರವರ್ತಿ, ಸಿ.ಸಹನ, ಸಿ.ಲಾವಣ್ಯ, ಎನ್.ಭವ್ಯಶ್ರೀ, ಸೌಜನ್ಯ, ಎನ್.ಸುಧೀರ್ ವೈ.ಧರಣಿ, ವೈ.ಮಧುನಿಶ ಅವರನ್ನು ಅಭಿನಂದಿಸಿದರು. ಈ ವೇಳೆ ತರಬೇತುದಾರ ಎನ್.ಯೋಗೇಶ್, ಎನ್.ಸುಧೀರ್, ಎಸ್.ಪ್ರವೀಳ, ಗೋಲ್ಡನ್ ಟಿ.ಸುರೇಶ್ ಉಪಸ್ಥಿತರಿದ್ದರು.

ಶಾಸಕರಿಂದ ಕಾಮಗಾರಿಗೆ ಗುದ್ದಲಿಪೂಜೆ



ಮೈಸೂರು ನಗರದ ಶ್ರೀರಾಂಪುರ 2ನೇ ಹಂತದಲ್ಲಿ ನಿರ್ಮಿಸುತ್ತಿರುವ 48 ಲಕ್ಷ ರೂ. ವೆಚ್ಚದ ಒಳಚರಂಡಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಮಾಜಿ ಕಾರ್ಪೋರೇಟರ್ ಗೀತಾ ಯೋಗಾನಂದ, ಸಮಾಜ ಸೇವಕ ಎಸ್.ಶ್ರೀಕಾಂತ್, ಮುಖಂಡರಾದ ಪುನೀತ್, ವರುಣ ಗಿರೀಶ್, ಇಂಜಿನಿಯರ್ ಧನುಷ್, ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.

ತಾಂಡವಪುರ ಎಂಐಟಿಗೆ ಪಲ್ಸ್ ಸಮ್ಮೇಳನದಲ್ಲಿ ಪ್ರಶಸ್ತಿ



ತಾಂಡವಪುರ ಎಂಐಟಿಗೆ ಸಂದ ಪ್ರಶಸ್ತಿ ಸ್ವೀಕರಿಸುತ್ತಿರುವುದು.

ಮೈಸೂರು,ಜೂ.26– ನಂಜನಗೂಡು ತಾಂಡವಪುರದಲ್ಲಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ(ಎಂಐಟಿ) ಕಾಲೇಜಿನ ತಂಡ, ಮದ್ರಾಸ್ ಐಐಟಿಯಲ್ಲಿ ನಡೆದ ಪಲ್ಸ್(PALS-ಪಾನ್‌ಐಐಟಿ ಅಲುಮಿನಿ ಲೀಡರ್‌ಶಿಪ್ ಸೀರೀಸ್) ವಾರ್ಷಿಕ ಸಮ್ಮೇಳನದಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಪ್ರಶಸ್ತಿಗೆ ಭಾಜನವಾಗಿದೆ.

ಮದ್ರಾಸ್ ಐಐಟಿ ಹಳೆಯ ವಿದ್ಯಾರ್ಥಿಗಳಿಂದ ನಡೆದ ಪಲ್ಸ್ ವಾರ್ಷಿಕ ಸಮ್ಮೇಳನದಲ್ಲಿ ನಡೆದ ವಿವಿಧ ಸ್ಪರ್ಧೆ ಮತ್ತು ಕಾರ್ಯಕ್ರಮಗಳಲ್ಲಿ ತಾಂಡವಪುರ ಎಂಐಟಿಯ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಂಪ್ಯೂಟರ್ ಸೈನ್ಸ್ ಮತ್ತು ಸಿವಿಲ್ ಎಂಜಿನಿಯರಿಂಗ್ ವಿಭಾಗಗಳ ವಿದ್ಯಾರ್ಥಿಗಳು ಪ್ರತಿಷ್ಠಿತ ಸ್ಪರ್ಧೆಗಳಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದರು. ಸಿಎಸ್‌ಇ ವಿಭಾಗದ 2ನೇ ವರ್ಷದ ಇಬ್ಬರು ವಿದ್ಯಾರ್ಥಿಗಳು ಲೀಡರ್‌ಶಿಪ್ ಇಂಟರ್ನ್‌ಶಿಪ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. 30 ಅಧ್ಯಾಪಕರೂ ಕಾರ್ಯಾಗಾರ, ಅಭಿವೃದ್ಧಿ ಕಾರ್ಯಕ್ರಮಗಳು, ಉಪನ್ಯಾಸ ಸರಣಿಗಳಲ್ಲಿ ಭಾಗವಹಿಸಿ, ವೃತ್ತಿಪರ ಅಭಿವೃದ್ಧಿ ಮತ್ತು ಬೋಧನಾ ಶ್ರೇಷ್ಠತೆ ಮೂಲಕ ಗಮನ ಸೆಳೆದರು.

ತಾಂಡವಪುರ ಎಂಐಟಿ ತಂಡದ ಸಮಗ್ರ ಪ್ರದರ್ಶನ ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ತಿರುಪತಿ ಐಐಟಿನಿರ್ದೇಶಕ ಪ್ರೊ.ಕಾಳಿದಿಂಡಿ ಎನ್.ಸತ್ಯನಾರಾಯಣ ನೇತೃತ್ವದಲ್ಲಿ ಮೈಸೂರು ಎಂಇಟಿ(ಮಹಾರಾಜ ಎಜುಕೇಷನ್ ಟ್ರಸ್ಟ್)ಯ ಜಂಟಿ ಕಾರ್ಯದರ್ಶಿ ಡಾ.ಹೆಚ್.ಕೆ.ಚೇತನ್‌ಕುಮಾರ್ ಹಾಗೂ ಪಲ್ಸ್ ಇಸಿ ಸದಸ್ಯೆ ಡಾ.ರಂಜಿತ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಪಲ್ಸ್‌ನ ಸಹ–ಅಧ್ಯಕ್ಷೆ ವಿಜಯಲಕ್ಷ್ಮಿ ಶಂಕರ್, ಪಲ್ಸ್ ಚಾಂಪಿಯನ್ ಕಿರಣ್ ಎಂ.ಮೂರ್ತಿ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡರ ನಿರಂತರ ಬೆಂಬಲ ಹಾಗೂ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಎಂಐಟಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯಸಭಾ, ವಿಧಾನಪರಿಷತ್ ಚುನಾವಣಾ ಪ್ರಕ್ರಿಯೆ ಮೀರಿಸುವಂತೆ ನಡೆದ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ

ಶಾಸಕರ ಸ್ಪರ್ಧೆಯಿಂದ ಮಹತ್ವ ಪಡೆದಿದ್ದ ಚುನಾವಣಾ ಕಣ



ಮೈಸೂರಿನ ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದಲ್ಲಿ ಗುರುವಾರ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಮತ ಚಲಾಯಿಸಲು ಸರದಿ ಸಾಲಿನಲ್ಲಿ ನಿಂತಿರುವ ಮತದಾರರು.

ಮೈಸೂರು, ಜೂ.26(ಬಿಎಲ್‌ಯು)– ಪ್ರತಿಷ್ಠೆಯ ಕಣವಾಗಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ)ನ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಸಾರ್ವತ್ರಿಕ ಚುನಾವಣಾ ರಾಜಕಾರಣವನ್ನು ಮೀರಿಸುವಂತೆ ಇಂದು ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನಡೆಯಿತು.

ಮೈಸೂರಿನ ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ಮತದಾನ ನಡೆಯಿತು. ಬುಧವಾರ ಬೆಳಗ್ಗೆ 9 ಗಂಟೆಗೆ ಆರಂಭವಾದ ಮತದಾನ ಸಂಜೆ 4 ಗಂಟೆವರೆಗೆ ನಡೆಯಿತು.

ಈಗಾಗಲೇ ಯಳಂದೂರು ಕ್ಷೇತ್ರಕ್ಕೆ ಅವಿರೋಧ ಆಯ್ಕೆ ನಡೆದಿರುವ ಕಾರಣ 12 ಕ್ಷೇತ್ರಕ್ಕೆ ಇಂದು ಚುನಾವಣೆ ನಡೆಯಿತು. ನಾಲ್ವರು ಶಾಸಕರು ಸೇರಿದಂತೆ 29 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು.

ಮತದಾನ ಕೇಂದ್ರಕ್ಕೆ ಮತದಾರರು ಹಾಗೂ ಅಭ್ಯರ್ಥಿಗಳನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಮತ ಚಲಾಯಿಸಿದ ನಂತರ ಮತದಾರರು ಕಾಂಪೌಂಡ್ ಒಳಗೆ ನಿಲ್ಲದೆ ಹೊರಗೆ ಹೋಗಬೇಕಿತ್ತು.

ನಂಜರಾಜ ಬಹದ್ದೂರ್ ಛತ್ರದ ಹೊರಗೆ ಅಭ್ಯರ್ಥಿಗಳ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು. ನೂರಾರು ಸಂಖ್ಯೆಯಲ್ಲಿ ಅಭ್ಯರ್ಥಿಗಳ ಬೆಂಬಲಿಗರು ಸೇರಿದ್ದರು. ಬೆಳಗ್ಗೆಯಿಂದ ಸಂಜೆ ತನಕ ಯಾರು ಗೆಲ್ಲುತ್ತಾರೆ. ಯಾರು ಸೋಲುತ್ತಾರೆ ಎಂದು ಫಲಿತಾಂಶದ ಲೆಕ್ಕಾಚಾರ ಹಾಕುತ್ತಿದ್ದದ್ದು ಸಾಮಾನ್ಯವಾಗಿತ್ತು.

ಈ ಮೊದಲು ಸದ್ದು ಗದ್ದಲವಿಲ್ಲದೆ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನಡೆಯುತ್ತಿತ್ತು. ಚುನಾವಣೆ ನಡೆದು ಪತ್ರಿಕೆಗಳಲ್ಲಿ ಗೆದ್ದ ಅಭ್ಯರ್ಥಿಗಳ ಹೆಸರು ಮತ್ತು ಫೋಟೋ ನೋಡುತ್ತಿದ್ದ ಜನರು ಯಾವಾಗ ಚುನಾವಣೆ ನಡೆಯಿತು ಎಂದು ಅನುಮಾನದಿಂದ ಕೇಳುತ್ತಿದ್ದರು.

ಆದರೆ ಈ ಬಾರಿಯ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ಭಾರಿ ಸದ್ದು ಮಾಡಿದೆ. ಶಾಸಕರಾದ ಜಿ.ಡಿ.ಹರೀಶ್ ಗೌಡ, ಗಣೇಶ್ ಪ್ರಸಾದ್, ಪುಟ್ಟರಂಗ ಶೆಟ್ಟಿ, ಅನಿಲ್ ಚಿಕ್ಕಮಾದು ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವುದು ಚುನಾವಣೆ ಕಾವು ಪಡೆಯಲು ಪ್ರಮುಖ ಕಾರಣವಾಗಿದೆ.

ಪ್ರತಿಷ್ಠೆಯ ಕಣವಾಗಿರುವ ಈ ಚುನಾವಣೆಯಲ್ಲಿ ವ್ಯಕ್ತಿ ರಾಜಕಾರಣಕ್ಕಿಂತ ಪಕ್ಷ ರಾಜಕಾರಣ ಪ್ರಾಮುಖ್ಯತೆ ಪಡೆದಿದೆ. ಸಹಕಾರ ಚುನಾವಣೆ ರಾಜಕಾರಣದಿಂದ ಮುಕ್ತವಾಗಿರಬೇಕೆಂಬ ವಾದವಿದ್ದರೂ, ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿರುವ ಮತದಾರರು ತಮ್ಮ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಿ ಮತ ಹಾಕಿದ್ದಾರೆ ಎನ್ನಲಾಗಿದೆ.

ತಮ್ಮನ್ನು ಬೆಂಬಲಿಸುವ ಮತದಾರರನ್ನು ಅಭ್ಯರ್ಥಿಗಳು ವಾಹನಗಳಲ್ಲಿ ಕರೆತಂದಿದ್ದು ಇದನ್ನು ಸ್ಪಷ್ಟಪಡಿಸಿತು. ಶಾಸಕರು ಆಯ್ಕೆ ಮಾಡುವ ರಾಜ್ಯಸಭಾ ಹಾಗೂ ವಿಧಾನಪರಿಷತ್‌ಗೆ ಅಭ್ಯರ್ಥಿಗಳ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಮೀರಿಸುವಂತೆ ಚುನಾವಣೆ ನಡೆಯಿತು. ಇಂದು ಆಯ್ಕೆಯಾಗುವ ನೂತನ ನಿರ್ದೇಶಕರು ಎಂಸಿಡಿಸಿಸಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಲಿದ್ದಾರೆ.

ಪರಿಶಿಷ್ಟ ಜಾತಿಯ ಕುಲಶಾಸ್ತ್ರೀಯ ಅಧ್ಯಯನ ಬಳಿಕ ಒಳ ಮೀಸಲಾತಿ ದತ್ತಾಂಶ ಬಿಡುಗಡೆ ಮಾಡಿ

ಸಿಎಂ ಸಿದ್ದರಾಮಯ್ಯಗೆ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್ ಮನವಿ



ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್, ಪರಿಶಿಷ್ಟ ಜಾತಿಯಲ್ಲಿರುವ ಎಲ್ಲಾ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಿದ ನಂತರ ಒಳ ಮೀಸಲಾತಿ ಸಮೀಕ್ಷೆ ನಡೆಸಿ ದತ್ತಾಂಶ ಬಿಡುಗಡೆ ಮಾಡಬೇಕೆಂದು ಮನವಿ ಸಲ್ಲಿಸಿದರು.

ಮೈಸೂರು, ಜೂ.26(ಬಿಎಲ್‌ಯು)– ಪರಿಶಿಷ್ಟ ಜಾತಿಯಲ್ಲಿರುವ ಎಲ್ಲಾ ಸಮುದಾಯಗಳ ಕುಲಶಾಸ್ತ್ರೀಯದ ಬಗ್ಗೆ ಅಧ್ಯಯನ ನಡೆಸಿದ ನಂತರ ಒಳ ಮೀಸಲಾತಿಯ ಸಮೀಕ್ಷೆ ದತ್ತಾಂಶ ಬಿಡುಗಡೆ ಮಾಡುವಂತೆ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಲಿಖಿತ ಮನವಿ ಸಲ್ಲಿಸಿದ ಭಾಸ್ಕರ್, ಪರಿಶಿಷ್ಟ ಜಾತಿಯಲ್ಲಿರುವ ಆದಿ ಕರ್ನಾಟಕ, ಆದಿ ಆಂಧ್ರ ಮತ್ತು ಆದಿ ದ್ರಾವಿಡ ಎಂಬ ಮೂರು ಗುಂಪುಗಳ ಜಾತಿ ವಿಂಗಡನೆ ಮಾಡಿ ಸಮೀಕ್ಷೆ ನಡೆಸಿ ದತ್ತಾಂಶ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ನ್ಯಾಯಮೂರ್ತಿ ಡಾ.ಹೆಚ್.ಎನ್.ನಾಗಮೋಹನ್ ದಾಸ್ ಏಕ ಸದಸ್ಯ ಆಯೋಗ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ದತ್ತಾಂಶವನ್ನು ಸಂಗ್ರಹಿಸುತ್ತಿದೆ. ಆದರೆ ಪರಿಶಿಷ್ಟ ಜಾತಿಯಲ್ಲಿರುವ ಹಲವು ಜಾತಿಗಳು ತಮ್ಮ ಮೂಲ ಹೆಸರಿನಿಂದ ಜಾತಿ ಪ್ರಮಾಣ ಪತ್ರ ಪಡೆಯದೆ ಆದಿ ಕರ್ನಾಟಕ, ಆದಿ ಆಂಧ್ರ ಮತ್ತು ಆದಿ ದ್ರಾವಿಡ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆದಿವೆ ಎಂದು ವಿವರಿಸಿದ್ದಾರೆ.

ಆಯೋಗ ಕುಲಶಾಸ್ತ್ರೀಯ ಅಧ್ಯಯನ ನಡೆಸದೆ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ದತ್ತಾಂಶ ಸಂಗ್ರಹಿಸಿ ಅದರ ಆಧಾರದ ಮೇಲೆ ವರ್ಗೀಕರಣ ಮಾಡಲು ಮುಂದಾಗಿರುವುದು ಅಸಂಬದ್ಧವಾಗಿದೆ ಎಂದು ಭಾಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಬೇಡ ಜಂಗಮ ಮತ್ತು ಬುಡ್ಗಾ ಜಂಗಮ ಎಂಬ ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದು, ಜಾತಿ ಹೆಸರಿನಲ್ಲಿ ವೀರಶೈವ ಜಂಗಮ ಜಾತಿಯವರು ಎಂದು ನಕಲಿ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ವಾಸ್ತವದಲ್ಲಿ ಬೇಡ ಜಂಗಮ ಮತ್ತು ಬುಡ್ಗಾ ಜಂಗಮ ಜಾತಿಯ ಜನಸಂಖ್ಯೆ ಕಡಿಮೆ ಇದ್ದು, ಇತ್ತೀಚಿನ ದಿನಗಳಲ್ಲಿ ಈ ಎರಡು ಸಮುದಾಯಗಳ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರದ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಈ ಎಲ್ಲಾ ಗೊಂದಲಗಳ ನಿವಾರಣೆಗಾಗಿ ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ಕುಲಶಾಸ್ತ್ರೀಯ ಅಧ್ಯಯನ ಮಾಡಿ ಅದರ ಆಧಾರದ ಮೇಲೆ ಎಡ ಮತ್ತು ಬಲ ಪಂಗಡಗಳ ವರ್ಗೀಕರಣ ಮಾಡಿ ನಂತರ ಸಮೀಕ್ಷೆ ಮಾಡಬೇಕೆಂದು ಭಾಸ್ಕರ್, ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು. ಇದೇ ವೇಳೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಆಯೋಗದ ಸಲಹೆಗಾರ ದಯಾನಂದ್ ನಾಯಕ್ ಹಾಗೂ ಬಿ.ಎಸ್. ಹೀರೇಮಠ್ ಅವರಿಗೂ ಮನವಿ ಸಲ್ಲಿಸಿದರು. ಡಿಸಿಸಿ ಕಾನೂನು ವಿಭಾಗದ ಅಧ್ಯಕ್ಷ ಎ.ಆರ್.ಕಾಂತರಾಜು, ಸಮಿತಿಯ ಮೈಸೂರು ನಗರಾಧ್ಯಕ್ಷ ಜೆ.ಪ್ರಭು, ಮುಖಂಡರಾದ ಸೂರ್ಯದೇವ್ ಈ ವೇಳೆ ಹಾಜರಿದ್ದರು.

ಜೂ.30, ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.26– ರಾಜೀವ್‌ನಗರ ಮತ್ತು ದೇವನೂರು ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಜೂ.30ರ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO –55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಬಿ.ಡಿ ಕಾಲೋನಿ, ಅಜೀಜ್ ಸೇಠ್ ನಗರ, 320 ಮನೆ, ಕೆಸರಿ ಕಾಲೋನಿ, ಮಹದೇವಪುರ ಮುಖ್ಯ ರಸ್ತೆ, ಶಕ್ತಿನಗರ, ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ, ಅಕ್ಷಯ ಭಂಡಾರ್, ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರ ಹುಂಡಿ, ನೆಹರು ನಗರ, ಸಾತಗಳ್ಳಿ, ಡಿ.ಟಿ.ಎಸ್ ರಾವ್ ನಗರ, ವಿ.ಟಿ.ಯೂ ಕಾಲೇಜು ಎದುರು, ಸನ್ ಫ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯೂ ಕಾಲೇಜು, ಭಾರತ್ ನಗರ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹೃದಯಾಘಾತಕ್ಕೆ 22 ವರ್ಷದ ಸುಪ್ರಿಯಾ ಬಲಿ; ತಿಂಗಳಲ್ಲಿ ಹಾಸನದ 15 ಮಂದಿ ಸಾವು!



ಹಾಸನ,ಜೂ.26–ಹಾಸನದಲ್ಲಿ ಹೃದಯಾಘಾತಕ್ಕೆ ಮತ್ತೋರ್ವ ಯುವತಿ ಬಲಿಯಾಗಿದ್ದಾಳೆ. ಕಳೆದ 1 ತಿಂಗಳಲ್ಲಿ ಹಾಸನದಲ್ಲೇ 15 ಮಂದಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಕಟ್ಟಳ್ಳಿಯಲ್ಲಿ 22 ವರ್ಷದ ಪದವೀಧರೆ ಸುಪ್ರಿಯಾ ಹೃದಯಾಘಾತಕ್ಕೆ ಬಲಿಯಾಗಿದ್ದಾಳೆ. ಕಟ್ಟಳ್ಳಿ ಕೃಷ್ಣಮೂರ್ತಿ–ರೂಪ ದಂಪತಿಯ ಪುತ್ರಿ ಸುಪ್ರಿಯಾ ಬೆಂಗಳೂರಿನ ಬ್ಯಾಟರಾಯನಪುರದಲ್ಲಿ ವಾಸವಿದ್ದು ಮುಕ್ತ ವಿವಿಯಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದಳು. ಸುಪ್ರಿಯಾ ವಿದ್ಯಾಭ್ಯಾಸದ ಜೊತೆಗೆ ಕೆಲಸ ಮಾಡುತ್ತಿದ್ದಳು. ನಿನ್ನೆ ಸುಪ್ರಿಯಾಗೆ ಎದೆನೋವು ಕಾಣಿಸಿಕೊಂಡಿದ್ದು ಪೋಷಕರಿಗೆ ತಿಳಿಸಿದ್ದಾಳೆ. ಪೋಷಕರು ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ ಅಷ್ಟರಲ್ಲಾಗಲೇ ಸುಪ್ರಿಯಾ ಸಾವನ್ನಪ್ಪಿದ್ದಾಳೆ.

ಕೆಂಪೇಗೌಡರು ಒಂದು ಜಾತಿ, ಊರಿಗೆ ಸೀಮಿತವಲ್ಲ: ಬಿಜೆವಿ



ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ಹಲವರು ಸ್ವಯಂಪ್ರೇರಿತ ರಕ್ತದಾನ ಮಾಡಿದರು.

ಮೈಸೂರು, ಜೂ.26–ಕೆಂಪೇಗೌಡರು ಒಂದು ಸಮುದಾಯಕ್ಕೆ ಮತ್ತು ಧರ್ಮಕ್ಕೆ ಮಾತ್ರ ಸೀಮಿತವಾಗದೆ, ಇಡೀ ಸಮಾಜವನ್ನು ಅಭಿವೃದ್ಧಿ ದೃಷ್ಟಿಯಿಂದ ಮುನ್ನಡೆಸಿದವರು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ಹೇಳಿದರು.

ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಸಿಹಿ ವಿತರಿಸಿ, 35 ಜನ ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಕೆಂಪೇಗೌಡರು ಒಕ್ಕಲಿಗ ಸಮುದಾಯದ ಪ್ರಭುಗಳಾಗಿದ್ದರೂ ಒಂದೇ ಸಮುದಾಯಕ್ಕೆ ಸೀಮಿತವಾದವರಲ್ಲ ಎಂಬುದಕ್ಕೆ ಅವರು ಕಟ್ಟಿದ ಬೆಂಗಳೂರು ನಗರವೇ ಸಾಕ್ಷಿ. ಪ್ರತಿಯೊಂದು ಸಮುದಾಯದ ಜನರಿಗೂ ಒಂದೊಂದು ಕೇರಿಯನ್ನು ಸಮುದಾಯದ ಹೆಸರಿನಲ್ಲೇ ಕಟ್ಟಿಕೊಟಿದ್ದಾರೆ. ಕೆಂಪೇಗೌಡ ಅವರು ನಡೆಸಿದ ರಾಜಾಡಳಿತ ಇತರ ರಾಜರಿಗೆ ಮಾದರಿಯಾಗಿದ್ದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು. ಇಂತಹ ಮಹಾನ್ ನಾಯಕ ನೆಲೆಸಿದ ನಾಡಿನಲ್ಲಿ ಬದುಕುತ್ತಿರುವ ನಾವುಗಳೇ ಪುಣ್ಯವಂತರು ಎಂದು ಸ್ಮರಿಸಿದರು.

ಪ್ರದೇಶ ಕುರುಬರ ಸಂಘದ ನಿಕಟ ಪೂರ್ವ ರಾಜ್ಯ ಅಧ್ಯಕ್ಷ ಸುಬ್ಬಣ್ಣ ಮಾತನಾಡಿ, ಇಂದಿನ ಬೆಂಗಳೂರು ದೇಶ ವಿದೇಶಿಗರಿಗೆ ರಸ್ತೆಬದಿಯಿಂದ ಮಾಲ್‌ವರೆಗೂ ಆಶ್ರಯ ನೀಡಿದೆ ಎಂದರೆ ಸುಮಾರು 500 ವರ್ಷಗಳ ಹಿಂದೆ ಬೆಂಗಳೂರನ್ನು ನಿರ್ಮಿಸಿದ ಕೆಂಪೇಗೌಡರ ಶ್ರಮ ಹಾಗೂ ಕೊಡುಗೆ ಅಪಾರ. ಒಂದು ಕೆರೆಯಿಂದ ಇನ್ನೊಂದು ಕೆರೆಗೆ ನೀರು ಹರಿಯುವಂತೆ ರಾಜಕಾಲುವೆಗಳನ್ನು ನಿರ್ಮಿಸಿದ್ದರು. ಕನ್ನಡ ಭಾಷಾ ಮತ್ತು ಸ್ವದೇಶಿ ಉತ್ಪನ್ನ ರೈತಾಪಿ ಸಮುದಾಯಕ್ಕೆ ಪ್ರೋತ್ಸಾಹ ನೀಡಿದ್ದವರು ಕೆಂಪೇಗೌಡರು ಎಂದರು.

ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಮೈಸೂರು ನಗರದಲ್ಲಿ ನಾಳೆ ನಡೆಯುವ ಕೆಂಪೇಗೌಡರ ಜಯಂತಿಯಲ್ಲಿ ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಭಾಗಿಯಾಗೋಣ ಎಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ರಾಘವೇಂದ್ರ, ಡಿಸಿಸಿ ಚಂದ್ರು, ಕರ್ನಾಟಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಪಂಚಾಯತ್‌ರಾಜ್ ಕಾರ್ಯದರ್ಶಿ ಲೋಕೇಶ್, ಎಪಿ ಎಂಸಿ ರಾಮಚಂದ್ರ, 41ನೇ ವಾರ್ಡ್ ಅಧ್ಯಕ್ಷ ನಂಜುಂಡಸ್ವಾಮಿ, 23ನೇ ವಾರ್ಡ್ ಮುಖಂಡ ರವಿಚಂದ್ರ, ರಾಹುಲ್, ಸೇವಾದಳ ಮೋಹನ್, ನಿತೀಶ್‌ಕುಮಾರ್, ಎಸ್.ಎನ್. ರಾಜೇಶ್, ಹರೀಶ್‌ನಾಯ್ಡು, ಮೋಹನ್ ಕುಮಾರ್ ಇನ್ನಿತರರು ಹಾಜರಿದ್ದರು.

ರಾಜ್ಯದಲ್ಲಿ 6ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಕಲಿಕೆಗೆ ಖಾನ್ ಅಕಾಡೆಮಿ

ಇಂಡಿಯಾ ಸಹಯೋಗದಲ್ಲಿ 'ಜ್ಞಾನ ಸೇತು' ಕಾರ್ಯಕ್ರಮ ಅನುಷ್ಠಾನ



ಬೆಂಗಳೂರು, ಜೂ.26(ಕೆಎಂಶಿ)–ರಾಜ್ಯ ಸರ್ಕಾರಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ 6ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಡಿಜಿಟಲ್ ಕಲಿಕೆ ಒದಗಿಸಲು ಖಾನ್ ಅಕಾಡೆಮಿ ಇಂಡಿಯಾ ಸಹಯೋಗದಲ್ಲಿ 'ಜ್ಞಾನಸೇತು' ಕಾರ್ಯಕ್ರಮ ಅನುಷ್ಠಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಅಕಾಡೆಮಿ ಲಾಭರಹಿತ ಸಂಸ್ಥೆಯಾಗಿದ್ದು, ವಿದ್ಯಾರ್ಥಿಗಳಿಗೆ ಉಚಿತವಾಗಿ ವಿಶ್ವದರ್ಜೆ ಶಿಕ್ಷಣ ಒದಗಿಸಲಿದೆ. ಎನ್‌ಸಿಇಆರ್‌ಟಿ ಪಠ್ಯಕ್ರಮ ಆಧಾರಿತ 1ರಿಂದ 10ನೇ ತರಗತಿ ಹಾಗೂ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿಷಯಗಳು ಉಚಿತವಾಗಿ ಲಭ್ಯವಿರುತ್ತವೆ. 6ರಿಂದ 10ನೇ ತರಗತಿ ಹಾಗೂ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರು, ಉಪನ್ಯಾಸಕರಿಗೆ ಸಂಪೂರ್ಣ ಉಚಿತವಾಗಿ ಖಾನ್‌ಮಿಗೋ ಕೃತಕ ಬುದ್ಧಿಮತ್ತೆ (ಎಐ) ನೀಡಲಾಗುವುದು, ಇದು ಪಾಠ ಯೋಜನೆ, ಪ್ರಶ್ನೆ ಪತ್ರಿಕೆ ಮತ್ತು ರಸಪ್ರಶ್ನೆ ಸಿದ್ಧಪಡಿಸಲು ನೆರವಾಗಲಿದೆ. ಅಲ್ಲದೆ, 8, 9 ಮತ್ತು 10ನೇ ತರಗತಿ ಹಾಗೂ ಪ್ರಥಮ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಖಾನ್‌ಮಿಗೊ ಕೃತಕ ಬುದ್ಧಿಮತ್ತೆ ತರಗತಿಗಳಲ್ಲಿ ಸ್ವಯಂ ಕಲಿಕೆಯ ಮೂಲಕ ಉತ್ತಮ ಪ್ರಗತಿ ಹೊಂದುವಲ್ಲಿ ನೆರವಾಗಲಿದೆ.

ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಕಲೆ ಮತ್ತು ಗಣಿತ ವಿಷಯಗಳಿಗೆ ಪ್ರತಿ ಶನಿವಾರ ಒಂದು ಬೋಧನಾ ಅವಧಿ ನಿಗದಿಪಡಿಸಲಾಗುತ್ತದೆ. ಸಿಇಟಿ, ಜೆಇಇ, ನೀಟ್, ಕ್ಲಾಟ್, ಕ್ಯುಇಟಿ ಮತ್ತು ಸಿಎ ಪ್ರವೇಶ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಅಕಾಡೆಮಿಯ ಅಭ್ಯಾಸ ಮಾದರಿ, ಪರಿಕಲ್ಪನಾ ವಿಡಿಯೊ ಮತ್ತು ಪರೀಕ್ಷಾ ಉಪಕರಣಗಳನ್ನು ಬಳಸಲಾಗುತ್ತದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 21,726 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ 6ರಿಂದ 8ನೇ ತರಗತಿ, 4,871 ಸರ್ಕಾರಿ ಪ್ರೌಢಶಾಲೆಗಳ 8ರಿಂದ 10ನೇ ತರಗತಿಗಳಲ್ಲಿ ಮತ್ತು 1,229 ಸರ್ಕಾರಿ ಪದವಿಪೂರ್ವ ಕಾಲೇಜುಗಳ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದ್ದು, 19,05,025 ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.

ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕಾರ್ಯಾಗಾರ ಮತ್ತು ವೆಬಿನಾರ್‌ಗಳ ಮೂಲಕ ಡಿಜಿಟಲ್ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಕುರಿತು ತರಬೇತಿ ನೀಡುವುದು ಹಾಗೂ ಪ್ರತಿ ಬ್ಲಾಕ್‌ನಲ್ಲಿ ಡಿಜಿಟಲ್ ಮೆಂಟರ್‌ಗಳ ನಿಯೋಜನೆ ಮಾಡಲಾಗುತ್ತದೆ, 540.10 ಲಕ್ಷ ರೂ. ಅನುದಾನದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ. ಸಮಗ್ರ ಶಿಕ್ಷಣ ಕರ್ನಾಟಕ ಯೋಜನಾ ನಿರ್ದೇಶಕರು, ಯೋಜನೆಯ ಮೇಲುಸ್ತುವಾರಿ ಪ್ರಾಧಿಕಾರವಾಗಿ ಮತ್ತು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಿರ್ದೇಶಕರು ಅನುಷ್ಠಾನಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕೃತ ಜಾಲತಾಣದಲ್ಲಿ ಕಡ್ಡಾಯವಾಗಿ ಪ್ರಕಟಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.